# ಕರ್ನಾಟಕ ವಿಕಾಸ

KARNATAKA VIKAS

ಜನವರಿ JANUARY - 2013



ಎನ್‌ಆರ್‌ಎಲ್‌ಎಂ (ಸಂಜೀವಿನಿ) ಸಂಸ್ಥೆಯ ಚಟುವಟಿಕೆಗಳ ಕಾರ್ಯಾಗಾರ

ಹೊಸ ವರ್ಷ 2013ರ ಹಾರ್ದಿಕ ಶುಭಾಶಯಗಳು

# ಕರ್ನಾಟಕ ವಿಕಾಸ

# 2013

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಜನವರಿ 2013

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 ● | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 ○ | 28 | 29 | 30 | 31 | | |

1 ಹೊಸ ವರ್ಷ
12 ಎರಡನೇ ಶನಿವಾರ
14 ಮಕರ ಸಂಕ್ರಾಂತಿ
25 ಈದ್-ಮಿಲಾದ್
26 ಗಣರಾಜ್ಯೋತ್ಸವ

## ಫೆಬ್ರವರಿ 2013

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 ● | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 ○ | 26 | 27 | 28 | | |

9 ಎರಡನೇ ಶನಿವಾರ
19 ಮಧ್ವನವಮಿ

## ಮಾರ್ಚಿ 2013

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 ● | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 ○ | 28 | 29 | 30 |

9 ಎರಡನೇ ಶನಿವಾರ
10 ಮಹಾಶಿವರಾತ್ರಿ
26 ಹೋಳಿ
29 ಗುಡ್ ಫ್ರೈಡೆ
30 ಹೋಳಿ ಶನಿವಾರ

## ಏಪ್ರಿಲ್ 2013

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 ● | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 ○ | 26 | 27 |
| 28 | 29 | 30 | | | | |

11 ಯುಗಾದಿ
13 ಎರಡನೇ ಶನಿವಾರ
14 ಅಂಬೇಡ್ಕರ್ ಜಯಂತಿ
15 ದೇವರ ದಾಸಿಮಯ್ಯ ಜಯಂತಿ
19 ಶ್ರೀ ರಾಮ ನವಮಿ
23 ಮಹಾವೀರ ಜಯಂತಿ

## ಮೇ 2013

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 ● | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 ○ |
| 26 | 27 | 28 | 29 | 30 | 31 | |

1 ಕಾರ್ಮಿಕ ದಿನಾಚರಣೆ
11 ಎರಡನೇ ಶನಿವಾರ
13 ಬಸವ ಜಯಂತಿ
14 ರಾಮಾನುಜಾಚಾರ್ಯ ಜಯಂತಿ
15 ಶಂಕರಚಾರ್ಯ ಜಯಂತಿ
25 ಬುದ್ಧ ಪೂರ್ಣಿಮ

## ಜೂನ್ 2013

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 ● |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 ○ | 24 | 25 | 26 | 27 | 28 | 29 |

8 ಎರಡನೇ ಶನಿವಾರ
25 ಷಬ್-ಎ-ಬರಾತ್

ಅಮಾವಾಸ್ಯೆ ● ಹುಣ್ಣಿಮೆ ○

# ಕರ್ನಾಟಕವಿಕಾಸ
KARNATAKA VIKAS

ಜನವರಿ
JANUARY
2013

ಸಂಪುಟ : 54
VOLUME
ಸಂಚಿಕೆ : 02
ISSUE : 02


## ಈ ಸಂಚಿಕೆಯೊಳಗೆ


5 ಸಚಿವಾಲಯದಿಂದ ಸಂದೇಶ -ಡಾ॥ ಇ.ವಿ. ರಮಣ ರೆಡ್ಡಿ

7 ವಿಶೇಷ ಅಭಿವೃದ್ಧಿ ಯೋಜನೆ

9 ಮುಖಪುಟ ಲೇಖನ

11 ಬದುಕುವ ಮಾತು - ಡಾ॥ ಪಾಟೀಲ ಪುಟ್ಟಪ್ಪ

12 ಕವಿಯ(ಕ್ಷ) ಪ್ರಶ್ನೆಗಳು - ಉದಯಕುಮಾರ್ ಎಂ. ಬಿ.

13 ಕಾವ್ಯ ವಿಕಾಸ - ಶ್ರೀಕಲಾ ಪೇತ್ರಿ

14 ಯಶೋಗಾಥೆಗಳು - ಎಂ. ರವೀಂದ್ರನಾಥ

19 ಲೇಖನಗಳು - ದಿನೇಶ್‌ಪೀಣ
-ಡಾ. ಆರ್. ಶಂಕರಪ್ಪ
-ಡಾ. ಪಿ. ರಮೇಶ್
- ಹೆಚ್. ನಾಗರಾಜ್
- ನಾಗರಾಜ್ ಪಟ್ಟೇದ್

33 ಆರೋಗ್ಯ - ಡಾ॥ ವಾಮನ್‌ರಾವ್

35 ಸುತ್ತೋಲೆಗಳು






ಪ್ರಕಾಶಕರು
**ಪಿ. ಕುಮಾರ್**
ನಿರ್ದೇಶಕರು (ಪಂ. ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು ಸುವರ್ಣ ಗ್ರಾಮೋದಯ
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಸಂಪಾದಕರು ಸಾರ್ವಜನಿಕ
ಸಂಪರ್ಕಾಧಿಕಾರಿಗಳು
**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ॥ ಎಂ.ಎಸ್. ಮಂಜುನಾಥ**
**ನಾಗರಾಜ್ ಬಿ.ವಾಗಾ**

**ವಾರ್ಷಿಕ ಚಂದಾ :**
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ. 60/–
ಬಿಡಿ ಪ್ರತಿ ರೂ. 5/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

**ಕಚೇರಿ ವಿಳಾಸ**
ಮುಖ್ಯ ಸಂಪಾದಕರು, 'ಕರ್ನಾಟಕ ವಿಕಾಸ'
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1
ಬಹುಮಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು–560 001.
ದೂರವಾಣಿ : (080) 22353857
www.rdpr.kar.nic.in
email : kvrdpr@gmail.com


**ವಿಶೇಷ ಸೂಚನೆ**
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

ಪತ್ರಿಕೆ ಕುರಿತು

ನಿಮ್ಮನುಡಿ

**ಮಾನ್ಯರೆ,**

ಕರ್ನಾಟಕ ವಿಕಾಸ ಪತ್ರಿಕೆಯು ಗ್ರಾಮೀಣ ಜನತೆಯ ಅಚ್ಚುಮೆಚ್ಚಿನ ಪತ್ರಿಕೆಯಾಗಿದೆ. ಡಿಸೆಂಬರ್ ಮಾಹೆಯ ಪತ್ರಿಕೆಯು ಸುಂದರವಾದ ಮುಖಪುಟದೊಂದಿಗೆ ಮುದ್ರಣಗೊಂಡು ಎಲ್ಲರ ಮನಸೆಳೆಯುತ್ತಿದೆ. ಸಮೃದ್ಧಿಯ ಕಡೆಗೆ ಸ್ವಾಭಿಮಾನದ ನಡಿಗೆ ಎಂಬ ಉಕ್ತಿಯು ಮುಖಪುಟಕ್ಕೆ ತುಂಬ ಅನ್ವರ್ಥವಾಗಿದೆ. ಪತ್ರಿಕೆಯಲ್ಲಿ ಪ್ರಕಟವಾದ "ಸ್ವಾವಲಂಬಿ ಹಾಗೂ ಸಮೃದ್ಧಿಗಾಗಿ ಸ್ವಯಂ ಉದ್ಯೋಗದತ್ತ....." ಎಂಬ ಸಚಿವಾಲಯದ ಸಂದೇಶವು ಕಾರ್ಯದರ್ಶಿಗಳಿಗೆ ಗ್ರಾಮೀಣ ಜನತೆಯ ಬಗ್ಗೆ ಇರುವ ಕಾಳಜಿ ಎತ್ತಿ ತೋರಿಸುತ್ತದೆ. ಇದಲ್ಲದೆ ಪ್ರತಿ ಮಾಹೆ ಬದುಕುವ ಮಾತು ಅಂಕಣದಲ್ಲಿ ಪ್ರಕಟವಾಗುವ ಡಾ॥ ಪಾಟೀಲ್ ಪುಟ್ಟಪ್ಪನವರ ಲೇಖನ ಎಲ್ಲರಿಗೂ ಮೆಚ್ಚುಗೆ ಪಡೆಯುವಂತಿದೆ.

**ಜನಾರ್ಧನ್ ಪಟೇಗಾರ್, ಜಿವೇಶ್ವರ ನಗರ, ದೇವಮ್ಮನ ಗುಡಿಯ ಹತ್ತಿರ, ಶಹಾಪೂರ (ಅಂಚೆ & ತಾಲ್ಲೂಕು), ಯಾದಗಿರಿ ಜಿಲ್ಲೆ.**



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹೊರ ಬರುತ್ತಿರುವ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಸಂಗ್ರಹಾಯೋಗ್ಯವಾದ ಸಂಚಿಕೆಯಾಗಿದೆ. ಇಲಾಖೆಯಲ್ಲಿ ಅನುಷ್ಠಾನ ಗೊಳಿಸುತ್ತಿರುವ ವಿವಿಧ ಕಾರ್ಯಕ್ರಮಗಳ ಪರಿಚಯ ಚೆನ್ನಾಗಿ ಮೂಡಿಬರುತ್ತಿದೆ. ಇಂಥಹ ವಿಷಯಗಳು ಗ್ರಾಮೀಣ ಜನತೆಗೆ ತಲುಪಿಸುತ್ತಿರುವ ಪತ್ರಿಕೆಯು ಗ್ರಾಮೀಣ ಜನರ ಮೆಚ್ಚುಗೆ ಗಳಿಸಿದೆ. ಡಿಸೆಂಬರ್ 2012ರ ಮಾಹೆಯಲ್ಲಿ ಸ್ವಯಂ ಉದ್ಯೋಗ ಕಾರ್ಯಕ್ರಮಗಳ ಪರಿಚಯ ಸೊಗಸಾಗಿ ಎಲ್ಲರಿಗೂ ಅರ್ಥವಾಗುವ ಪರಿಯಲ್ಲಿ ಮೂಡಿಬಂದಿದೆ. ಜೊತೆಗೆ ಶ್ರೀ ಜಿ.ವೆಂಕಟೇಶ್ ಇವರ "ಸಕಾಲ" ಕವನವು ಸುಂದರವಾಗಿದೆ. ಇಂತಹ ಉತ್ತಮ ಪತ್ರಿಕೆಯನ್ನು ಹೊರತಂದ ಇಲಾಖೆ ಹಾಗೂ ಪತ್ರಿಕಾ ಬಳಗಕ್ಕೆ ಹೃತ್ಪೂರ್ವಕ ಅಭಿನಂದನೆಗಳು.

**ಎಸ್.ಉಮಾಶಂಕರ್, ಜೆ.ಪಿ.ನಗರ, ಬೆಂಗಳೂರು.**

ಡಿಸೆಂಬರ್ 2012ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಅಣ್ಣೇಶ್ವರ ಗ್ರಾಮ ಪಂಚಾಯತಿಯ ಯಶೋಗಾಥೆ ಸುಂದರವಾಗಿ ಮೂಡಿಬಂದಿದೆ. ಸದರಿ ಗ್ರಾಮ ಪಂಚಾಯತಿಯು ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ರೂಪಿಸಿದ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಮಾಡಿ ಗ್ರಾಮವು ಸ್ವಚ್ಛ, ಸುಂದರವಾಗಿಡಲು ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯ ಕರ್ತವ್ಯ ಪ್ರಜ್ಞೆ ಮೆಚ್ಚತಕ್ಕ ವಿಷಯವಾಗಿದೆ. ಸ್ವಚ್ಛವಾದ ಗ್ರಾಮವು ಆರೋಗ್ಯವಂತ ಗ್ರಾಮವಾಗಿರುವುದೆಂದು ಅಣ್ಣೇಶ್ವರ ಗ್ರಾಮ ಪಂಚಾಯತಿಯ ಅಧಿಕಾರಿಗಳು ತೋರಿಸಿಕೊಟ್ಟಿದ್ದಾರೆ. ಸದರಿ ಗ್ರಾಮ ಪಂಚಾಯತಿಯ ಸಾಧನೆಯು ಇತರರಿಗೆ ಮಾದರಿಯಾಗಿದೆ. ಇಂತಹ ಇನ್ನೂ ಅನೇಕ ಬೆಳಕಿಗೆ ಬಾರದ ಗ್ರಾಮ ಪಂಚಾಯತಿಗಳ ಕುರಿತು ಪ್ರಕಟಿಸಲು ವಿನಂತಿ.

**ಸರೋಜದೇವಿ. ವಿಜಯನಗರ ಮೈಸೂರು.**

ಟಿ. ನಿಂಗಯ್ಯ ಇವರು ಬರೆದ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹೆಣ್ಣೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಗಂಟೆ ಪಾಳ್ಯದಲ್ಲಿ ಸ್ಥಾಪಿಸಿರುವ ನರಸಿಂಹಸ್ವಾಮಿ ಸ್ವಸಹಾಯ ಸಂಘದ ಸಾಧನೆಯು ಎಲ್ಲರ ಗಮನ ಸೆಳೆಯುತ್ತದೆ. ಸದಸ್ಯರು, ಜನರು ಮತ್ತು ಅಧಿಕಾರಿಗಳು ಎಲ್ಲರೂ ಒಗ್ಗೂಡಿ ಕೆಲಸ ನಿರ್ವಹಿಸಿದರೆ ಅಸಾಧ್ಯವಾದುದನ್ನು ಸುಲಭದಲ್ಲಿ ಸಾಧಿಸಬಹುದು ಎಂದು ತೋರಿಸಿಕೊಟ್ಟಿದ್ದಾರೆ. ಮಕ್ಕಳ ಗ್ರಾಮ ಸಭೆಯ ಮಹತ್ವ ಮತ್ತು ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ವಿಸ್ತಾರವಾಗಿ ಮನಮುಟ್ಟುವಂತೆ ತಿಳಿಸಿದ್ದಾರೆ. ಒಟ್ಟಿನಲ್ಲಿ ಪತ್ರಿಕೆಯು ಗ್ರಾಮೀಣ ಜನಪರ ಆಶೋತ್ರಗಳಿಗೆ ನೀರೆರೆಯುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಿರಲಿ ಎಂದು ಆಶಿಸುತ್ತೇನೆ.

**ರಮಾಕಾಂತ, ಕೋಲಾರ.**

## ಸಚಿವಾಲಯದಿಂದ ಸಂದೇಶ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ ಬೆಂಗಳೂರು.



**ಡಾ. ಇ.ವಿ. ರಮಣ ರೆಡ್ಡಿ.** ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾ. ಮತ್ತು ಪಂ. ರಾಜ್ ಇಲಾಖೆ

ಪ್ರಿಯ ಬಂಧುಗಳೇ,

ಅಭಿವೃದ್ಧಿ ಎನ್ನುವುದು ಒಂದು ನಿರಂತರ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಮನುಷ್ಯ ಉತ್ತಮವಾಗಿ ಬದುಕಲು ಬೇಕಾಗಿರುವ ವ್ಯವಸ್ಥೆಯನ್ನು ಕಟ್ಟಿಕೊಳ್ಳಲು ಅವಕಾಶವಿರಬೇಕು. ಒಂದು ಅಭಿವೃದ್ಧಿ ಹೊಂದಿದ ಸಮಾಜದಲ್ಲಿ ಮನುಷ್ಯನಿಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳಾದ ಮನೆ, ನೀರು, ವಿದ್ಯುತ್, ಶಾಲೆ ಹಾಗೂ ಆದಾಯ ಮತ್ತು ಉತ್ಪಾದನೆ ಸಾಮರ್ಥ್ಯ ಹೆಚ್ಚಿಸಿಕೊಳ್ಳುವುದರ ಮೂಲಕ ದೇಶದ ಅಭಿವೃದ್ಧಿಯನ್ನು ಕಾಣಬಹುದಾಗಿರುತ್ತದೆ.

ರಾಜ್ಯದ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯನ್ನು ಕುರಿತಂತೆ ಅಧ್ಯಯನ ಮಾಡಿ ಅದರ ಪರಿಹಾರಕ್ಕೆ ಸಲಹೆ–ಸೂಚನೆ ನೀಡುವ ಸಲುವಾಗಿ ಉನ್ನತಾಧಿಕಾರ ಸಮಿತಿಯೊಂದನ್ನು ಡಾ.ಡಿ.ಎಂ. ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 3, 2000ರಲ್ಲಿ ಸರ್ಕಾರವು ನೇಮಿಸಿತು. ಈ ಸಮಿತಿಯು ತನ್ನ ವರದಿಯನ್ನು ಜೂನ್ 25,2002ರಲ್ಲಿ ಸರ್ಕಾರಕ್ಕೆ ಸಲ್ಲಿಸಿ ಹಲವಾರು ಶಿಫಾರಸು ಹಾಗು ಸಲಹೆಗಳನ್ನು ನೀಡಿದೆ.

ಕರ್ನಾಟಕ ಎರಡೂ ಭಾಗದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಲು ನಂಜುಂಡಪ್ಪ ಸಮಿತಿಯು 8 ವರ್ಷಗಳ ವಿಶೇಷ ಯೋಜನೆಯೊಂದನ್ನು ರೂಪಿಸಿ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಶಿಫಾರಸ್ಸು ಮಾಡಿದೆ.

ಹಿಂದುಳಿದ ಪ್ರದೇಶಗಳ ಅಭಿವೃದ್ಧಿ, ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಈಗಾಗಲೇ ಅನೇಕ ತಜ್ಞರು, ಸಂಘ ಸಂಸ್ಥೆಗಳು ಮತ್ತು ಸಮಿತಿಗಳು ತಮ್ಮ ಶಿಫಾರಸ್ಸನ್ನು ದಾಖಲಿಸಿವೆ. ಈ ನಿಟ್ಟಿನಲ್ಲಿ ಈ ಹಿಂದುಳಿದ ಪ್ರದೇಶಗಳನ್ನು ಸರ್ವತೋಮುಖ ಅಭಿವೃದ್ಧಿಪಡಿಸುವಸಲುವಾಗಿ ಸರ್ಕಾರ ಅದರಲ್ಲೂ ಪ್ರಮುಖವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನಿರಂತರವಾಗಿ ಹಲವಾರು ವಿದೇಶಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಯಶಸ್ವಿಗೊಳಿಸಲಾಗುತ್ತಿದೆ.

**ವಿಶೇಷ ಅಭಿವೃದ್ಧಿ ಯೋಜನೆಗಳು**

ವಿಶೇಷ ಅಭಿವೃದ್ಧಿ ಯೋಜನೆಯಡಿ ವರದಿ ಆಧಾರಿತ ಅತ್ಯಂತ ಹಿಂದುಳಿದ ಒಟ್ಟು 114 ತಾಲ್ಲೂಕುಗಳಿಗೆ ಶಾಶ್ವತ ಹಾಗೂ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಹಾಗೆಯೇ ಸಣ್ಣ ನೀರಾವರಿ ಕೆರೆಗಳ ಪುನಶ್ಚೇತನಕ್ಕಾಗಿ ಅನುದಾನ ಹಂಚಿಕೆ ಮಾಡಿ ಜನವಸತಿ ಪ್ರದೇಶಗಳ ಅಂತರ್ಜಲ ಮರುಪೂರಣದಿಂದ ಕುಡಿಯುವ ನೀರಿನ ಕಲುಷಿತತೆ ಸಮಸ್ಯೆಗೆ ಬಹುಮಟ್ಟಿಗೆ ಪರಿಹಾರ ಕಂಡುಕೊಳ್ಳಲಾಗಿದೆ. ಯೋಜನೆಯಡಿ ಹಿಂದುಳಿದ ತಾಲ್ಲೂಕುಗಳಲ್ಲಿ ಅಂಗನವಾಡಿ/ಪಂಚಾಯತಿ ಕಟ್ಟಡಗಳು, ಗೋಕಟ್ಟೆ, ಶೌಚಾಲಯ, ಕಿರು ಚರಂಡಿ, ರಸ್ತೆ, ನೀರಿನ ಕಿರು ಟ್ಯಾಂಕ್‌ಗಳ ದುರಸ್ತಿ ಮುಂತಾದ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅನುದಾನವನ್ನು ಒದಗಿಸಲಾಗುತ್ತಿದೆ.

ಸಮಿತಿಯ ಶಿಫಾರಸ್ಸಿನಂತೆ ಅಗತ್ಯ ಯೋಜನೆ/ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು ಹಿಂದುಳಿದ ಪ್ರದೇಶಗಳ ಆರ್ಥಿಕಾಭಿವೃದ್ಧಿಯೊಂದಿಗೆ ಗ್ರಾಮೀಣ ಜನರ ಜೀವನಮಟ್ಟವನ್ನು ಉತ್ತಮಪಡಿಸುವುದೇ ಇಲಾಖೆಯ ಮೂಲ ಉದ್ದೇಶವಾಗಿರುತ್ತದೆ. ಈ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಅಧಿಕಾರಿ/ಸಿಬ್ಬಂದಿ ವರ್ಗದವರೆಲ್ಲರೂ ಮತ್ತಷ್ಟು ಸೇವಾ ಮನೋಭಾವ ಹಾಗೂ ಕ್ರಿಯಾಶೀಲತೆಯೊಂದಿಗೆ ಕಾರ್ಯನಿರ್ವಹಿಸುವಂತಾಗಲಿ ಎಂದು ಆಶಿಸುತ್ತೇನೆ.

ಎಲ್ಲರಿಗೂ ಹೊಸ ವರ್ಷದ ಹಾಗೂ ಸಂಕ್ರಾಂತಿ ಹಬ್ಬದ ಶುಭಾಶಯಗಳು.

**(ಡಾ: ಇ.ವಿ. ರಮಣ ರೆಡ್ಡಿ)**




# ವಿಶೇಷ ಅಭಿವೃದ್ಧಿ ಯೋಜನೆಗಳು
# ಸಮಾನತೆಗಾಗಿ ದೃಢ ಹೆಜ್ಜೆಗಳು

ವಿಶೇಷ ಅಭಿವೃದ್ಧಿಯೋಜನೆಯ ಸಂಕ್ಷಿಪ್ತವರದಿ

ರಾಜ್ಯದ ಪ್ರಾದೇಶಿಕ ಅಸಮತೋಲನದ ಪರಿಹಾರಕ್ಕಾಗಿ ಒಂದು ಉನ್ನತಾಧಿಕಾರ ಸಮಿತಿಯನ್ನು ಡಾ: ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ 2000ನೇ ಅಕ್ಟೋಬರ್‌ನಲ್ಲಿ ರಚಿಸಲಾಗಿತ್ತು. ಸಮಿತಿಯು ಅಸಮತೋಲನಗಳನ್ನು ಗುರುತಿಸಲು ವೈಜ್ಞಾನಿಕ ಹಾಗೂ ಸಮಗ್ರ ವಿಧಾನವನ್ನು ಅನುಸರಿಸಿ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳು ಮತ್ತು ಪ್ರಾದೇಶಿಕ ಅಸಮಾನತೆಗಳ ಬಗ್ಗೆ ಕಾಳಜಿಯಿರುವ ತಜ್ಞರೊಂದಿಗೆ/ಆಸಕ್ತರೊಂದಿಗೆ ಚರ್ಚೆ ನಡೆಸಿ ನೀಡಲಾದ ಆ ವರದಿಯನುಸಾರ ಹಿಂದುಳಿದ ಪ್ರದೇಶಗಳು ಎರಡು ಭಾಗಗಳಲ್ಲಿ ಸಮಾನವಾಗಿ ಹರಡಿಕೊಂಡಿವೆ. ಉತ್ತರ ಕರ್ನಾಟಕದ 59 ಮತ್ತು ದಕ್ಷಿಣದಲ್ಲಿ 55 ತಾಲ್ಲೂಕುಗಳು ಹಿಂದುಳಿದಿವೆ.

| ವಿಭಾಗ | ಅತಿ ಹಿಂದುಳಿದ | ಹಿಂದುಳಿದ | ಹೆಚ್ಚು ಹಿಂದುಳಿದ | ಹಿಂದುಳಿದ |
|---|---|---|---|---|
| ಗುಲ್ಬರ್ಗಾ | 21 | 5 | 2 | 28 |
| ಬೆಳಗಾವಿ | 5 | 12 | 14 | 31 |
| ಬೆಂಗಳೂರು | 11 | 13 | 9 | 33 |
| ಮೈಸೂರು | 2 | 10 | 10 | 22 |
| **ಒಟ್ಟು** | **39** | **40** | **35** | **114** |

ಸದರಿ ಸಮಿತಿಯು 2002ರಲ್ಲಿ ಅಂತಿಮ ವರದಿ ಸಲ್ಲಿಸಿ ಕರ್ನಾಟಕದ ಎರಡೂ ಭಾಗದಲ್ಲಿರುವ ಹಿಂದುಳಿದ ತಾಲ್ಲೂಕುಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿ ಅಸಮಾನತೆಯನ್ನು ಹೋಗಲಾಡಿಸಲು ಸಮಿತಿಯು 8 ವರ್ಷಗಳ ವಿಶೇಷ ಯೋಜನೆಯೊಂದನ್ನು ತಯಾರಿಸಿ, ಸರ್ಕಾರ ಒಟ್ಟು 31000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಶಿಫಾರಸ್ಸು ಮಾಡಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅಂತಿಮ ವರದಿಯನ್ನು ಗಮನದಲ್ಲಿಟ್ಟುಕೊಂಡು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಜಿಲ್ಲೆಗಳಿಗೆ ನಿರ್ದಿಷ್ಟ ಮತ್ತು ಅಭಿವೃದ್ಧಿಗೆ ನೆರವಾಗುವಂತಹ ವಿವಿದ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಲಾಗುತ್ತಿದೆ. ಇಂತಹ ನಿರ್ದಿಷ್ಟ ಧ್ಯೇಯೋಧಶಗಳಲ್ಲಿ ಹಿಂದುಳಿದ ತಾಲ್ಲೂಕುಗಳ ವಿವಿದ ವಲಯ ಹಾಗೂ ಕ್ಷೇತ್ರಗಳಲ್ಲಿ ಹೆಚ್ಚುವರಿ ಹಣ ತೊಡಗಿಸುವುದು ಹಾಗೂ ಬಾಕಿ ಉಳಿದಿರುವ ಕೆಲಸಗಳನ್ನು ತುರ್ತಾಗಿ ಕಾರ್ಯಗತಗೊಳಿಸಲು ಮೂಲ ಸೌಕರ್ಯಗಳನ್ನು ನಿರ್ಮಿಸುವುದು, ಅಗತ್ಯ ಸಂಘ ಸಂಸ್ಥೆಗಳನ್ನು ಸ್ಥಾಪಿಸುವುದು ಮತ್ತು ಹಿಂದುಳಿದ ತಾಲ್ಲೂಕುಗಳಲ್ಲಿ ಸ್ಥಳ ನಿರ್ದಿಷ್ಟ ವಲಯ ಯೋಜನೆಗಳನ್ನು ಕಲ್ಪಿಸುವುದು ಅತ್ಯಂತ ಪ್ರಮುಖವಾಗಿರುತ್ತದೆ.

ಈ ಎಲ್ಲಾ ಅಂಶಗಳ ತಳಹದಿಯೊಂದಿಗೆ ಇಲಾಖೆಯು ಪ್ರಮುಖವಾಗಿ ವಿಶೇಷ ಅಭಿವೃದ್ಧಿ ಯೋಜನೆ (SDP) ಹಮ್ಮಿಕೊಂಡಿದ್ದು ಪ್ರಮುಖವಾಗಿ ಹಿಂದುಳಿದ ತಾಲ್ಲೂಕುಗಳಿಗೆ ವಿಶೇಷ

ಕಾಮಗಾರಿ, ಗ್ರಾಮೀಣ ನೀರು ಸರಬರಾಜು ಮತ್ತು ಜಿಲ್ಲಾ ಪಂಚಾಯತ್ ಕೆರೆಗಳ ಪುನಶ್ಚೇತನ ಕಾರ್ಯಗಳಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ.

**1. ಹಿಂದುಳಿದ ತಾಲ್ಲೂಕುಗಳಿಗೆ ವಿಶೇಷ ಕಾಮಗಾರಿಗಳು**

ಪ್ರಾದೇಶಿಕ ಅಸಮತೋಲನಾ ನಿವಾರಣೆಗಾಗಿ ಉನ್ನತ ಮಟ್ಟದ ಸಮಿತಿಯಿಂದ ಗುರುತಿಸಲ್ಪಟ್ಟ ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಪ್ರಸ್ತುತ 2012-13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 2515-11-197-1-22 (ಯೋಜನೆ) ಅಡಿಯಲ್ಲಿ ಜಿಲ್ಲಾವಾರು ರೂ. 4444.00 ಲಕ್ಷಗಳನ್ನು ತಾಲ್ಲೂಕು ಪಂಚಾಯಿತಿಗಳಿಗೆ ಒದಗಿಸಲಾಗಿದೆ. ಸದರಿ ಅನುದಾನವನ್ನು ಹಿಂದುಳಿದ ತಾಲ್ಲೂಕುಗಳಲ್ಲಿ ಅಂಗನವಾಡಿ/ಪಂಚಾಯತ್ ಆಫೀಸ್ ಕಟ್ಟಡಗಳ, ಗೋಕಟ್ಟೆ, ಶೌಚಾಲಯ, ಕಿರು ಚರಂಡಿ, ರಸ್ತೆ, ನೀರಿನ ಕಿರು ಟ್ಯಾಂಕ್ ದುರಸ್ತಿ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮೀಸಲಿರಿಸಿದೆ. ಸಂಬಂಧಿಸಿದ ವಿಸ್ತೃತ ವಿವರಗಳಿಗಾಗಿ ದಿನಾಂಕ 16.05.2012ರ ಮಾರ್ಗಸೂಚಿಯನ್ನು ಇದೇ ಪುಸ್ತಕದ ಪುಟ ಸಂಖ್ಯೆ (36) ರ ಸುತ್ತೋಲೆ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಲಾಗಿದೆ.

**2. ಗ್ರಾಮೀಣ ನೀರು ಸರಬರಾಜು**

ಅತ್ಯಂತ ಹಿಂದುಳಿದ, ಅತಿಹೆಚ್ಚು ಹಿಂದುಳಿದ, ಹಿಂದುಳಿದ ಒಟ್ಟು 114 ತಾಲ್ಲೂಕುಗಳಲ್ಲಿನ ಗ್ರಾಮಗಳಿಗೆ ಶಾಶ್ವತ ಹಾಗು ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಸಂಬಂಧ ಅನುಮೋದಿನ ಯೋಜನೆಗಳ ಅನುಷ್ಠಾನ ಸಲುವಾಗಿ 2012-13ರ ಸಾಲಿಗೆ ರಾಜ್ಯವಲಯದ ಲೆಕ್ಕ ಶೀರ್ಷಿಕೆ 4215-01-102-9-06-133ರಡಿ ರೂ. 253.64ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಸಂಬಂಧಿಸಿದಂತೆ ದಿನಾಂಕ 10.07.2012ರ ಸರ್ಕಾರದ ಆದೇಶದಲ್ಲಿ ಸಮಗ್ರ ವಿವಿವರಗಳನ್ನು ಇದೇ ಪುಸ್ತಕದ ಪುಟ ಸಂಖ್ಯೆ (43) ರಲ್ಲಿ ಸುತ್ತೋಲೆ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಲಾಗಿದೆ.

**3. ಜಿಲ್ಲಾ ಪಂಚಾಯತ್ ಕೆರೆಗಳ ಪುನಶ್ಚೇತನ:**

ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಒಳಪಟ್ಟು 40 ಹೆಕ್ಟೇರ್‌ಗಿಂತ ಕಡಿಮೆ ಆಯಕಟ್ಟು ಇರುವ ಸುಮಾರು 33,000 ಕೆರೆಗಳಿದ್ದು, ಅವುಗಳನ್ನು ಬಹಳ ಹಿಂದೆ ನಿರ್ಮಿಸಿದ್ದು, ಬಹುತೇಕ ಕಡೆ ಅಂತರ್ಜಲ ಮಟ್ಟ ಕುಸಿದಿದ್ದು, ಜನವಸತಿ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್, ನೈಟ್ರೇಟ್, ಕಬ್ಬಿಣ ಮತ್ತು ಇತರೆ ಹಾನಿಕಾರಕ ರಾಸಾಯನಿಕಗಳಿಂದ ಕಲುಷಿತತೆ ಹೆಚ್ಚಾಗಿರುತ್ತದೆ. ಅಂತರ್ಜಲ ಮರುಪೂರಣದಿಂದ ಸಮಸ್ಯೆ ಬಹುಮಟ್ಟಿಗೆ ಕಡಿಮೆ ಆಗುವುದು. ಈ ಎರಡೂ ಸಮಸ್ಯೆಗಳನ್ನು ನಿವಾರಿಸುವುದು ಸರಕಾರದ ಉದ್ದೇಶವಾಗಿದೆ.

ಪ್ರಸಕ್ತ 2012-13ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ 4702 ರಲ್ಲಿನ ಸಣ್ಣ ನೀರಾವರಿ ಕೆರೆಗಳಿಗೆ ಸಂಬಂಧಿಸಿದಂತೆ, ರೂ. 30.00 ಕೋಟಿಗಳ ಅನುದಾನವನ್ನು ರಾಜ್ಯವಲಯದಲ್ಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜ್ಯದಲ್ಲಿನ ಹಿಂದುಳಿದ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಕೆರೆಗಳ ಪುನಶ್ಚೇತನಕ್ಕಾಗಿ ಯೋಜಿಸಲಾಗಿದೆ. ಈ ಅನುದಾನವು ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ ಸಣ್ಣ ನೀರಾವರಿ ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಮಾತ್ರ ಮೀಸಲಿಡಲಾಗಿದೆ. ಈ ಅನುದಾನದ ಉಪಯುಕ್ತತೆಯು ಪರಿಣಾಮಕಾರಿಯಾಗಿ ಆಗಬೇಕಾದರೆ ಅಭಿವೃದ್ಧಿಪಡಿಸಲು ಕೆರೆಗಳನ್ನು ಜಾಗ್ರತೆ ವಹಿಸಿ ಆಯ್ಕೆ ಮಾಡಿ, ಕೆಲಸಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಸದರಿ ಯೋಜನೆಯು ಉಪಯುಕ್ತತೆ ಕಾಣಬೇಕಾದರೆ ಯೋಜನೆಯನ್ನು ತಾಂತ್ರಿಕವಾಗಿ ವೃತ್ತಿಪರವಾಗಿ ಕೈಗೊಳ್ಳಬೇಕಾಗಿದೆ. ಪ್ರಸಕ್ತ 2012-13ನೇ ಸಾಲಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಲಾದ ರೂ. 30.00 ಕೋಟಿಗಳನ್ನು ಸಮಿತಿಯ ವರದಿಯಲ್ಲಿ ಸೂಚಿಸಿರುವ ಸೂಚ್ಯಾಂಕ ಆಧಾರದ ಮೇಲೆ ಜಿಲ್ಲಾ ಪಂಚಾಯತಿಗಳಿಗೆ ತಾಲ್ಲೂಕುವಾರು ಹಂಚಿಕೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ. ಸಂಬಂಧಿಸಿದಂತೆ ದಿನಾಂಕ 03.07.2012ರ ಸರ್ಕಾರದ ಆದೇಶ ಮತ್ತು ಸಮಗ್ರ ವಿವರದ ಅನುಬಂಧಗಳನ್ನು ಇದೇ ಪುಸ್ತಕದ ಪುಟ ಸಂಖ್ಯೆ (39) ರಲ್ಲಿ ಸುತ್ತೋಲೆ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಲಾಗಿದೆ.

# ಎನ್.ಆರ್.ಎಲ್.ಎಂ (ಸಂಜೀವಿನಿ) ಕಾರ್ಯಾಗಾರ...

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು National Rural Livelyhood Mission (ಸಂಜೀವಿನಿ) ಎಂಬ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದು ಯೋಜನೆಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಶೇ.75:25ರ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಹಾಲಿ ಇರುವ ಅನುದಾನ ಹಂಚಿಕೆ ವಿಧಾನವನ್ನು ಬಿಟ್ಟು ಬೇಡಿಕೆ ಆಧಾರಿತ ವಿಧಾನಕ್ಕೆ ವರ್ಗಾವಣೆಗೊಳಿಸಲಾಗುತ್ತಿದೆ. ಇದರಿಂದ ಸ್ಥಳೀಯ ಅಂಶಗಳನ್ನು ಗಣನಗೆ ತೆಗೆದುಕೊಂಡು ತಮ್ಮದೇ ಆದ ಬಡತನ ನಿರ್ಮೂಲನ ಕ್ರಿಯಾ ಯೋಜನೆಗಳನ್ನು ರೂಪಿಸಿಕೊಳ್ಳಲು ಸ್ವತಂತ್ರವಿರುತ್ತದೆ. ಈ ಆಧಾರದ ಮೇಲೆ ರಾಜ್ಯ ಸರ್ಕಾರವು ಕೆಳಕಂಡ ಪ್ರಮುಖ ಮೂರು ಪ್ರಧಾನ ಅಂಶಗಳನ್ನೊಳಗೊಂಡ ವಿಧಾನಗಳನ್ನು ರೂಪಿಸಿಕೊಂಡಿದೆ.

1. ಸಾಮಾಜಿಕ ಸೇರ್ಪಡೆ (ಬಡಜನರನ್ನು ಜೊತೆಗೂಡಿಸಿ ಅವರಿಗೆ ಸಂಸ್ಥೆಗಳನ್ನು ನಿರ್ಮಿಸುವುದು)
2. ವಿತ್ತೀಯ ಸೇರ್ಪಡೆ (ಬ್ಯಾಂಕ್ ಸಂಪರ್ಕಗಳನ್ನು ವಿತ್ತೀಯ ಅರಿವು ಮತ್ತು ಬ್ಯಾಂಕ್‌ಗಳಲ್ಲಿನ ಬ್ಯಾಂಕ್ ಸೌಲಭ್ಯ)
3. ಆರ್ಥಿಕ ಸೇರ್ಪಡೆ (ಜೀವನೋಪಾಯಗಳ ಪ್ರೋತ್ಸಾಹ).

ಎನ್.ಆರ್.ಎಲ್.ಎಂ. (ಸಂಜೀವಿನಿ) ಯೋಜನೆಯು ರಾಜ್ಯಾದ್ಯಂತ ಹಂತ ಹಂತವಾಗಿ 5 ರಿಂದ 7 ವರ್ಷಗಳಲ್ಲಿ ಜಾರಿಗೊಳಿಸಲಿದ್ದು ಪ್ರಥಮ ಹಂತದಲ್ಲಿ ರಾಜ್ಯದ 5 ಜಿಲ್ಲೆಗಳ 20 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುವುದು. ಅವುಗಳೆಂದರೆ:-

1. ಬೆಳಗಾವಿ – ಅಥಣಿ, ಗೋಕಾಕ್, ಸವದತ್ತಿ, ಹುಕ್ಕೇರಿ
2. ಧಾರವಾಡ – ಕಲಘಟಗಿ, ಕುಂದಗೋಳ, ನವಲಗುಂದ
3. ಗುಲಬರ್ಗಾ – ಗುಲಬರ್ಗಾ, ಜೇವರ್ಗಿ, ಸೇಡಂ, ಆಳಂದ
4. ಮೈಸೂರು – ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು, ಟಿ.ನರಸೀಪುರ
5. ತುಮಕೂರು – ಗುಬ್ಬಿ, ಕುಣಿಗಲ್, ಮಧುಗಿರಿ, ಪಾವಗಡ, ಕೊರಟಗೆರೆ

**ಎನ್.ಆರ್.ಎಲ್.ಎಂ (ಸಂಜೀವಿನಿ) ಯೋಜನೆಯನ್ನು ಬಡಜನರ ಸಂಸ್ಥೆಗಳನ್ನು ನಿರಂತರವಾಗಿ ಬೆಂಬಲಿಸಿ ಸದೃಢಗೊಳಿಸುವ ಉದ್ದೇಶದಿಂದ ಅನುಷ್ಠಾನಗೊಳಿಸಲಾಗಿದೆ.**

ಈ ಯೋಜನೆಯ ಅನುಷ್ಠಾನವು ಬಡಜನರ ಸಂಸ್ಥೆಗಳನ್ನು ನಿರಂತರವಾಗಿ ಬೆಂಬಲಿಸಿ ಸದೃಢಗೊಳಿಸುವುದು ಸಬಲಗೊಳಿಸಲು ಹಾಗೂ ಬಡತನದಿಂದ ಹೊರತಂದು ಉತ್ತಮ ಗುಣಮಟ್ಟದ ಜೀವನ ನಡೆಸುವ ಎಲ್ಲಾ ಪ್ರಯತ್ನಗಳ ಚಾಲನಾ ಶಕ್ತಿಯಾಗಿರುತ್ತದೆ.

ಈ ದಿಸೆಯಲ್ಲಿ ರಾಜ್ಯದಲ್ಲಿ ಮಾದರಿ ಎನ್.ಆರ್.ಎಲ್.ಎಂ ಸಂಸ್ಥೆಯನ್ನು ಸ್ಥಾಪಿಸಲು ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆಯ ಮಿಷನ್ ಡೈರೆಕ್ಟರ್, ಅಡಿಷನಲ್ ಮಿಷನ್ ಡೈರೆಕ್ಟರ್, ಜಂಟಿ ನಿರ್ದೇಶಕರು ಹಾಗು ಸಮಾಲೋಚಕರು ನೆರೆ ರಾಜ್ಯಗಳಾದ ಕೇರಳ, ಆಂದ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಪ್ರವಾಸ ಮಾಡಿ ಆ ರಾಜ್ಯಗಳು ಎನ್.ಆರ್.ಎಲ್.ಎಂ ಅನುಷ್ಠಾನಗೊಳಿಸುವಲ್ಲಿ ತೆಗೆದುಕೊಂಡ ಕ್ರಮಗಳನ್ನು ಹಾಗೂ ಜಾರಿಯಲ್ಲಿರುವ ರೀತಿ ರಿವಾಜುಗಳ ಬಗ್ಗೆ ಅಧ್ಯಯನ ಮಾಡಿ ಈ ರಾಜ್ಯಗಳು ಅಳವಡಿಸಿಕೊಂಡು ಅನುಸರಿಸುತ್ತಿರುವ ಉತ್ತಮ ಮಾದರಿಯನ್ನು ನಮ್ಮ ರಾಜ್ಯದ ಎನ್.ಆರ್.ಎಲ್.ಎಂ ಸಂಸ್ಥೆಗೆ ಅಳವಡಿಸಿಕೊಳ್ಳಲು ಚಿಂತನೆ ನಡೆಸಿದರು.

ದಿನಾಂಕ 15.12.2012ರಂದು ಕೇಂದ್ರ ತೆಂಗು ಮಂಡಳಿಯ ಅಧ್ಯಕ್ಷರು ಹಾಗು ಕೇರಳ ರಾಜ್ಯದ ಅಧಿಕಾರಿಗಳ ಜೊತೆ ರಾಜ್ಯ ಕೆ.ಎಸ್.ಆರ್.ಎಲ್.ಪಿ.ಎಸ್ (ಎನ್.ಆರ್.ಎಲ್.ಎಂ – ಸಂಜೀವಿನಿ) ಅಧಿಕಾರಿಗಳ ಒಂದು ದಿನದ ಕಾರ್ಯಾಗಾರವನ್ನು ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಗಾರರಲ್ಲಿ ಎರಡೂ ರಾಜ್ಯಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದು ವಿವರಗಳು ಈ ಕೆಳಕಂಡಂತಿವೆ.

1. ಶ್ರೀ ಪಿ.ಟಿ.ಜೋಸ್, ಐಎಎಸ್,
   ಅಧ್ಯಕ್ಷರು, ಕೇಂದ್ರ ತೆಂಗು ಮಂಡಳಿ, ಕೊಚ್ಚಿನ್
2. ಶ್ರೀ ಡಾ: ಇ.ವಿ.ರಮಣರೆಡ್ಡಿ, ಐಎಎಸ್,
   ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
3. ಶ್ರೀಮತಿ ಪಿ.ಹೇಮಲತ, ಐಎಎಸ್
   ಮಿಷನ್ ಡೈರೆಕ್ಟರ್, ಕೆ.ಎಸ್.ಆರ್.ಎಲ್.ಪಿ.ಎಸ್
4. ಶ್ರೀಮತಿ ಎಂ.ದೀಪ, ಐಎಎಸ್
   ಅಡಿಷನಲ್ ಮಿಷನ್ ಡೈರೆಕ್ಟರ್, ಕೆ.ಎಸ್.ಆರ್.ಎಲ್.ಪಿ.ಎಸ್
5. ಶ್ರೀ ಪಿ.ಶ್ರೀಕಂಠ ನಾಯರ್,
   ಉಪ ಅಭಿವೃದ್ಧಿ ಆಯುಕ್ತರು, ಕೇರಳ ಸರ್ಕಾರ
6. ಶ್ರೀ ಕಬೀರ್ ಬಿ ಹೆರೋರ್
   ಉಪ ನಿರ್ದೇಶಕರು, ಹಣಕಾಸು ಇಲಾಖೆ, ಕೇರಳ ಸರ್ಕಾರ
7. ಶ್ರೀ ಕೇಶವ ನಾಯರ್.
   ಸಿಇಒ, ಹೆಚ್‌ಡಿಎಫ್ ಸ್ಕೂಲ್ ಆಫ್ ಮೇನೆಜ್‌ಮೆಂಟ್, ಭುವನೇಶ್ವರ
8. ಶ್ರೀ ಟಿ.ಮಹಮದ್ ನಿಜಾರ್,
   ಪರ್‌ಫಾಮರ್ ಆಡಿಟ್ ಸೂಪರ್‌ವೈಸರ್
   ಗ್ರಾಮೀಣಾಭಿವೃದ್ಧಿ ಇಲಾಖೆ, ಕೇರಳ ಸರ್ಕಾರ.

ಕೇರಳ ರಾಜ್ಯದ ಪರವಾಗಿ ಭಾಗವಹಿಸಿದ್ದ ಪ್ರತಿನಿಧಿಗಳು ಕೇರಳ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಕುಟುಂಬಶ್ರೀ ಹಾಗೂ ಇದರ ಮುಖಾಂತರ ನಡೆಸುತ್ತಿರುವ ಯುವ ಶ್ರೀ, ಮಹಿಳಾಶ್ರೀ ಮತ್ತು ಯಾತ್ರಾಶ್ರೀ ಮುಂತಾದ ಯೋಜನೆಗಳು ಹಾಗೂ ಸ್ವ ಸಹಾಯ ಗುಂಪು (ಎಸ್‌ಹೆಚ್‌ಜಿ) ಮಾಡಿ ಕಮ್ಯುನಿಟಿ ಬ್ಲಾಕ್ ಆರ್ಗನೈಸೇಷನ್ ಹಾಗು ಗ್ರಾಮ ಪಂಚಾಯಿತಿಯು ಜಂಟಿಯಾಗಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಎಲ್ಲಾ ಸೌಕರ್ಯಗಳನ್ನು ಬಡಜನರಿಗೆ ತಲುಪಿಸುವಲ್ಲಿ ಯಶಸ್ವಿಯಾದ ಬಗ್ಗೆ ಹಾಗು ಹಂತ ಹಂತವಾಗಿ ಅನುಷ್ಠಾನಗೊಳಿಸುವಲ್ಲಿ ಜನ ಸಾಮಾನ್ಯರನ್ನು ಯೋಜನೆಯ ಸದಸ್ಯರಾಗಿ ನೊಂದಾವಣೆ, ಸದಸ್ಯರಿಗೆ ತರಬೇತಿ, ಜನಪ್ರತಿನಿಧಿಗಳ ಸಹಕಾರ, ಕುಟುಂಬಶ್ರೀ ತಯಾರಿಸುವ ಎಲ್ಲಾ ಉತ್ಪನ್ನಗಳ ಮಾರಾಟದಲ್ಲಿ ಸರ್ಕಾರದ ಪ್ರೋತ್ಸಾಹ ಮತ್ತು ನಗರ ಸಭೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿಯ ತ್ಯಾಜ್ಯವನ್ನು ಮರುಬಳಕೆ ಮಾಡಿ ಕಾಂಪೋಸ್ಟ್ ಗೊಬ್ಬರ ತಯಾರಿಸುವಲ್ಲಿ ಯಶಸ್ವಿ ಮುಂತಾದುವುಗಳನ್ನು ಕಾರ್ಯಾಗಾರದಲ್ಲಿ ಬಿಡಿಬಿಡಿಯಾಗಿ ಉಲ್ಲೇಖದೊಂದಿಗೆ ವಿವರಿಸಿ ಕೇರಳ ರಾಜ್ಯದಲ್ಲಿ ಕುಟುಂಬಶ್ರೀ ಯೋಜನೆಯು ಯಶಸ್ವಿಯಾಗಲು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸಹಾಯ, ಜನ ಪ್ರತಿನಿಧಿಗಳ ಸಹಭಾಗಿತ್ವ ಹಾಗು ಜನ ಸಾಮಾನ್ಯರು ತೋರಿಸುತ್ತಿರುವ ಆಸಕ್ತಿಯನ್ನು ಕಾರ್ಯಾಗಾರದಲ್ಲಿ ವಿವರಿಸಿ ಕಿರು ಚಿತ್ರವನ್ನು ಸಹ ಪ್ರದರ್ಶಿಸಿದರು. ಕಾರ್ಯಾಗಾರವು ಯಶಸ್ವಿಯಾಗಿದ್ದು ಕರ್ನಾಟಕ ರಾಜ್ಯ ಸರ್ಕಾರದ ಅಧಿಕಾರಿಗಳು ಇದರ ಪೂರ್ಣ ಉಪಯೋಗವನ್ನು ಪಡೆದರು.

ಬದುಕುವ ಮಾತು



ಡಾ. ಪಾಟೀಲ ಪುಟ್ಟಪ್ಪ

ನಿಷ್ಠೆ, ಆಸಕ್ತಿ, ಶ್ರದ್ಧೆ ಇರುವ ಮನುಷ್ಯನು ಜಗತ್ತಿನ ಗೌರವಕ್ಕೆ ಪಾತ್ರನಾಗಿರುತ್ತಾನೆ. ಆಸಕ್ತಿಯಿಲ್ಲದ ಅರ್ಧಮನಸ್ಸಿನ ಮನುಷ್ಯನಿಗೆ ಯಾವ ಬೆಲೆಯೂ ಇರುವುದಿಲ್ಲ. ಅವನು ಯಾವ ಲೆಕ್ಕಕ್ಕೂ ಹತ್ತುವುದಿಲ್ಲ.

# ಕೆಲಸದಲ್ಲಿ ಆಸಕ್ತಿಯಿದ್ದರೆ ಅಸಾಧ್ಯಗಳು ಸಾಧ್ಯವಾಗುತ್ತವೆ

ಮನುಷ್ಯನು ಏನನ್ನೇ ಮಾಡಲಿ, ತಾನು ಮಾಡುವ ಕೆಲಸದಲ್ಲಿ ಆಸಕ್ತಿ ಇರಿಸಿಕೊಂಡಿರಬೇಕು. ಅದು ಇಲ್ಲದೇ ಯಾವ ಮನುಷ್ಯನೂ ದೊಡ್ಡವನಾಗಿಲ್ಲ. ದೊಡ್ಡ ಕೆಲಸವನ್ನು ಮಾಡಿಲ್ಲ. ಅವನು ಬುದ್ಧಿವಂತನಾಗಿರಬಹುದು. ಪ್ರತಿಭಾವಂತನಾಗಿರಬಹುದು. ಅವನಲ್ಲಿ ಆಸಕ್ತಿ ಇಲ್ಲದೇ ಹೋದರೆ ಅವನಿಂದ ಯಾವ ಕೆಲಸವೂ ಆಗುವುದಿಲ್ಲ.

ಆಸಕ್ತಿ ಇರುವ ಮನುಷ್ಯನು ತಾನು ಮಾಡುವ ಕೆಲಸದಲ್ಲಿ ತನ್ನನ್ನು ಸಂಪೂರ್ಣ ತೊಡಗಿಸಿಕೊಂಡಿರುತ್ತಾನೆ. ಕೆಲಸದ ಬಗೆಗೆ ಆಸಕ್ತಿ ಇರುವುದೆಂದರೆ, ಮಾಡುವ ಕೆಲಸವನ್ನು ಮನಮುಟ್ಟಿ ಮಾಡುವುದೆಂದು ಅರ್ಥ. ಅರ್ಧ ಮನಸ್ಸಿನಿಂದ ಮಾಡಿದ ಕೆಲಸ ಆಗುವುದಿಲ್ಲ. ಪೂರ್ಣ ಮನಸ್ಸಿನಿಂದ ಮಾಡಿದ ಕೆಲಸ ಆಗುತ್ತದೆ. ಮನುಷ್ಯನ ಸೋಲು ಗೆಲುವುಗಳಿಗೆ ಅವನ ಆಸಕ್ತಿಯೇ ಕಾರಣವಾಗಿದೆ.

ಮನುಷ್ಯನ ಶ್ರೇಷ್ಠತೆಯು, ಅವನ ಮಾತಿನಿಂದ ಅಲ್ಲ, ಅವನ ಆಸಕ್ತಿಯಿಂದ ವ್ಯಕ್ತಪಡುತ್ತದೆಯೆಂದು ಕನ್‌ಫ್ಯೂಷಿಯಸ್ ಹೇಳುತ್ತಾನೆ.

ಜೀವನದಲ್ಲಿ ಏನಾದರೂ ಸಾಧಿಸಬೇಕೆನ್ನುವ ಮನುಷ್ಯನು ತನ್ನನ್ನು ಮಾಡುವ ಕೆಲಸಕ್ಕೆ ಸಂಪೂರ್ಣ ಅರ್ಪಿಸಿಕೊಳ್ಳಬೇಕು. ಅವನ ಸಾಧನೆಯ ಸಿದ್ಧಿ ಅವನ ಕಾಲ ಬುಡದಲ್ಲಿಯೇ ಇರುತ್ತದೆ. ನಿಷ್ಠೆಯ ಆಸಕ್ತಿ ಯಾವನಲ್ಲಿ ಇದೆಯೋ, ಈ ಜಗತ್ತು ಅವನದೇ ಆಗಿದೆ.

ನಿಷ್ಠೆ, ಆಸಕ್ತಿ, ಶ್ರದ್ಧೆ ಇರುವ ಮನುಷ್ಯನು ಜಗತ್ತಿನ ಗೌರವಕ್ಕೆ ಪಾತ್ರನಾಗಿರುತ್ತಾನೆ. ಆಸಕ್ತಿಯಿಲ್ಲದ ಅರ್ಧಮನಸ್ಸಿನ ಮನುಷ್ಯನಿಗೆ ಯಾವ ಬೆಲೆಯೂ ಇರುವುದಿಲ್ಲ. ಅವನು ಯಾವ ಲೆಕ್ಕಕ್ಕೂ ಹತ್ತುವುದಿಲ್ಲ.

ತಾನು ಮಾಡುವ ಕೆಲಸದ ಬಗೆಗೆ ಮನುಷ್ಯನಲ್ಲಿ ಆಸಕ್ತಿ ಇದ್ದರೆ ಅವನು ಅದ್ಭುತಗಳನ್ನು ಸಾಧಿಸುತ್ತಾನೆ. ಎಂಥ ಪ್ರತಿಭಾವಂತನೇ ಇರಲಿ, ಅವನಲ್ಲಿ ಆಸಕ್ತಿ ಉತ್ಸಾಹಗಳು ಇಲ್ಲದೇ ಹೋದರೆ, ಅವನಿಂದ ಜೀವನದಲ್ಲಿ ಏನನ್ನೂ ಸಾಧಿಸುವುದಕ್ಕೆ ಆಗುವುದಿಲ್ಲ.

ಮನುಷ್ಯನು ನೇರವಾಗಬೇಕಾದರೆ, ತಾನು ನೇರವಾಗಿ ಆಗಬೇಕೆನ್ನುವ ಬಗೆಗೆ ಆಸಕ್ತಿ ಹಾಗೂ ಅದರ ಬಗೆಗೆ ಪ್ರಯತ್ನ ಇರಬೇಕು ಅದು ಕಾಗದದ ಮೇಲೆ ನೇರವಾದ ಗೆರೆಯನ್ನು ಎಳೆದಂತೆ ಇದೆ. ಗೆರೆ, ನೇರವಾಗಿ ಆಗಬೇಕಾದರೆ, ಅದು ನೇರವಾಗಿ ಆಗುವಂತೆ, ಅದನ್ನು ಎಳೆಯುವ ಪ್ರಯತ್ನ ನಿರಂತರವೂ ನಡೆದಿರಬೇಕು.

ಆಸಕ್ತಿಯು ಮನುಷ್ಯನಲ್ಲಿ ಅವ್ಯಾಹತವೆನಿಸುವಂತೆ ನಿರಂತರವೂ ಇರಬೇಕು. ಉತ್ಸಾಹ ಹಾಗೂ ಆಸಕ್ತಿ ಎಲ್ಲಿ ಇರುವುವೋ ಅಲ್ಲಿ ಯಶಸ್ಸು ಇದ್ದೇ ಇರುತ್ತದೆ. ಜೀವನಕ್ಕೆ ಅರ್ಥ ಇದೆಯೆನ್ನುವುದನ್ನು ಅವನ ಆಸಕ್ತಿ ಉತ್ಸಾಹಗಳೇ ತೋರಿಸಿಕೊಡುತ್ತವೆ. ಆಸಕ್ತಿ ಇಲ್ಲದಿದ್ದರೆ ಜೀವನದಲ್ಲಿ ಏನೂ ಇರುವುದಿಲ್ಲ.

# ಮೇಲು ಕೀಳೆಂಬ ಭೇದಭಾವ ಬೇಕೆ ?

ಭಾರತದ ಸಂವಿಧಾನದಲ್ಲಿ ಎಲ್ಲ ಪ್ರಜೆಗಳು ಸರ್ವಸಮಾನರೆಂದು ಸಾರಲಾಗಿದೆ. ಎಲ್ಲರಿಗೂ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸಮಾನತೆಯನ್ನು ಸಂವಿಧಾನ ನೀಡಿದೆ ಆದಾಗ್ಯೂ 'ಅಸ್ಪ್ರಶ್ಯತೆಯ' ಆಚರಣೆ ನಮ್ಮ ನಡುವೆ ಜೀವಂತವಿರುವುದು ನಿಜಕ್ಕೂ ದುರಂತ. ಸರ್ಕಾರ ಈ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸುತ್ತಿದ್ದರೂ, ಈ ಅನಾಗರಿಕ ಪ್ರಜ್ಞೆ ಜನಮಾನಸದಲ್ಲಿ ಅಲ್ಲಲ್ಲಿ ಬೇರೂರಿದೆ. ಕೆಲವೊಮ್ಮೆ ತನ್ನ ರಾಕ್ಷಸ ಪ್ರವೃತ್ತಿಯನ್ನು ಮೆರೆದಿದೆ. ಇಂತಹ ಕೀಳುಮನೋಭಾವನೆಗಳು ನಮ್ಮಿಂದ ದೂರಾಗುವುದು ಎಂದು?



**ಈ ನಿಟ್ಟಿನಲ್ಲಿ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು :**

1. ನಮ್ಮೆಲ್ಲರ ದೇಹರಚನೆ, ಆಹಾರ ಕ್ರಮಗಳು ಒಂದೇ ಆಗಿದ್ದರೂ ಮೇಲು-ಕೀಳು ಮನೋಭಾವ ಏಕೆ?
2. ಕೆಳವರ್ಗದ ಶ್ರಮಿಕರು, ರೈತಾಪಿಗಳು ಸುರಿಸಿದ ಬೆವರಿನ ಫಲ ಉಣ್ಣುವ ಮೇಲ್ವರ್ಗಕ್ಕೆ ಸಮಾನತೆಯ ಪಥ್ಯವೇಕೆ ರುಚಿಸುವುದಿಲ್ಲ?
3. ಪ್ರಕೃತಿ ಕಲ್ಪಿಸಿದ ನೀರು, ನೆರಳು, ಅನ್ನಾಹಾರಗಳನ್ನು ಪಶುಪಕ್ಷಿಗಳು ಸೌಹಾರ್ದದಿಂದ ಭೋಗಿಸುತ್ತಿರುವಾಗ ಬುದ್ಧಿಜೀವಿ ಮನುಷ್ಯನಿಗೆ ಯಾಕೀ ಅವಿವೇಕ?
4. ವೈಜ್ಞಾನಿಕವಾಗಿ ಇಷ್ಟೆಲ್ಲ ಮುಂದುವರೆದ ನಾವು ಹಳ್ಳಿಗಳಲ್ಲಿ ಬೇರೂರಿದ ಜಾತಿ ವ್ಯವಸ್ಥೆಯ ಕಳಂಕವನ್ನು ನಿರ್ಮೂಲನೆಗೈಯಲು ಶಕ್ತರಲ್ಲವೆ?
5. ಜಾತಿ-ಧರ್ಮಗಳ ಹೆಸರಿನಲ್ಲಿ ಮನುಷ್ಯ-ಮನುಷ್ಯನನ್ನು ಶೋಷಿಸುವ ಪರಿ, ಮಾನವತೆಗೆ ತೋರುವ ಅಗೌರವವಲ್ಲವೆ?
6. ಅಸ್ಪೃಶ್ಯತೆ, ಜಾತಿ ಪದ್ಧತಿಗಳ ಆಚರಣೆಯಿಂದ ಸಂವಿಧಾನದ ಆಶೋತ್ತರಗಳು ಈಡೇರಲು ಹೇಗೆ ಸಾಧ್ಯ?

ಉದಯಕುಮಾರ್ ಎಂ. ಬಸವನತ್ತೂರು
ಬಸವನತ್ತೂರು ಗ್ರಾಮ, ಕೂಡಮಂಗಳೂರು ಅಂಚೆ,
ಸೋಮವಾರಪೇಟೆ ತಾ॥ ಕೊಡಗು ಜಿಲ್ಲೆ-571232
ಮೊ: 9035224079

ಕಾವ್ಯ ವಿಕಾಸ

# ಮತ್ತೆ ಮತ್ತೆ ಬರುತಿದೆ ಹೊಸ ವರ್ಷ

ಹಳೆ ವರುಷವ ಕಳೆದು ಕಳೆದು
ಹೊಸ ವರ್ಷ ಮತ್ತೆ ಮತ್ತೆ ಬರುತಿದೆ
ಹಳೆ ವರ್ಷದ ಹಳೆ ತನಕೆ
ಹೊಸ ಹೊಸತು ಲೇಪ ಕೊಡುತಿದೆ

ಮೂಡಣದಿ ಮುಂಜಾನೆಯೇ ಅವಸರದಿ
ರವಿಯೆದ್ದು ನಿತ್ಯ ಹೊಸ ಹೊಸತು ಕಿರಣ ಸೂಸುವ
ಅಂಗಳಕೆ ಬೆಳದಿಂಗಳ ಹೊಸ ಬೆಳಕ ಚೆಲ್ಲುತ
ಶಶಿ ತನ್ನ ಕೆಲಸ ತಾನು ನಿರ್ಭಯದಿ ಮುಗಿಸುವ

ಅವರವರ ಕೆಲಸ ಕಾರ್ಯ ಮಾಡಲು
ಇರಲಿ ನಿತ್ಯ ಹೊಸ ಉತ್ಸಾಹ
ಪ್ರಾಮಾಣಿಕ ಪರಿಶ್ರಮ ಪ್ರಯತ್ನಕೆ
ಇರುವುದು ಎಂದೂ ದೇವರ ಪ್ರೋತ್ಸಾಹ

ಹಳೆನೋವು ಹಳೆದುಃಖ ಹಳೆಗಾಯ
ಕರಗಿ ಕರಗಿ ಹೋಗಲಿ ಬಲುಬೇಗ ಮಾಯ
ಹೊಸ ಆಸೆ ಹೊಸ ಕನಸು ಹೊಸ ಸಮಯ
ಓಡಿ ಓಡಿ ಬರಲಿ ಹೊಸ ವರ್ಷವಿಡೀ ಅಕ್ಷಯ

–ಶ್ರೀಕಲಾ ಪೇತ್ರಿ

ಶ್ರೀಕಲಾ ಪೇತ್ರಿ, ಡಾಟಾ ಎಂಟ್ರಿ ಆಪರೇಟರ್, ಚೇರ್ಕಾಡಿ ಗ್ರಾಮ ಪಂಚಾಯತ್,
ಚೇರ್ಕಾಡಿ ಗ್ರಾಮ ಉಡುಪಿ ತಾಲೂಕು & ಜಿಲ್ಲೆ

ಯಶೋಗಾಥೆ

# ಶ್ರೀ ಭೂಮಿಕ ಮಹಿಳಾ ಸ್ವಸಹಾಯ ಸಂಘ, ತಗ್ಗಹಳ್ಳಿ ಮಂಡ್ಯ

ಎಂ. ರವೀಂದ್ರನಾಥ್,

ಮಂಡ್ಯ ಜಿಲ್ಲೆಯಲ್ಲಿನ ಯಶೋಗಾಥೆಗಳ ಕಿರು ಚಿತ್ರಣ

ಮಂಡ್ಯಜಿಲ್ಲೆಯ ತಗ್ಗಹಳ್ಳಿಯಲ್ಲಿ ಶ್ರೀ ಭೂಮಿಕಾ ಮಹಿಳಾ ಸ್ವಸಹಾಯ ಸಂಘವು ಕಾರ್ಯನಿರ್ವಹಿಸುತ್ತಿದ್ದು ಅನೇಕ ಕಾರ್ಯಕ್ರಮಗಳನ್ನು ಅಮ್ಮಿಕೊಂಡಿದೆ. ಅದರಲ್ಲಿ ಹೈನುಗಾರಿಕೆಯೂ ಪ್ರಮುಖ ಚಟುವಟಿಕೆಯಾಗಿದೆ.

ಚಟುವಟಿಕೆಯ ವಿವರ ಕೆಳಕಂಡಂತಿದೆ

| | | | |
|---|---|---|---|
| 1. | ತಾಲ್ಲೂಕು | : | ಮಂಡ್ಯ |
| 2. | ಜಿಲ್ಲೆ | : | ಮಂಡ್ಯ |
| 3. | ಗ್ರಾ.ಪಂ. | : | ತಗ್ಗಹಳ್ಳಿ |
| 4. | ಗ್ರಾಮ | : | ತಗ್ಗಹಳ್ಳಿ |
| 5. | ಸ್ವಸಹಾಯ ಸಂಘದ ಹೆಸರು | : | ಶ್ರೀ ಭೂಮಿಕ ಮಹಿಳಾ ಸ್ವಸಹಾಯ ಸಂಘ |
| 6. | ಸಂಘದ ಪ್ರಾರಂಭ | : | 23.05.2007 |
| 7. | ಸದಸ್ಯರ ಸಂಖ್ಯೆ ಮತ್ತು ವರ್ಗ | : | 20 ಸದಸ್ಯರು (20 ಬಿಪಿಎಲ್ ಸದಸ್ಯರು) ಎಸ್.ಸಿ. |
| 8. | ವೈಯಕ್ತಿಕ ಉಳಿತಾಯ | : | 4000–00 |
| 9. | ಚಟುವಟಿಕೆ | : | ಹೈನುಗಾರಿಕೆ |
| 10. | ಬಂಡವಾಳ ವಿವರ | : | ಪ್ರತಿ ಹಸುವಿನ ಬೆಲೆ 30000/– |
| 11. | ಮಾರುಕಟ್ಟೆ ಸೌಲಭ್ಯ | : | ಹಾಲು ಉತ್ಪಾದಕರ ಸಹಕಾರ ಸಂಘ ನಿ., |
| 12. | ಪ್ರತಿದಿನದ ಉತ್ಪಾದನೆ | : | 16 ಲೀಟರ್ / Cow / Day |
| 13. | ಆರ್ಥಿಕ ನೆರವು ತಗ್ಗಹಳ್ಳಿ, ಮಂಡ್ಯ ತಾ॥ | : | ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ರೂ. 4.00 ಲಕ್ಷಗಳ ಬ್ಯಾಂಕ್ ಸಾಲ ಸೌಲಭ್ಯ |
| 14. | ಸಹಾಯಧನ ನೆರವು ಮತ್ತು ಆರ್ಥಿಕ ವರ್ಷ | : | ಎಸ್‌ಜಿಎಸ್‌ವೈ ಯೋಜನೆ ಅಡಿ ರೂ. 1.25 ಲಕ್ಷಗಳು ಸಾಲು 2010–11 |



ಎಂ. ರವೀಂದ್ರನಾಥ್, ಮಂಡ್ಯ ತಾಲ್ಲೂಕು, ಎಸ್‌ಜಿಎಸ್‌ವೈ ಫೆಸಿಲಿಟೇಟರ್, ಹಾಗೂ ವಿಜ್ಞಾನ ವೇದಿಕೆ (ರಿ),, (ಎನ್‌ಜಿಒ) ಮಂಡ್ಯ ಇವರ ಮಾರ್ಗದರ್ಶನದಲ್ಲಿ ಶ್ರೀ ಭೂಮಿಕಾ ಮಹಿಳಾ ಸ್ವಸಹಾಯ ಸಂಘವು ದಿನಾಂಕ : 23.05.2007 ರಂದು ಪ್ರಾರಂಭವಾಯಿತು ಹಾಗೂ ಸೇವಾ ಕ್ಷೇತ್ರದ ಬ್ಯಾಂಕ್ ಆದ ಶ್ರೀ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ತಗ್ಗಹಳ್ಳಿಯಲ್ಲಿ ಸಂಘದ ಉಳಿತಾಯ ಖಾತೆ ತೆರೆದು, ಪ್ರತಿ ಸದಸ್ಯರಿಂದ ತಲಾ ಉಳಿತಾಯ ರೂ. 20ಗಳಂತೆ ತಿಂಗಳಿಗೆ ತಲಾ ಉಳಿತಾಯ ರೂ. 80ಗಳನ್ನು ಉಳಿತಾಯ ಮಾಡಲಾಯಿತು. ಪ್ರತಿವಾರ ಉಳಿತಾಯ ಮೊತ್ತವನ್ನು ಬ್ಯಾಂಕ್‌ಗೆ ಜಮೆ ಮಾಡಲಾಯಿತು.



ಸಂಘ ಸ್ಥಾಪನೆಗಿಂತ ಮೊದಲು ಈ ಸದಸ್ಯರು ಕೃಷಿ ಕೂಲಿ ಕಾರ್ಮಿಕರಾಗಿದ್ದು, ಉಪಕಸುಬುಗಳಾದ ಹಸು ಸಾಕಾಣಿಕೆ



ಮತ್ತು ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಹಾಗೂ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು.

2007–08ನೇ ಸಾಲಿನಲ್ಲಿ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ತಗ್ಗಹಳ್ಳಿಯವರು ಸಂಘಕ್ಕೆ ರೂ. 1.00 ಲಕ್ಷಗಳ ಸಾಲವಾಗಿ ಮಂಜೂರು ಮಾಡಿದರು. 2009ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ನಿಂದ ಎಸ್‌ಜಿಎಸ್‌ವೈ ಯೋಜನೆಯಡಿ ರೂ. 10000ಗಳನ್ನು ಸುತ್ತು ನಿಧಿ ಬಿಡುಗಡೆ ಮಾಡಿಕೊಡಲಾಯಿತು. ರೂ. 1.00ಲಕ್ಷಗಳ ಸಾಲದಲ್ಲಿ ಕೆಲಸದಸ್ಯರು ಸಂಘದಿಂದ ಆಂತರಿಕ ಸಾಲ ಪಡೆದು, ಹಸು ಖರೀದಿಸಿ ಹಾಲು ಮಾರಾಟ ಮಾಡಿ ಬ್ಯಾಂಕಿಗೆ ನಿಗದಿತ ಅವಧಿಯೊಳಗೆ ಸಾಲ ಮರುಪಾವತಿ ಮಾಡಿದರು. 2010–11ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ನಿಂದ ಎಸ್‌ಜಿಎಸ್‌ವೈ ಯೋಜನೆಯಡಿ ಸಹಾಯಧನ ಮೊತ್ತ ರೂ. 1.25 ಲಕ್ಷಗಳನ್ನು ಸದರಿ ಸಂಘದ ಬ್ಯಾಂಕ್ ಖಾತೆ ನೀಡಿ, ರೂ. 4.00 ಲಕ್ಷಗಳ ಸಾಲ ಮಂಜೂರಾತಿ ನೀಡುವಂತೆ ಬ್ಯಾಂಕಿಗೆ ಶಿಫಾರಸ್ಸು ಮಾಡಲಾಯಿತು. ಅದರಂತೆ ಬ್ಯಾಂಕ್‌ನವರು ಸ್ಪಂದಿಸಿ ಸಂಘಕ್ಕೆ ರೂ. 4.00 ಲಕ್ಷಗಳ ಸಾಲವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡಿ, ಹಸು ಖರೀದಿಸಲು,

ಮಾರ್ಗದರ್ಶನ ನೀಡಿದರು. ಮೇಲೆ ತಿಳಿಸಿದಂತೆ ಪ್ರತಿ ಸದಸ್ಯರು ಒಂದೊಂದು ಹಸು ಖರೀದಿಸಿ, ಎರಡು ದಿನಗಳ ಅವಧಿಯ ಬಿಒಪಿ ತರಬೇತಿಯನ್ನು ವಿಬ್‌ಸೆಟ್, ಮಂಡ್ಯ ಇವರಲ್ಲಿ ಪಡೆದು ಹಾಗೂ ವಿಕಸನ (ಎನ್‌ಜಿಒ) ಸಂಸ್ಥೆಯವರಿಂದ ತರಬೇತಿ ಮತ್ತು ಗುಣಮಟ್ಟದ ಹಾಲು ಉತ್ಪಾದನೆ ಬಗ್ಗೆ ಮಾರುಕಟ್ಟೆ ಸೌಲಭ್ಯದ ಬಗ್ಗೆ ಕೌಶಲ್ಯಪಡೆದು ಹಾಲು ಉತ್ಪಾದನೆ ಪ್ರಾರಂಭಿಸಲಾಯಿತು. ಪ್ರತಿ ದಿನಕ್ಕೆ ಕನಿಷ್ಠ 16 ಲೀಟರ್ ಹಾಲು ಕರೆದು ಡೈರಿಗೆ ಹಾಕಿ ಇತರೆ ಖರ್ಚುಗಳನ್ನು ಕಳೆದು ಪ್ರತಿ ದಿನಕ್ಕೆ ಒಂದು ನೂರು ರೂಪಾಯಿಗಳಂತೆ ಆದಾಯ ಸಂಪಾದನೆಯಲ್ಲಿ ತೊಡಗಿರುತ್ತಾರೆ.

ಈ ಮೇಲ್ಕಂಡ ಸದಸ್ಯರು ಕಡು ಬಡವರಾಗಿದ್ದು, ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಯಾದ ಎಸ್‌ಜಿಎಸ್ ವೈ ಅಡಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ರವರ ಸೂಕ್ತ ಮಾರ್ಗದರ್ಶನದಿಂದ ಪ್ರತಿ ಸದಸ್ಯರೂ 2000 ರಿಂದ 3000 ರೂಪಾಯಿಗಳ ಮಾಸಿಕ ಆದಾಯ ಸಂಪಾದನೆ ಮಾಡುತ್ತಿದ್ದಾರೆ. ಈ ಆದಾಯದಿಂದ ತಮ್ಮ ಮಕ್ಕಳನ್ನು ಉತ್ತಮ ಶಾಲೆಗೆ ಕಳುಹಿಸಿ ವಿದ್ಯಾವಂತರನ್ನಾಗಿಸಿರುತ್ತಾರೆ. ಹಾಗೂ ಪ್ರತಿ ಸದಸ್ಯರು ಪ್ರತಿ ತಿಂಗಳು ಸಾಲ ಮತ್ತು ಬಡ್ಡಿಯನ್ನು ಬ್ಯಾಂಕಿಗೆ ಮರುಪಾವತಿ ಮಾಡುತ್ತಿದ್ದಾರೆ. ಇವರ ಆರ್ಥಿಕ ಮಟ್ಟ ಹಾಗೂ ಜೀವನಮಟ್ಟ ಸುಧಾರಿಸಿದೆ.

ವರದಿ : **ಎಂ. ರವೀಂದ್ರನಾಥ್, ಎಸ್‌ಜಿಎಸ್‌ವೈ ಫೆಸಿಲಿಟೇಟರ್, ತಾ.ಪಂ. ಮಂಡ್ಯ**
ಮಾರ್ಗದರ್ಶನ : ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ), ಜಿ.ಪಂ.ಮಂಡ್ಯ

ಯಶೋಗಾಥೆ

# ಶ್ರೀ ವಿನಾಯಕ ಪುರುಷರ ಸ್ವಸಹಾಯ ಸಂಘ, ಜಿ. ಕೆಬ್ಬಹಳ್ಳಿ, ಮಂಡ್ಯ

*ಎಂ. ರವೀಂದ್ರನಾಥ್,*

ಮಂಡ್ಯ ಜಿಲ್ಲೆಯಲ್ಲಿನ ಯಶೋಗಾಥೆಗಳ ಕಿರು ಚಿತ್ರಣ

ಮಂಡ್ಯಜಿಲ್ಲೆಯ ಜಿ. ಕಬ್ಬಳ್ಳಿಯಲ್ಲಿ ಶ್ರೀ ವಿನಾಯಕ ಪುರುಷರ ಸ್ವಸಹಾಯ ಸಂಘವು ಕಾರ್ಯನಿರ್ವಹಿಸುತ್ತಿದ್ದು ಅನೇಕ ಕಾರ್ಯಕ್ರಮಗಳನ್ನು ಅಮ್ಮಿಕೊಂಡಿದೆ. ಅದರಲ್ಲಿ ಇಟ್ಟಿಕೆ ತಯಾರಿಕೆ ಪ್ರಮುಖ ಚಟುವಟಿಕೆಯಾಗಿದೆ.

ಚಟುವಟಿಕೆಯ ವಿವರ ಕೆಳಕಂಡಂತಿದೆ

| | | | |
|---|---|---|---|
| 1. | ತಾಲ್ಲೂಕು | : | ಮಂಡ್ಯ |
| 2. | ಜಿಲ್ಲೆ | : | ಮಂಡ್ಯ |
| 3. | ಗ್ರಾ.ಪಂ. | : | ಬಿ. ಹೊಸೂರು |
| 4. | ಗ್ರಾಮ | : | ಜಿ. ಕೆಬ್ಬಹಳ್ಳಿ |
| 5. | ಸ್ವಸಹಾಯ ಸಂಘದ ಹೆಸರು | : | ಶ್ರೀ ವಿನಾಯಕ ಪುರುಷರ ಸ್ವಸಹಾಯ ಸಂಘ |
| 6. | ಸಂಘದ ಪ್ರಾರಂಭ | : | 22.01.2001 |
| 7. | ಸದಸ್ಯರ ಸಂಖ್ಯೆ ಮತ್ತು ವರ್ಗ | : | 16ಸದಸ್ಯರು (16 ಬಿಪಿಎಲ್ ಸದಸ್ಯರು)ಇತರೆ |
| 8. | ವೈಯಕ್ತಿಕ ಉಳಿತಾಯ | : | 10,000–00 |
| 9. | ಚಟುವಟಿಕೆ | : | ಸಿಮೆಂಟ್ ಇಟ್ಟಿಗೆ ತಯಾರಿಕೆ |
| 10. | ಬಂಡವಾಳ ವಿವರ | : | ಅ)ಕಾಂಕ್ರಿಟ್ ಮಿಕ್ಸರ್ ನಂ. 01 ರೂ. 35000/–<br>ಬಿ) ಇಟ್ಟಿಗೆ ತಯಾರಿಕಾ ಮಿಷನ್ ನಂ. 01 ರೂ. 85000/–<br>ಸಿ) ಕಚ್ಚಾ ಸಾಮಗ್ರಿಗಳ ದರ ರೂ. 50000/–<br>ಡಿ) ಕಟ್ಟಡ ಬಾಡಿಗೆ ತಿಂಗಳು ದರ ರೂ. 2000/– |
| 11. | ಕಚ್ಚಾ ಸಾಮಗ್ರಿಗಳು ಸಿಗುವ ಸ್ಥಳ | : | 12 ಕಿ.ಮೀ. ಹತ್ತಿರ |
| 12. | ಮಾರುಕಟ್ಟೆ ಸೌಲಭ್ಯ | : | ಸ್ಥಳೀಯ ಮಾರುಕಟ್ಟೆ |
| 13. | ಪ್ರತಿದಿನದ ಉತ್ಪಾದನೆ | : | 1000 ಇಟ್ಟಿಗೆಗಳು |
| 14. | ಮಾನವ ದಿನಗಳು ಇಟ್ಟಿಗೆಗಳ ಉತ್ಪಾದನೆ | : | ದಿನಕ್ಕೆ 16 ಮಾನವ ದಿನಗಳಲ್ಲಿ 1000 |
| 15. | ಆರ್ಥಿಕ ನೆರವು | : | ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ತಗ್ಗಹಳ್ಳಿ, ಮಂಡ್ಯ ತಾ॥<br>ರೂ. 4.00 ಲಕ್ಷಗಳ ಬ್ಯಾಂಕ್ ಸಾಲ ಸೌಲಭ್ಯ |



ಎಂ. ರವೀಂದ್ರನಾಥ್, ಮಂಡ್ಯ ತಾಲ್ಲೂಕು, ಎಸ್‌ಜಿಎಸ್‌ವೈ ಫೆಸಿಲಿಟೇಟರ್, ಹಾಗೂ ವಿಜ್ಞಾನ ವೇದಿಕೆ (ರಿ),, (ಎನ್‌ಜಿಓ) ಮಂಡ್ಯ ಇವರ ಮಾರ್ಗದರ್ಶನದಲ್ಲಿ ಶ್ರೀ ವಿನಾಯಕ ಪುರುಷರ ಸ್ವಸಹಾಯ ಸಂಘವು ದಿನಾಂಕ : 22.01.2001 ರಂದು ಪ್ರಾರಂಭವಾಯಿತು ಹಾಗೂ ಅದೇ ದಿನಾಂಕದಂದು ಸೇವಾ ಕ್ಷೇತ್ರದ ಬ್ಯಾಂಕ್ ಆದ ಶ್ರೀ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ಹೆಚ್. ಮಲ್ಲಿಗೆರೆಯಲ್ಲಿ ಸಂಘದ ಉಳಿತಾಯ ಖಾತೆ ತೆರೆದು, ಪ್ರತಿ ಸದಸ್ಯರಿಂದ ತಲಾ ಉಳಿತಾಯ ರೂ. 20ಗಳಂತೆ ತಿಂಗಳಿಗೆ ತಲಾ ಉಳಿತಾಯ ರೂ. 80ಗಳನ್ನು ಉಳಿತಾಯ ಮಾಡಲಾಯಿತು. ಪ್ರತಿವಾರ ಉಳಿತಾಯ ಮೊತ್ತವನ್ನು ಬ್ಯಾಂಕ್‌ಗೆ ಜಮೆ ಮಾಡಲಾಯಿತು.

ಸಂಘ ಸ್ಥಾಪನೆಗಿಂತ ಮೊದಲು ಈ ಸದಸ್ಯರು ಕೃಷಿ ಕೂಲಿ ಕಾರ್ಮಿಕರಾಗಿದ್ದು, ಉಪಕಸುಬುಗಳಾದ ಹಸು ಸಾಕಾಣಿಕೆ ಮತ್ತು ಕುರಿ ಸಾಕಾಣಿಕೆ ಮಾಡಿಕೊಂಡಿದ್ದರು.

2004-05ನೇ ಸಾಲಿನಲ್ಲಿ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ಹೆಚ್. ಮಲ್ಲಿಗೆರೆಯವರು ಸಂಘಕ್ಕೆ ರೂ. 50,000-00ಗಳ ಸಾಲವಾಗಿ ಮಂಜೂರು ಮಾಡಿದರು. 2008ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ನಿಂದ ಎಸ್‌ಜಿಎಸ್‌ವೈ ಯೋಜನೆಯಡಿ ರೂ. 10000ಗಳನ್ನು ಸುತ್ತು ನಿಧಿ ಬಿಡುಗಡೆ ಮಾಡಿಕೊಡಲಾಯಿತು. ರೂ. 50000-00 ಸಾಲದಲ್ಲಿ ಕೆಲಸದಸ್ಯರು ಸಂಘದಿಂದ ಆಂತರಿಕ ಸಾಲ ಪಡೆದು, ಬ್ಯಾಂಕಿಗೆ ನಿಗದಿತ ಅವಧಿಯೊಳಗೆ ಸಾಲ ಮರುಪಾವತಿ ಮಾಡಿದರು. 2010-11ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ನಿಂದ ಎಸ್‌ಜಿಎಸ್‌ವೈ ಯೋಜನೆಯಡಿ ಸಹಾಯಧನ ಮೊತ್ತ ರೂ. 1.25 ಲಕ್ಷಗಳನ್ನು ಸದರಿ ಸಂಘದ ಬ್ಯಾಂಕ್ ಖಾತೆ ನೀಡಿ, ರೂ. 5.00 ಲಕ್ಷಗಳ ಸಾಲ ಮಂಜೂರಾತಿ ನೀಡುವಂತೆ ಬ್ಯಾಂಕಿಗೆ ಶಿಫಾರಸ್ಸು ಮಾಡಲಾಯಿತು. ಅದರಂತೆ ಬ್ಯಾಂಕ್‌ನವರು ಸ್ಪಂದಿಸಿ ಸಂಘಕ್ಕೆ ರೂ. 5.00 ಲಕ್ಷಗಳ ಸಾಲವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡಿ, ಕಚ್ಚಾ ಪದಾರ್ಥಗಳ ಖರೀದಿ, ಸ್ಥಳ ಬಾಡಿಗೆ, ಯಂತ್ರಗಳನ್ನು ಖರೀದಿಸಲು, ಮಾರ್ಗದರ್ಶನ ನೀಡಿದರು.

ಮೇಲೆ ತಿಳಿಸಿದಂತೆ ಕಾಂಕ್ರಿಟ್ ಮಿಕ್ಸರ್ ಯಂತ್ರ, ಇಟ್ಟಿಗೆ ತಯಾರಿಕಾ ಯಂತ್ರ, ಕಚ್ಚಾ ಸಾಮಗ್ರಿಗಳನ್ನು ಖರೀದಿಸಲಾಯಿತು. ವಿಬ್‌ಸೆಟ್ ಹಾಗೂ ವಿಕಸನ (ಎನ್‌ಜಿಓ) ಸಂಸ್ಥೆಯವರಿಂದ ತರಬೇತಿ ಮತ್ತು ಗುಣಮಟ್ಟದ ಉತ್ಪಾದನೆ ಬಗ್ಗೆ ಮಾರುಕಟ್ಟೆ ಸೌಲಭ್ಯದ ಬಗ್ಗೆ ಕೌಶಲ್ಯಪಡೆದು ಉತ್ಪಾದನೆ ಪ್ರಾರಂಭಿಸಲಾಯಿತು. ಪ್ರತಿ ದಿನಕ್ಕೆ 16 ಮಾನವ ದಿನಗಳಲ್ಲಿ 1000 (ಒಂದು ಸಾವಿರ) ಇಟ್ಟಿಗೆಗಳನ್ನು ಉತ್ಪಾದಿಸಲಾಯಿತು. ಮಾಸಿಮ (24 ದಿನಗಳಲ್ಲಿ) 20,000 ರಿಂದ 25,000 ಇಟ್ಟಿಗೆಗಳ ಉತ್ಪಾದನೆ ಮಾಡಲಾಯಿತು. ಹಾಗೂ ಸ್ಥಳೀಯವಾಗಿ ಮಾರಾಟ ಮಾಡುತ್ತಿರುವರು, ಪ್ರತಿ ಸದಸ್ಯರು ಪ್ರತಿ ತಿಂಗಳು, ಸಾಲ ಮತ್ತು ಬಡ್ಡಿ ಮರುಪಾವತಿ ಮಾಡಿ, ಮಾಸಿಕ ರೂ. 4,000-00 ರಿಂದ 5,000-00 ಗಳ ವರೆಗೆ ತಲಾ ಆದಾಯ ಗಳಿಸಿ, ಉತ್ತಮ ಜೀವನ ನಡೆಸುತ್ತಿದ್ದಾರೆ. ಅವರ ಆರ್ಥಿಕ ಮಟ್ಟ ಹಾಗೂ ಜೀವನಮಟ್ಟ ಸುಧಾರಿಸಿದೆ.

4ವರದಿ : ಎಂ. ರವೀಂದ್ರನಾಥ್, ಎಸ್‌ಜಿಎಸ್‌ವೈ ಫೆಸಿಲಿಟೇಟರ್, ತಾ.ಪಂ. ಮಂಡ್ಯ
ಮಾರ್ಗದರ್ಶನ : ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ), ಜಿ.ಪಂ.ಮಂಡ



# ಗ್ರಾಮೀಣಾಭಿವೃದ್ಧಿಯಲ್ಲಿ ಕಿರು ಹಣಕಾಸಿನ ಪಾತ್ರ

*–ದಿನೇಶ್ ಪಿ.ಟಿ.*

ಕಿರು ಹಣಕಾಸಿನ ಪಾತ್ರ ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಈ ಬಗ್ಗೆ ಒಂದು ವಿಸ್ತೃತ ಲೇಖನ.

ಗ್ರಾಮೀಣ ವಲಯವು ದೇಶದ ಆರ್ಥಿಕತೆಯಲ್ಲಿ ಒಂದು ಮಹತ್ವಪೂರ್ಣವಾದ ಸ್ಥಾನವನ್ನು ಪಡೆದಿದೆ. ಅದರಲ್ಲಿ ಕೃಷಿಯ ಧನಾತ್ಮಕ ಪಾತ್ರ ಗ್ರಾಮೀಣ ಅಭಿವೃದ್ಧಿಯನ್ನು ಸಫಲಗೊಳಿಸುವಲ್ಲಿ ಮುಖ್ಯವೆನಿಸಿದೆ. ಭಾರತ ಹಳ್ಳಿಗಳ ದೇಶ ಎಂದು ಎಲ್ಲರಿಗೂ ತಿಳಿದಿದೆ ಮತ್ತು ಕೃಷಿ ಪ್ರಧಾನವಾದ ಭಾರತದ ಭವಿಷ್ಯ ದೇಶದ ಸುಮಾರು 6 ಲಕ್ಷ ಹಳ್ಳಿಗಳ ಪುನರುಜ್ಜೀವನ ಮತ್ತು ಏಳಿಗೆಯಲ್ಲಿ ಅಡಗಿದೆ ಎಂಬುದು ನಿರ್ವಿವಾದ ಸಂಗತಿ.

ಗ್ರಾಮೀಣಾಭಿವೃದ್ಧಿಯ ಪರಿಕಲ್ಪನೆ ತುಂಬಾ ವಿಶಾಲವಾದದ್ದು ಮತ್ತು ಅದು ಕೃಷಿ ಮತ್ತು ಕೃಷಿಯೇತರ ಅಭಿವೃದ್ಧಿಯನ್ನು ಸೂಚಿಸುತ್ತದೆ. ಗ್ರಾಮೀಣಾಭಿವೃದ್ಧಿಯ ಮೂಲ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಡತನ ರೇಖೆಯಿಂದ ಕೆಳಮಟ್ಟದಲ್ಲಿರುವ ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನಮಟ್ಟವನ್ನು ಸುಧಾರಿಸುವುದಾಗಿದೆ. ಅಭಿವೃದ್ಧಿಯನ್ನು ಫಲಕಾರಿ, ಅಪೇಕ್ಷಿತ, ಅರ್ಥಪೂರ್ಣ ಹಾಗೂ ಉಪಯುಕ್ತಗೊಳಿಸಬೇಕಾದರೆ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಬೇಕು ಎಂಬ ಅಂಶವನ್ನು ಅನೇಕ ತಜ್ಞರು ಕಂಡುಕೊಂಡಿರುವರು. ಆದ್ದರಿಂದಲೇ ನೋಬೆಲ್ ಪ್ರಶಸ್ತಿ ವಿಜೇತ ಮಿಲ್ಟನ್ ಫ್ರೀಡ್‌ಮನ್ ಈ ರೀತಿ ಹೇಳಿದ್ದಾರೆ. "ಬಡವರು ಅವರ ಉದಾಸೀನತೆಯಿಂದ ಅಲ್ಲ, ಬದಲಾಗಿ ಬಂಡವಾಳದ ಕೊರತೆಯಿಂದಾಗಿ ಬಡವರಾಗಿ ಉಳಿಯುತ್ತಾರೆ". ಈ ಹೇಳಿಕೆಯು ನಮಗೆ ಗ್ರಾಮೀಣ ಅಭಿವೃದ್ಧಿಯಲ್ಲಿ ಹಣಕಾಸಿನ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಗ್ರಾಮೀಣ ಹಣಕಾಸಿನ ಮೂಲ ಉದ್ದೇಶ ಸಂಪೂರ್ಣ ಮತ್ತು ಸಕಾಲಿಕ ಹಣಕಾಸಿನ ನೆರವನ್ನು ಹಳ್ಳಿಗರಿಗೆ ಕೃಷಿ, ಕೃಷಿಪೂರಕ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಒದಗಿಸಿ ತನ್ಮೂಲಕ ಅವರು ಅಭಿವೃದ್ಧಿ ಹೊಂದಲು ಅವಕಾಶ ಕಲ್ಪಿಸುವುದು ಆಗಿದೆ. ಭಾರತದಂತಹ ಅಲ್ಪಾಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಡತನ ನಿವಾರಣೆಯು ಬಹುಮುಖಿ ಅಭಿವೃದ್ಧಿ ಯೋಜನೆಗಳನ್ನು ಅಪೇಕ್ಷಿಸುತ್ತದೆ. ಹಾಗೂ ಅವುಗಳ ಯಶಸ್ವಿ ಅನುಷ್ಠಾನವನ್ನು ಬಯಸುತ್ತದೆ. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ದೇಶದಲ್ಲಿ ಜಾರಿಗೊಳಿಸಲಾದ ಸಹಸ್ರಾರು ಬಡತನ ನಿವಾರಣೆಯ ಮತ್ತು ಉದ್ಯೋಗ ಸೃಷ್ಟಿಯ ಕಾರ್ಯಕ್ರಮಗಳು ಅಲ್ಪಮಟ್ಟಿನ ಯಶಸ್ಸನ್ನು ಮಾತ್ರ ಕಂಡಿವೆ. ಇಂತಹ ಕಾರ್ಯಕ್ರಮಗಳು ಕೇವಲ ಗುರಿ ಅಭಿಮುಖವಾಗಿದ್ದುದು. ಜನರ ಪಾಲ್ಗೊಳ್ಳುವಿಕೆಯ ಕೊರತೆ, ಸ್ಥಳೀಯ ಸಂಪನ್ಮೂಲಗಳ ಬಳಕೆಗೆ ಸರಿಯಾದ ಅವಕಾಶ ಕಲ್ಪಿಸದಿದ್ದುದು, ತರಬೇತಿ ಮತ್ತು ಉದ್ಯೋಗ ಸೃಷ್ಟಿಯ ಕಾರ್ಯಕ್ರಮಗಳ ನಡುವೆ ಸಮರ್ಪಕವಾದ ಸಂಪರ್ಕ ಕೊಂಡಿಯನ್ನು ಅಭಿವೃದ್ಧಿಪಡಿಸಲು ವಿಫಲವಾದುದು ಮುಂತಾದುವು ಈ ಕಾರ್ಯಕ್ರಮಗಳು ಸಂಪೂರ್ಣ ಫಲಪ್ರದವಾಗದೇ ಇರಲು ಕಾರಣಗಳಾದವು.

ಬ್ಯಾಂಕುಗಳ ರಾಷ್ಟ್ರೀಕರಣದ ಮೊದಲು ಬ್ಯಾಂಕುಗಳು ನಗರಗಳಲ್ಲೇ ಕೇಂದ್ರೀಕೃತವಾಗಿದ್ದು ಲಾಭದ ದೃಷ್ಟಿಕೋನದಿಂದ ಮಾತ್ರ ಕೆಲಸ ಮಾಡುತ್ತಿದ್ದವು. ಅವುಗಳ ಅನುಕೂಲತೆಗಳು ಕೇವಲ ಕೆಲವರಿಗೆ ಸೀಮಿತವಾಗಿದ್ದವು. ಗ್ರಾಮೀಣ ಪ್ರದೇಶದಲ್ಲಿ ಜನರು ಸಾಲಕ್ಕಾಗಿ ಹಣದ ಲೇವಾದೇವಿಗಾರರು, ಸಾಹುಕಾರರು, ಹಣದ ದಲ್ಲಾಳಿಗಳು, ವರ್ತಕರು ಮೊದಲಾದವರನ್ನು ಒಳಗೊಂಡ ಸಾಂಸ್ಥಿಕೇತರ ಮೂಲಗಳನ್ನು ಹೆಚ್ಚಾಗಿ ಅವಲಂಬಿಸಬೇಕಾದ ದುಸ್ಥಿತಿ ಇತ್ತು.

1981ರ ಅಖಿಲ ಭಾರತೀಯ ಸಾಲ ಮತ್ತು ಹೂಡಿಕೆ ಸಮೀಕ್ಷೆಯ ಪ್ರಕಾರ ಗ್ರಾಮೀಣ ಕುಟುಂಬಗಳು ತಮ್ಮ ಒಟ್ಟು ಸಾಲದ ಕೋರಿಕೆಗಳಲ್ಲಿ ಶೇ. 38 ರಷ್ಟಕ್ಕೆ ಸಾಂಸ್ಥಿಕೇತರ ಮೂಲಗಳನ್ನೇ ಅವಲಂಬಿಸಿದ್ದವು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸ್ಥಾಪನೆ,

1969ರಲ್ಲಿ 6 ವಾಣಿಜ್ಯ ಬ್ಯಾಂಕ್‌ಗಳ ರಾಷ್ಟ್ರೀಕರಣ, 1980ರಲ್ಲಿ 14 ವಾಣಿಜ್ಯ ಬ್ಯಾಂಕ್‌ಗಳ ರಾಷ್ಟ್ರೀಕರಣ, ಬ್ಯಾಂಕ್‌ಗಳು ಆದ್ಯತಾ ವಲಯಗಳಿಗೆ ಹಣಕಾಸಿನ ನೆರವನ್ನು ಒದಗಿಸುವ ಕ್ರಿಯೆಗೆ ನಾಂದಿ ಹಾಡಿದವು.

ತದನಂತರ ಸರಕಾರ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿತು. ಅದರಲ್ಲಿ 1975ರಲ್ಲಿ ಪ್ರಾರಂಭಿಸಲಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಮುಖ್ಯವಾದುದು. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳು ಇಲ್ಲದಿರುವ ಗ್ರಾಮೀಣ ಪ್ರದೇಶಗಳಲ್ಲಿ ಹಣಕಾಸಿನ ಲಭ್ಯತೆಯನ್ನು ಹೆಚ್ಚಿಸಲು ಪ್ರಾದೇಶಿಕ ಬ್ಯಾಂಕುಗಳನ್ನು ಸ್ಥಾಪಿಸಲಾಯಿತು. ಆದರೆ ಇವುಗಳು ತಮ್ಮ ಶಾಖೆಗಳನ್ನು ವಿಸ್ತರಿಸುವಲ್ಲಿ ಸಫಲವಾದರೂ ಸಾಲ ನೀಡಿಕೆ ಮತ್ತು ಠೇವಣಿಯ ವಿಚಾರದಲ್ಲಿ ಹೆಚ್ಚು ಯಶಸ್ವಿಯಾಗಲಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಸ್ವಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ಪ್ರಮುಖ ಕಾರ್ಯಕ್ರಮವಾದ ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವನ್ನು (ಐ.ಆರ್.ಡಿ.ಪಿ.) 1979ರಲ್ಲಿ ಜಾರಿಗೊಳಿಸಲಾಯಿತು. ಬಹಳ ನಿರೀಕ್ಷೆಗಳನ್ನಿಟ್ಟುಕೊಂಡು ಮಹಾತ್ವಾಕಾಂಕ್ಷೆಯಿಂದ ಆರಂಭಿಸಲಾದ ಈ ಯೋಜನೆಯು ಸರಿಯಾದ ಯಶಸ್ಸನ್ನು ಕಾಣಲಿಲ್ಲ. ಆಸ್ತಿಯ ಸೃಷ್ಟಿ, ಉದ್ಯೋಗ ಲಭ್ಯತೆ, ಸಾಲದ ಬಳಕೆ, ಆದಾಯ ಸೃಷ್ಟಿ, ಸಾಲದ ಮರುಪಾವತಿ ಮುಂತಾದ ಯಾವುದೇ ವಿಷಯವನ್ನು ಗಮನಿಸಿದರೂ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿನ ಪ್ರಗತಿ ಆಶಾದಾಯಕವಾಗಿರಲಿಲ್ಲ.

ಆದ್ದರಿಂದ ಬಡತನ ನಿವಾರಣೆಯ ದಿಸೆಯಲ್ಲಿ ಬ್ಯಾಂಕಿನ ಸೌಲಭ್ಯಗಳ ಯೋಜನೆಗಳಿಗೆ ಬದಲಿಯಾಗಿ ಏನಾದರೊಂದು ಹೊಸತನ್ನು ವಿಕಸಿತಗೊಳಿಸುವ ಸವಾಲು ಎದುರಾಯಿತು. ಈ ಹಿನ್ನೆಲೆಯಲ್ಲಿ ವೈಫಲ್ಯತೆಗಳಿಂದ ಕಲಿತ ಪಾಠಗಳ ಆಧಾರದಲ್ಲಿ ಹೊಸರೀತಿಯ ಕಾರ್ಯತಂತ್ರವನ್ನು ಅಳವಡಿಸಬೇಕಾದ ಅನಿವಾರ್ಯತೆ ನಿರ್ಮಾಣವಾಯಿತು. ವ್ಯಕ್ತಿಯನ್ನು ಆಧರಿಸಿ ಬಹಳ ಸಣ್ಣ ಪ್ರಮಾಣದ ವ್ಯಕ್ತಿಯನ್ನೇ ಆಧರಿಸಿ ಬಹಳ ಸಣ್ಣ ಪ್ರಮಾಣದ ಸಾಲವನ್ನು ನೀಡುತ್ತಿದ್ದುದು ಈ ಮೊದಲಿನ ಕಾರ್ಯಕ್ರಮಗಳ ವಿಫಲತೆಗೆ ಪ್ರಮುಖ ಕಾರಣವಾಗಿದ್ದಿರಬಹುದು. ಆದ್ದರಿಂದ ಗುಂಪು ಚಟುವಟಿಕೆಗಳನ್ನು ಉತ್ತೇಜಿಸುವ, ಬೇಡಿಕೆಯಲ್ಲಿರುವ ಸರಕುಗಳನ್ನು ಗುಂಪಿನಲ್ಲಿ ಉತ್ಪಾದಿಸುವ ಉತ್ಪಾದನಾ ಚಟುವಟಿಕೆಗಳಿಗೆ ಸಾಕಷ್ಟು ಪ್ರಮಾಣದ ಹಣಕಾಸಿನ ಸೌಲಭ್ಯವನ್ನು ಒದಗಿಸುವ ಚಿಂತನೆಗೆ ಪುಷ್ಠಿ ದೊರೆಯಿತು.

ಭಾರತ ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಬ್ಯಾಂಕಿಂಗ್ ಶಾಖೆಗಳ ಜಾಲವನ್ನು ಹೊಂದಿದೆ. ಆದರೆ ಕೋಟಿಗಟ್ಟಲೆ ಬಡವರು ಇದರ ಸೇವೆಯಿಂದ ಹೊರತಾಗಿದ್ದಾರೆ. ಜನಸಾಮಾನ್ಯರನ್ನು ತಲುಪುವ ನಿಟ್ಟಿನಲ್ಲಿ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿದರೂ ಇನ್ನೂ ಸಹ ಅದು ಕೇವಲ ಹಗಲುಗನಸಾಗಿ ಉಳಿದಿದೆ. ಭಾರತ 12,000 ಜಿಲ್ಲಾ ಸಹಕಾರಿ ಬ್ಯಾಂಕುಗಳ ಶಾಖೆಗಳು, 52,000 ವಾಣಿಜ್ಯ ಬ್ಯಾಂಕುಗಳ ಶಾಖೆಗಳು, 14,522 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಶಾಖೆಗಳನ್ನು ಹೊಂದಿದ್ದರೂ ಸಹ ಸಾಲದ ಬೇಡಿಕೆ ಹಾಗೂ ಪೂರೈಕೆಯಲ್ಲಿ ಹೊಂದಾಣಿಕೆಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಭಾರತ ಅತ್ಯಂತ ದೊಡ್ಡ ಹಣಕಾಸಿನ ಜಾಲವನ್ನು ಹೊಂದಿದ್ದರೂ ಬಹುತೇಕ ಬಡವರು ಸಾಂಸ್ಥಿಕ ಹಣಕಾಸಿನ ಸೇವೆಯಿಂದ ಹೊರಗುಳಿದಿದ್ದಾರೆ. ಅತ್ಯಂತ ದುರದೃಷ್ಟಕರ ಸಂಗತಿಯೆಂದರೆ 75 ಮಿಲಿಯ ಜನರು ತಮ್ಮ ಹಣಕಾಸಿನ ನೆರವಿಗಾಗಿ ಲೇವಾದೇವಿದಾರರನ್ನು ಅವಲಂಬಿಸಿದ್ದಾರೆ. ಒಟ್ಟಿನಲ್ಲಿ ಕಠಿಣ ಬ್ಯಾಂಕಿಂಗ್ ವ್ಯವಸ್ಥೆ ಅಸಮರ್ಪಕ ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಇದರಿಂದಾಗಿ ಬಡಜನರಿಗೆ ಸಾಕಷ್ಟು ಹಣಕಾಸು ಲಭ್ಯವಾಗದೆ ಇರುವುದು ಕಿರುಹಣಕಾಸು ಕಾರ್ಯಕ್ರಮಗಳು ಪ್ರಾರಂಭವಾಗಲು ಮುಖ್ಯ ಕಾರಣವಾಯಿತು.

ಕಿರುಹಣಕಾಸು ಎಂದರೆ ಸಣ್ಣ ಪ್ರಮಾಣದ ಅಥವಾ ಚಿಕ್ಕ ಮೊಬಲಗಿನ ಸಾಲವನ್ನು ಆರ್ಥಿಕ ಚಟುವಟಿಕೆಗಳಿಗೆ ನೀಡುವುದು. ಕಿರುಹಣಕಾಸು ಗ್ರಾಮೀಣ ಮತ್ತು ನಗರ ಪ್ರದೇಶಗಳ ಬಡಜನರು ಆದಾಯ ತರುವಂತಹ ಚಟುವಟಿಕೆಗಳನ್ನು ಆರಂಭಿಸಲು ಮತ್ತು ವಿಸ್ತರಿಸಲು ಹಾಗೂ ಕುಟುಂಬದ ಆದಾಯವನ್ನು ಸುಧಾರಿಸಲು ಸಾಧ್ಯವಾಗುವಂತೆ ಉಳಿತಾಯ, ಸಾಲ ಮತ್ತು ವಿಮಾ ಸೌಲಭ್ಯಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ.

ಭಾರತದಲ್ಲಿ ಸ್ವಸಹಾಯ ಸಂಘಗಳು ಕಿರುಹಣಕಾಸಿನ ವಾಹಿನಿಯಾಗಿ ಕೆಲಸ ಮಾಡುತ್ತಿವೆ ಮತ್ತು ಕಿರುಹಣಕಾಸಿನ ಕಾರ್ಯಕ್ರಮವು ಮುಖ್ಯವಾಗಿ ಸ್ವಸಹಾಯ ಗುಂಪು–ಬ್ಯಾಂಕ್ ಜೋಡಣೆಯ ಕಾರ್ಯಕ್ರಮದ ಆಶ್ರಯದಲ್ಲಿ ವಿಜೃಂಭಿಸುತ್ತಿದೆ. ಭಾರತದಲ್ಲಿ ಇಂದು ಕಿರುಹಣಕಾಸಿನ ಮೂಲಕ ಸ್ವಸಹಾಯ ಗುಂಪುಗಳಿಗೆ ಮತ್ತು ಚಿಕ್ಕ ಆರ್ಥಿಕ ಚಟುವಟಿಕೆಗಳಿಗೆ ಒದಗಿಸಲಾಗುತ್ತಿರುವ ಹಣಕಾಸಿನ ಸೌಲಭ್ಯವನ್ನು ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಕಿರುಹಣಕಾಸಿನ ಕಾರ್ಯಕ್ರಮ ಎಂದು ಹೆಮ್ಮೆಯಿಂದ ಹೇಳಿಕೊಳ್ಳಲಾಗುತ್ತಿದೆ.

ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯುಳ್ಳ ಹಾಗೂ ಸ್ವಸಹಾಯ ಮತ್ತು ಪರಸ್ಪರ ಸಹಾಯದ ಮೂಲಕ ಆರ್ಥಿಕ ಉನ್ನತಿಯನ್ನು ಸಾಧಿಸಿಕೊಳ್ಳುವ ಗುರಿಯನ್ನು ಹೊಂದಿರುವ ಜನರ ಒಂದು ಗುಂಪನ್ನು ಸ್ವಸಹಾಯ ಗುಂಪು ಅಥವಾ ಸಂಘ ಎಂದು ಕರೆಯಲಾಗುತ್ತದೆ. ಸಾಮಾನ್ಯ ಜನರಲ್ಲಿ ಉಳಿತಾಯ ಮನೋಭಾವನೆ ಬೆಳೆಸುವುದು ವಿವಿಧ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡುವುದು, ಗುಂಪು ರಚಿಸಿ ಉಳಿತಾಯ ನಿಧಿ ಸ್ಥಾಪನೆ ಮಾಡಿ ಆ ಹಣವನ್ನು ತಮ್ಮ ತಮ್ಮೊಳಗೆ ಬಳಸಿಕೊಂಡು ಅಭಿವೃದ್ಧಿ ಸಾಧಿಸುವುದು, ಪರಸ್ಪರ ಸಹಾಯದ ಗುಣಗಳನ್ನು ಬೆಳೆಸುವುದು. ಆರ್ಥಿಕ ಮತ್ತು ಸಾಮಾಜಿಕ ಸಶಕ್ತತೆ ಮಾಡಿಸುವುದು ಮತ್ತು ನಾಯಕತ್ವ ಬೆಳೆಸುವುದೇ ಸ್ವಸಹಾಯ ಸಂಘಗಳ ರಚನೆಯ ಉದ್ದೇಶವಾಗಿದೆ. ಅಂಕಿಅಂಶಗಳ ಪ್ರಕಾರ ಸ್ವಸಹಾಯ ಗುಂಪುಗಳಲ್ಲಿ ಮಹಿಳೆಯರ ಪ್ರಾಬಲ್ಯ ಎತ್ತಿ ತೋರುತ್ತಿದೆ. ಒಟ್ಟಾರೆಯಾಗಿ ಗಮನಿಸಿದರೆ ಶೇ. 10 ರಷ್ಟು ಮಾತ್ರ ಪುರುಷ ಗುಂಪುಗಳು ಇರುವುದು ಕಂಡುಬರುತ್ತದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು ಸ್ವಸಹಾಯ ಗುಂಪುಗಳಲ್ಲಿ ಸುಮಾರು ಶೇ. 82 ರಷ್ಟು ಮಹಿಳಾ ಗುಂಪುಗಳು ಮತ್ತು ಸುಮಾರು 18 ರಷ್ಟು ಪುರುಷ ಗುಂಪುಗಳಾಗಿವೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಹಿಳಾ ಗುಂಪುಗಳ ಪ್ರಮಾಣ ಸುಮಾರು ಶೇ. 60ರಷ್ಟು ಮತ್ತು ಪುರುಷ ಗುಂಪುಗಳ ಪ್ರಮಾಣ ಶೇ.

40ರಷ್ಟು ಇದೆ.

ಕಿರು ಹಣಕಾಸಿನ ಪೂರೈಕೆಯು ಬೇಡಿಕೆಗಿಂತ ಬಹಳ ಕಡಿಮೆ ಇದೆ ಎಂದು ತಿಳಿದು ಬಂದಿದೆ. ಭಾರತದಲ್ಲಿ ಇಂದು ಕಿರುಹಣಕಾಸಿನ ಬೇಡಿಕೆ 2 ಲಕ್ಷ ಕೋಟಿಯಷ್ಟು ಇದ್ದರೆ ಅದರ ಪೂರೈಕೆ ಕೇವಲ 7,000 ಕೋಟಿಗೆ ಸೀಮಿತವಾಗಿದೆ. ಇದರಿಂದಾಗಿ ಅಭಿವೃದ್ಧಿಯ ಗತಿ ತುಂಬಾ ಕುಂಠಿತವಾಗಿದೆ. ಕಿರುಹಣಕಾಸಿನ ಕಾರ್ಯಕ್ರಮಗಳು ಬಡತನ ನಿರ್ಮೂಲನಾ ವಿಷಯದಲ್ಲಿ ಮತ್ತು ಮಹಿಳೆಯ ಸಬಲೀಕರಣದ ವಿಷಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಗ್ರಾಮೀಣ ಜನರ ಆರ್ಥಿಕ ಮಟ್ಟವನ್ನು ಸುಧಾರಿಸುವಲ್ಲಿ ಮತ್ತು ಅವರಲ್ಲಿ ಆತ್ಮವಿಶ್ವಾಸವನ್ನು ತುಂಬುವಲ್ಲಿ ಯಶಸ್ವಿಯಾಗಿದೆ. ಕಿರುಹಣಕಾಸಿನ ಕಾರ್ಯಕ್ರಮಗಳು, ಗ್ರಾಮೀಣ ಪ್ರದೇಶಗಳ ಅಸಂಘಟಿತ ಕಾರ್ಮಿಕರ, ಮಹಿಳೆಯರ, ಭೂರಹಿತರ, ಅಸಂಘಟಿತ ಕುಶಲಕರ್ಮಿಗಳ ಮತ್ತು ಒಟ್ಟಾರೆಯಾಗಿ ಬಡವರ ಬದುಕನ್ನು ಹಸನುಗೊಳಿಸಲು ಸಾರ್ಥಕ ವೇದಿಕೆಯಾಗಿ ಪರಿಣಮಿಸಿವೆ. ಭಾರತದಲ್ಲಿ ಇದೀಗ ಕಿರುಹಣಕಾಸಿನ ಮಹತ್ವ ಹೆಚ್ಚುತ್ತಿದೆ. ಅನೇಕ ಬ್ಯಾಂಕ್‌ಗಳು ಸಹಾ ಕಿರುಹಣಕಾಸಿನ ಮೇಲೆ ತಮ್ಮ ಲಕ್ಷ್ಯವನ್ನು ಕೇಂದ್ರೀಕರಿಸುತ್ತಿವೆ. ಕೆಲವು ವಿದೇಶೀ ಬ್ಯಾಂಕ್‌ಗಳೂ ಕಿರುಸಾಲ ನೀಡಲು ಮುಂದಾಗುತ್ತಿವೆ. ಅವುಗಳಲ್ಲಿ ಎ.ಬಿ.ಎಂ, ಅಮ್ರೋ, ಎಚ್.ಎಸ್.ಬಿ.ಸಿ. ಮತ್ತು ಸಿಟಿ ಬ್ಯಾಂಕ್ ಸೇರಿವೆ. ಕಿರು ಸಾಲವು ಲಾಭದಾಯಕವೆಂದು ಈಗ ಎಲ್ಲ ಬ್ಯಾಂಕ್‌ಗಳೂ ಕಂಡುಕೊಂಡಿವೆ.

1976ರಲ್ಲಿ ಪ್ರೊಫೆಸರ ಮಹಮ್ಮದ್ ಯುನುಸ್ ಬಾಂಗ್ಲಾದೇಶದಲ್ಲಿ ಪ್ರಪ್ರಥಮವಾಗಿ ಗ್ರಾಮೀಣ ಬ್ಯಾಂಕ್ ಸ್ಥಾಪಿಸುವ ಮೂಲಕ ಕಿರು ಹಣಕಾಸಿನ ಸಂಸ್ಥೆಗೆ ತಳಪಾಯ ಹಾಕಿದರು. ಈಗ ಇದು ಪ್ರಪಂಚದ ಬಹುತೇಕ ಕಡೆ ಬಡತನದ ನಿರ್ಮೂಲನಾ ಸಾಧನೆಗಾಗಿ ಕಾರ್ಯನಿರ್ವಹಿಸುತ್ತಾ ಕ್ರಾಂತಿಕಾರಿ ಹೆಜ್ಜೆ ಹಾಕುತ್ತಿದೆ. ಭಾರತದಲ್ಲಿ ಕಿರು ಹಣಕಾಸಿನ ಬೆಳವಣಿಗೆಗೆ ಒಂದು ಅತ್ಯಂತ ಫಲಕಾರಿಯಾದ ಹೆಜ್ಜೆಯನ್ನು 1991ರಲ್ಲಿ ನಬಾರ್ಡ್ ಆರಂಭಿಸಿತು. ಇದು 1991ರಲ್ಲಿ 500 ಸ್ವಸಹಾಯ ಗುಂಪುಗಳೊಂದಿಗೆ ಸ್ವಸಹಾಯ ಗುಂಪು ಮತ್ತು ಬ್ಯಾಂಕ್ ಜೋಡಣೆಯ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಇದು ಇಂದು ಹೆಮ್ಮರವಾಗಿ ಬೆಳೆದಿದೆ. ವಿವಿಧ ಸ್ವಯಂಸೇವಾ ಸಂಘಗಳಿಂದ ಮತ್ತು ಸರಕಾರದ ಉತ್ತೇಜನದೊಂದಿಗೆ ಸ್ವಸಹಾಯ ಸಂಘಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ ಕಿರು ಹಣಕಾಸಿನ ಕಾರ್ಯಕ್ರಮಗಳು ಹಾಗೂ ಯೋಜನೆಗಳು ಗ್ರಾಮೀಣ ಬಡ ಜನರ ಮೇಲೆ ಅದರಲ್ಲೂ ಮಹಿಳೆಯರ ಮೇಲೆ ಅನೇಕ ಧನಾತ್ಮಕ ಪರಿಣಾಮಗಳನ್ನು ಬೀರಿದೆ. ಬ್ಯಾಂಕುಗಳ ಸೇವೆಗಳನ್ನು ಗ್ರಾಮೀಣ ಜನರಿಗೆ ಪರಿಚಯಿಸುವಲ್ಲಿ ಹಾಗೂ ಅವರಲ್ಲಿ ಉಳಿತಾಯದ ಪ್ರವೃತ್ತಿಯನ್ನು ಪ್ರೇರೇಪಿಸುವಲ್ಲಿ ಅದು ಒಂದು ಶಕ್ತಿಯುತ ಸಾಧನವಾಗಿ ಕೆಲಸ ಮಾಡುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್, ನಬಾರ್ಡ್, ಸಿಡ್ಬಿ ಕಿರು ಹಣಕಾಸಿನ ವ್ಯಾಪ್ತಿಯನ್ನು ವಿಸ್ತರಿಸಲು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. 1999ರ ಏಪ್ರಿಲ್ ತಿಂಗಳಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಕಿರುಸಾಲದ ಘಟಕವನ್ನು ಸ್ಥಾಪಿಸಿತು 2000ದ ಫೆಬ್ರವರಿ ತಿಂಗಳಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಕಿರುಹಣಕಾಸನ್ನು ಬಲಗೊಳಿಸಲು ಹೊಸರೂಪು ರೇಶೆಗಳನ್ನು ಹೊರಡಿಸಿತು. ಅದರ ನಂತರ ನಬಾರ್ಡ್ ಪುನರ್ಧನದ (ರಿಫೈನಾನ್ಸ್) ಮೂಲಕ ಬ್ಯಾಂಕ್‌ಗಳನ್ನು, ಸ್ವಸಹಾಯ ಸಂಘಗಳನ್ನು ಮತ್ತು ಸ್ವಯಂಸೇವಾ ಸಂಘಗಳನ್ನು ಜೋಡಿಸಿ ಕಿರುಹಣಕಾಸನ್ನು ಪ್ರೋತ್ಸಾಹಿಸುತ್ತಾ ಇದೆ. ನಬಾರ್ಡ್ 2001ರಲ್ಲಿ ಕಿರುಹಣಕಾಸಿನ ಅಭಿವೃದ್ಧಿ ನಿಧಿಯನ್ನು 100 ಕೋಟಿ ಬಂಡವಾಳದೊಂದಿಗೆ ಪ್ರಾರಂಭಿಸಿತು. ಇದರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ತಲಾ 40 ಕೋಟಿ ಬಂಡವಾಳ ಹೂಡಿತು ಮತ್ತು ಕೆಲವು ಆಯ್ದ ವಾಣಿಜ್ಯ ಬ್ಯಾಂಕುಗಳು ಉಳಿದ ಬಂಡವಾಳವನ್ನು ಹೂಡಿದವು. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಮಾರ್ಚ್ 2006ಕ್ಕೆ 2101045 ಸ್ವಸಹಾಯ ಸಂಘಗಳು ಬ್ಯಾಂಕುಗಳ ಜತೆ ವ್ಯವಹರಿಸುತ್ತಿವೆ. ಸ್ವಸಹಾಯ ಗುಂಪು ಮತ್ತು ಬ್ಯಾಂಕ್ ಜೋಡಣೆಯ ಕಾರ್ಯಕ್ರಮ 315 ಲಕ್ಷ ಕುಟುಂಬಗಳಿಗೆ ಪ್ರಯೋಜನಕಾರಿಯಾಗಿದೆ ಮತ್ತು 175 ಲಕ್ಷ ಬಡವರ್ಗದ ಜನರನ್ನು ವ್ಯಾಪಿಸಿದೆ. ಸ್ವಸಹಾಯ ಗುಂಪುಗಳಿಗೆ ನೀಡುವ ಸಾಲವು ಲಾಭದೊಡನೆ ಸಾಮಾಜಿಕ ಬ್ಯಾಂಕೋದ್ಯಮ ಎಂಬ ಹೆಗ್ಗಳಿಕೆಯನ್ನು ಹೊಂದಿದೆ. ಬ್ಯಾಂಕೋದ್ಯಮ ವ್ಯವಹಾರದ ಮೂಲಕ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಅಂತೆಯೇ ಕಟ್ಟಕಡೆಯ ವ್ಯಕ್ತಿಯ ಉನ್ನತಿಯನ್ನು ಸಾಧಿಸುವುದು ಇಲ್ಲಿ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಯಾವುದೇ ಆಧಾರ ಅಥವಾ ಭದ್ರತೆ ಇಲ್ಲದೆ ಗುಂಪಿನ ಕಾರ್ಯನಿರ್ವಹಣೆ ಮತ್ತು ಸದಸ್ಯರ ಮೇಲಿನ ನಂಬಿಕೆಯಿಂದಲೇ ಸಾಲವನ್ನು ಮಂಜೂರು ಮಾಡಲಾಗುವುದರಿಂದ ಸದಸ್ಯರಲ್ಲಿ, ಒಗ್ಗಟ್ಟಿನಲ್ಲಿರುವ ಬಲದ ಬಗ್ಗೆ ಮತ್ತು ತಮ್ಮ ಸ್ವಸಾಮರ್ಥ್ಯದ ಬಗ್ಗೆ ಅಚಲವಾದ ವಿಶ್ವಾಸ ಮೂಡುತ್ತದೆ.

**ಉಪಸಂಹಾರ :**

ಕಿರುಹಣಕಾಸಿನ ಮೂಲಕ ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ ಗುಂಪುಗಳು ಕ್ರಾಂತಿಯೋಪಾದಿಯಲ್ಲಿ ಪಸರಿಸಿ ಬೆಳೆಯುತ್ತಿದೆ. ಜನಸಾಮಾನ್ಯರ ಆರ್ಥಿಕ ಉನ್ನತಿ ಮತ್ತು ಸಾಮಾಜಿಕ ವಿಕಾಸದ ಸಾಧನೆಗೆ ಸ್ವಸಹಾಯ ಗುಂಪುಗಳ ಕೊಡುಗೆ ಅಸಾಧಾರಣವಾದುದು. ನಿರ್ಲಕ್ಷ್ಯಕ್ಕೊಳಪಟ್ಟಿದ್ದ ಜನರು ಸಹಸ್ರಾರು ವರ್ಷಗಳಿಂದ ತಮಗೆ ಲಭಿಸದಿದ್ದ ಸೌಲಭ್ಯಗಳನ್ನು ಸ್ವಲ್ಪ ಮಟ್ಟಿಗಾದರೂ ಹಂತ ಹಂತವಾಗಿ ಪಡೆದುಕೊಳ್ಳಲು ಸ್ವಸಹಾಯ ಗುಂಪುಗಳ ವೇದಿಕೆಯ ಮೂಲಕ ಸಾಧ್ಯವಾಗುತ್ತಿದೆ. ಅಧ್ಯಯನಗಳ ಪ್ರಕಾರ ಗುಂಪುಗಳ ಯಶಸ್ಸಿಗೆ ಜನರಲ್ಲಿ ಒಗ್ಗಟ್ಟು, ಸಂಘಟನೆಯ ಮನೋಭಾವ ಮತ್ತು ಅಭಿವೃದ್ಧಿ ಸಾಧನೆಯ ಛಲ ಅತ್ಯಾವಶ್ಯಕ.

**–ದಿನೇಶ್ ಪಿ.ಟಿ.**
ಕಿರಿಯ ಸಂಶೋಧನಾ ವಿದ್ಯಾರ್ಥಿ, ಅರ್ಥಶಾಸ್ತ್ರ ವಿಭಾಗ,
ಮಂಗಳೂರು, ವಿಶ್ವವಿದ್ಯಾನಿಲಯ
ಮಂಗಳೂರು

# “ಯೋಜನೆಗಳಲ್ಲಿ ಜನರ ಭಾಗವಹಿಸುವಿಕೆ ಮತ್ತು ಅಭಿವೃದ್ಧಿ”




**ಡಾ॥ ಆರ್. ಶಂಕರಪ್ಪ.**

C/o ಸೂರಂ ರಾಮಯ್ಯ,
ಮಾಜಿ ಶಾಸಕರು, ಸೂಲಿಬೆಲೆ,
ಹೊಸಕೋಟೆ ತಾಲ್ಲೂಕು,
ಬೆಂಗಳೂರು, ಗ್ರಾಮಾಂತರ ಜಿಲ್ಲೆ
ಮೊ: 9448980953


> ಯೋಜನೆ ಸಫಲವಾಗಬೇಕಾದರೆ ಪಾತ್ರದಾರಿಗಳಲ್ಲಿ ಅಂತಸ್ತು, ಶ್ರೇಣಿ, ಹುದ್ದೆಯ ಅಂತರ ಬಿಟ್ಟು ಸಾಮಾನ್ಯ ಜನರಲ್ಲಿ ಒಬ್ಬರಾಗಿ ಕೆಲಸ ಮಾಡಬೇಕು.

ಭಾರತ ಸ್ವಾತಂತ್ರ್ಯದ ನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕರ್ನಾಟಕವೂ ಸೇರಿದಂತೆ ಗ್ರಾಮೀಣ ಪ್ರದೇಶಗಳ ಮತ್ತು ಜನರ ಅಭಿವೃದ್ಧಿಗಾಗಿ ಅನೇಕ ಯೋಜನೆ (ಕಾರ್ಯಕ್ರಮ) ಗಳನ್ನು ಅನುಷ್ಠಾನಗೊಳಿಸಿವೆ. ಹಲವಾರು ಕೋಟಿ ರೂ.ಗಳನ್ನು ಖರ್ಚು ಮಾಡಿ(ಡುತ್ತಿ)ವೆ. ಬಡತನ ನಿರ್ಮೂಲನೆ, ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆ, ಮೂಲಭೂತ ಸೌಕರ್ಯಗಳ ನಿರ್ಮಾಣ ಆಡಳಿತವಿಕೇಂದ್ರೀಕರಣ ಮೊದಲಾದ ಉದ್ದೇಶಗಳನ್ನು ಈ ಕಾರ್ಯಕ್ರಮಗಳು ಹೊಂದಿವೆ. ಆದರೆ ಅವು ನಿಗದಿತವಾಗಿ ಯಾರಿಗೆ ತಲುಪಬೇಕು, ಎಲ್ಲಿ ತಲುಪಬೇಕು ಅಲ್ಲಿ ತಲುಪುತ್ತಿಲ್ಲ. ತಲುಪಿರುವ ಯೋಜನೆಗಳ ಸದುಪಯೋಗ ಆಗಿಲ್ಲ. ಯೋಜನೆಗಳ ಬಗ್ಗೆ ಸುಮಾರು 95% ಜನರಿಗೆ ಮಾಹಿತಿ ಇಲ್ಲ ಅರಿವಿಲ್ಲ ಯೋಜನೆ ನಮ್ಮದು ಎನ್ನುವ ಮನೋಭಾವನೆ ಇಲ್ಲವೇ ಇಲ್ಲ. ಯಾವುದೋ ಸರ್ಕಾರದ ಯೋಜನೆ, ಯಾರೋ ಬರುತ್ತಾರೆ. ಯಾರೊ ಮಾಡುತ್ತಾರೆ, ಹೋಗುತ್ತಾರೆ ಎನ್ನುವ ಕಲ್ಪನೆ ಜನರಲ್ಲಿ ಬೇರೂರಿಬಿಟ್ಟಿದೆ. ಅದೇ ರೀತಿ ಸುಮಾರು 50% ರಷ್ಟು ಅಧಿಕಾರಿಗಳಿಗೆ ಯೋಜನೆಗಳು ಯಾರಿಗೆ ತಲುಪಬೇಕೋ ಅವರಿಗೆ ಮುಟ್ಟಿಸುವ ಕಾಳಜಿಯೂ ಇಲ್ಲ. ಸುಮಾರು ಅರ್ಧ ಅಧಿಕಾರಿಗಳು ನಿಯತ್ತಾಗಿ ದುಡಿದು ಸರ್ಕಾರದ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರೆ ಉಳಿದ ಅರ್ಧ ಅಧಿಕಾರಿಗಳು ಕೆಲಸಮಾಡಬೇಕು ಮಾಡೋಣ ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಸರ್ಕಾರದ ಯೋಜನೆಗಳು ಸರಿಯಾಗಿ ಅನುಷ್ಠಾನವಾಗದೆ ಬಡ ಜನರಿಗೆ ತಲುಪದೆ ವಿಫಲವಾಗಿದೆ.

ಸರ್ಕಾರದ ಯೋಜನೆಗಳು ಗ್ರಾಮೀಣ ಪ್ರದೇಶದ ಜನರಿಗೆ ತಲುಪಬೇಕಾದರೆ ಅಭಿವೃದ್ಧಿ ಕಾರ್ಯಗಳಲ್ಲಿ ಜನರನ್ನು ತೊಡಗಿಸಿಕೊಳ್ಳಬೇಕಾಗಿದೆ. ಯೋಜನಾ ತಯಾರಿಯಿಂದ ಹಿಡಿದು ಅನುಷ್ಠಾನ ಉಸ್ತುವಾರಿಯಂತಹ ಕಾರ್ಯಗಳಲ್ಲಿ ಜನರು ಭಾಗವಹಿಸಬೇಕು. ಆಗ ಯೋಜನೆ (ಸೌಲಭ್ಯಗಳು) ಸಮನಾಗಿ ಹಂಚಿಕೆಯಾಗಿ ಯೋಜನೆ ಸಫಲವಾಗಲು ಸಾಧ್ಯ ಎಂದು ಇತ್ತೀಚಿನ ಅನುಭವಗಳಿಂದ ಕಂಡು ಬಂದಿದೆ ಅದೇ ರೀತಿ ವಿಶ್ವಬ್ಯಾಂಕ್ ನೆರವು ನೀಡು(ತ್ತಿರು)ವ ಯೋಜನೆಗಳಲ್ಲಿ ಸಮುದಾಯ ಸಹಭಾಗಿತ್ವ (ಭಾಗವಹಿಸುವಿಕೆ ಮತ್ತು ವಂತಿಗೆ ಸಂಗ್ರಹ) ಇದ್ದರೆ ಮಾತ್ರ ಸಾಲ ಕೊಡಲು, ನೆರವು ನೀಡಲು ನಿಬಂಧನೆಗಳನ್ನು ವಿಧಿಸುತ್ತಿದೆ. ಜೊತೆಗೆ ಸ್ವಯಂಸೇವಾ ಸಂಸ್ಥೆಗಳು ಜನರನ್ನು ಸ್ಪಂದಿಸುವ ಮತ್ತು ಅರಿವು ಮೂಡಿಸಿ, ಜನರ ಸಹಭಾಗಿತ್ವ ಪ್ರೇರಣೆ ನೀಡುತ್ತಿವೆ ಎಂದು ಸ್ವಯಂಸೇವಾ ಸಂಸ್ಥೆಗಳ ಮೂಲಕ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಷರತ್ತುಗಳನ್ನು ವಿಧಿಸುತ್ತಿದೆ. ಅಂಥಹ ಜನರ ಸಹಭಾಗಿತ್ವದ ಪ್ರಮುಖ ಯೋಜನೆಗಳೆಂದರೆ ಜಲನಿರ್ಮಲ ಯೋಜನೆ, ಜಲಸಂವರ್ಧನೆ ಯೋಜನೆ, ಸುಜಲ ಜಲಾನಯ ಯೋಜನೆ ಇತ್ಯಾದಿ.

**ಜನರ ಸಹಭಾಗಿತ್ವ :**

ಸರ್ಕಾರದ ಯೋಜನೆಗಳಲ್ಲಿ ಜನರ ಸಹಭಾಗಿತ್ವದಿಂದ ಯೋಜನೆಗಳು ಸಫಲವಾಗಲು ಸಾಧ್ಯತೆ ಇದೆ. 1980ರ ದಶಕದಲ್ಲಿ ಜನರ ಭಾಗವಹಿಸುವಿಕೆ ಪರಿಕಲ್ಪನೆ ಚಲಾವಣೆಯಲ್ಲಿ ಬಂತು. ಭಾಗವಿಹಿಸುವಿಕೆ ಪರಿಕಲ್ಪನೆಯ–ಪ್ರಕ್ರಿಯೆಯು ಅಭಿವೃದ್ಧಿಕಾರ್ಯಗಳ ಮೇಲೆ ಬೆಳಕು ಚೆಲ್ಲಿದೆ ಹಾಗೂ ಪ್ರಸ್ತುತ ಇರುವ ಪದ್ಧತಿಗಳನ್ನು ಪುನಃ ಪರಿಶೀಲಿಸಿ ಬದಲಾವಣೆ ತರಲು ಸಹಾಯಕವಾಗಿದೆ. ಆದರೆ ಭಾಗವಹಿಸುವಿಕೆಯು ಒಂದು ಜಟಿಲ ಪರಿಕಲ್ಪನೆಯಾಗಿದೆ. ಇದು ಅಭಿವೃದ್ಧಿ ಚಟುವಟಿಕೆಗಳ ಅಸಮತೋಲನವನ್ನು ಹೋಗಲಾಡಿಸುವ ತಳಹದಿಯನ್ನು ಹೊಂದಿದೆಯಲ್ಲದೆ, ಜನರು ಅಭಿವೃದ್ಧಿ ಕ್ರಿಯೆಯಲ್ಲಿ ಸಕಾರಾತ್ಮಕ ಪಾತ್ರವನ್ನು ವಹಿಸಲು ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಿಕೊಡುತ್ತದೆ. ಭಾಗವಹಿಸುವಿಕೆಯು ಒಂದು ಕ್ರಿಯೆಯಾಗಿದ್ದು ಅಭಿವೃದ್ಧಿ ಕ್ಷೇತ್ರದಿಂದ ಹೊರಗಿರುವ ಜನರು ಗುಂಪು ಹಾಗೂ ವರ್ಗವನ್ನು ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಎಲ್ಲಾ ವಿಷಯಗಳನ್ನು ತಿಳಿಯಲು, ಧ್ವನಿಯೆತ್ತಲು ಹಾಗೂ ಸಾಮಾಜಿಕ, ಮಾನಸಿಕ, ಆರ್ಥಿಕ, ನಿರ್ಧಾರ ತೆಗೆದುಕೊಳ್ಳುವ ಅಭಿವೃದ್ಧಿಯ ಫಲಗಳನ್ನು ಪಡೆಯಲು ಅವಕಾಶ ಮಾಡಿಕೊಡುತ್ತದೆ. ಆದರೆ ಜನರ ಭಾಗವಹಿಸುವಿಕೆ ಹೊಸ ಪರಿಕಲ್ಪನೆಯಾಗಿರುವುದರಿಂದ ಪ್ರಥಮ ಬಾರಿಗೆ ಸಂಘಟಿಸಿ,

ಭಾಗವಹಿಸುವಿಕೆಯ ಪ್ರಕ್ರಿಯೆಯಲ್ಲಿ ಜನರನ್ನು ತೊಡಗಿಸುವುದು (ಅದರಲ್ಲೂ ವಿಶೇಷವಾಗಿ ವಂತಿಗೆ ಸಂಗ್ರಹಣೆಯಲ್ಲಿ) ಬಹಳ ಕಷ್ಟದ ಕೆಲಸ. ಜನರಲ್ಲಿ ಭಾಗವಹಿಸುವಿಕೆ ಪರಿಕಲ್ಪನೆ ಬೇರೂರಿದೆ ಎಂದರೆ ಯೋಜನೆಗಳ ಅನುಷ್ಠಾನ ಮತ್ತು ಅಭಿವೃದ್ಧಿ ಸುಲಭದ ಕೆಲಸ. ಗ್ರಾಮೀಣ ಜನರನ್ನು ಸಂಘಟಿಸಿ, ಪ್ರೇರಣೆ ನೀಡಿ ಕ್ರಿಯಾತ್ಮಕವಾಗಿ ಗ್ರಾಮೀಣ ಅಭಿವೃದ್ಧಿ ಯೋಜನೆಗಳಲ್ಲಿ (ಕಾರ್ಯಕ್ರಮಗಳಲ್ಲಿ) ತೊಡಗಿಸಿಕೊಳ್ಳಲು ತಂತ್ರಕೌಶಲ್ಯಗಳನ್ನು ರೂಪಿಸಿ, ಯೋಜನೆಗಳನ್ನು ಜನರಿಗೆ ಮನದಟ್ಟುಮಾಡಿಸಿ ಭಾಗವಹಿಸುವಿಕೆಯ ಮಹತ್ವವನ್ನು ಅವರಿಗೆ ವಿವರಿಸಿ, ನೀತಿ ನಿರೂಪಣೆಯನ್ನು ರಚಿಸುವ ಹಾಗೂ ಆಡಳಿತ, ಸಾಮಾಜಿಕ, ಆರ್ಥಿಕ ಸಂಸ್ಥೆಗಳನ್ನು ಸ್ಥಾಪಿಸುವ ನಿಪುಣತೆಯನ್ನು ಹೊಂದಲು ಜನರಿಗೆ ಸಹಕಾರ ಮತ್ತು ಮಾರ್ಗದರ್ಶನ ನೀಡಬೇಕಾಗಿರುವುದು ಸಂಬಂಧಪಟ್ಟ ಸಿಬ್ಬಂದಿ ಮತ್ತು ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಜಲನಿರ್ಮಲ, ಸುಜಲ, ಜಲಸಂವರ್ಧನೆ ಯೋಜನೆಗಳಲ್ಲಿ ಇಂಥಹ ತಂತ್ರಕೌಶಲ್ಯಗಳು (ಅರಿವು ಮೂಡಿಸುವ ಕಾರ್ಯಕ್ರಮಗಳು ತರಬೇತಿಗಳು) ಸಾಕಷ್ಟು ಪ್ರಮಾಣದಲ್ಲಿದ್ದು ಜನರು ಅವುಗಳ ಸದುಪಯೋಗ ಪಡೆದುಕೊಳ್ಳಬೇಕಾಗಿದೆ. ಇಂಥಹ ಕಾರ್ಯಕ್ರಮಗಳಲ್ಲಿ ಸುಮಾರು 50% ಜನರು ಭಾಗವಹಿಸಿದರೆ ಇನ್ನು 50%ರಷ್ಟು ಜನರಿಗೆ ತಾತ್ಸಾರ ಮನೋಭಾವನೆ ಇರುವುದು ಕಂಡುಬರುತ್ತದೆ. ತಾತ್ಸಾರ ಮನೋಭಾವನೆ ಇರುವವರು ಬದಲಾವಣೆ ಆಗುತ್ತಾರೆ. ಆದರೆ ಸಮಯ ತೆಗೆದುಕೊಳ್ಳುತ್ತದೆ. ಅದಕ್ಕೆ ಸಂಘಟಿಸಿ ಪ್ರೇರಣೆ ನೀಡುವವರು ನಿರುತ್ಸಾಹಿಗಳಾಗದೆ ಉತ್ಸಾಹದಿಂದ ಕೆಲಸ ಮಾಡಬೇಕಾಗಿದೆ. ಜನರ ಭಾಗವಹಿಸುವಿಕೆಯನ್ನು ಈ ಕೆಳಕಂಡಂತೆ ಅರ್ಥೈಸಬಹುದು:

* ಭಾಗವಹಿಸುವಿಕೆ ಒಂದು ಸಹಯೋಗ
* ಭಾಗವಹಿಸುವಿಕೆ ಯೋಜನೆಯು ಪ್ರಯೋಜನಗಳನ್ನು ಪಡೆಯಲು ವಿಶೇಷ ಗುರಿಗಳನ್ನು ನಿಗದಿಪಡಿಸುವುದಕ್ಕಾಗಿ
* ಭಾಗವಹಿಸುವಿಕೆ ಅಧಿಕಾರಯುಕ್ತರನ್ನಾಗಿ ಮಾಡುವುದಕ್ಕಾಗಿ

ಜನರು ಸಾಮಾಜಿಕ ಅರ್ಥಿಕ ಅಭಿವೃದ್ಧಿ ವಿಷಯಗಳಲ್ಲಿ ಭಾಗವಹಿಸಲು ಉತ್ಸಾಹ ತೋರುವುದಿಲ್ಲ ವಿಷಯಗಳನ್ನು ಪ್ರತಿಪಾದಿಸುವ ಮತ್ತು ಪ್ರಯೋಜನಗಳನ್ನು ಪಡೆಯುವ ಸಾಮರ್ಥ್ಯಗಳನ್ನು ಹೊಂದಿಲ್ಲ ಎಂದು ವಾದಗಳಿವೆ. ಆದರೆ ಕೆಲವು ಅಧ್ಯಯನಗಳಿಂದ ಕಂಡು ಬಂದಿರುವ ವಿಚಾರ ಭಾಗವಹಿಸುವಿಕೆ ಹೊಸ ಪರಿಕಲ್ಪನೆ, ದೃಷ್ಟಿಕೋನ, ವಿಚಾರ ಆಗಿರುವುದರಿಂದ ಇದು ಸಮಯ ತೆಗೆದುಕೊಳ್ಳುತ್ತದೆ ಹಾಗೂ ಗ್ರಾಮೀಣ ಜನರಿಗೆ ವಿಚಾರ ಮಾಡುವ ಯೋಜಿಸುವ, ಅನುಷ್ಠಾನಗೊಳಿಸುವ ಹಾಗೂ ಉಸ್ತುವಾರಿ (ನಿರ್ವಹಿಸುವ) ಸಾಮರ್ಥ್ಯವಿದೆ.

* ಗ್ರಾಮೀಣ ಜನರು ಯಾವುದೇ ಸಮಸ್ಯೆಯನ್ನು ಬಗೆಹರಿಸಬಲ್ಲರು.
* ವಿಷಯಗಳ ಬಗ್ಗೆ ಅರಿವು ಮೂಡಿಸಿ ಸಹಾಯ ಹಸ್ತ ನೀಡಿದ್ದಲ್ಲಿ ಯೋಜನೆಗಳನ್ನು ಸದುಪಯೋಗ ಮಾಡಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಚೆನ್ನಾಗಿ ನಿಭಾಯಿಸಬಲ್ಲರು.
* ಗ್ರಾಮೀಣ ಜನತೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೆ ಸಂಘಟಿತರಾಗಿ ಸಹಬಾಗಿತ್ವ ನೀಡಿ ಅಭಿವೃದ್ಧಿಯಲ್ಲಿನ ಅಸಮತೋಲನವನ್ನು ನಿವಾರಿಸಬಲ್ಲರು.
* ಜನರಿಗೆ ಹೊರಗಿನಿಂದ ಸಹಾಯ ಸಿಕ್ಕಿದಲ್ಲಿ ಸ್ಥಳೀಯ ಸಮಸ್ಯೆಗಳನ್ನು ವೈಯಕ್ತಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ.
* ಯೋಜನೆಗಳ ಅನುಷ್ಠಾನಕ್ಕೆ ವಿವಿಧ ತಾಂತ್ರಿಕ ವಿವರಗಳನ್ನು ಒದಗಿಸಿದಲ್ಲಿ ಅವುಗಳಿಗೆ ಪರ್ಯಾಯಗಳನ್ನು ಯೋಚಿಸಬಲ್ಲರು.
ಆದ್ದರಿಂದ ಅಭಿವೃದ್ಧಿ ಚಟುವಟಿಕೆಗಳಲ್ಲಿ ಗ್ರಾಮೀಣ ಜನರನ್ನು ಅದರಲ್ಲೂ ದುರ್ಬಲ ವರ್ಗ ಹಾಗೂ ಮಹಿಳೆಯರನ್ನು ತೊಡಗಿಸುವುದು ಅತ್ಯಗತ್ಯ ವಿಷಯವಾಗಿದೆ.

**ಅಭಿವೃದ್ಧಿ ಕಾರ್ಯಗಳಲ್ಲಿ ಬರುವ ಪಾತ್ರದಾರಿಗಳು :**

ಅಭಿವೃದ್ಧಿ ಕಾರ್ಯಗಳಲ್ಲಿ ಅನೇಕ ಪಾತ್ರದಾರಿಗಳಿರುತ್ತಾರೆ. ಈ ಪಾತ್ರ ದಾರಿಗಳು ವ್ಯಕ್ತಿ, ವ್ಯಕ್ತಿಗಳ ಗುಂಪು, ಅಧಿಕಾರಿಗಳು, ಸಂಘಗಳು, ಸಂಸ್ಥೆಗಳು ಸಮೂಹಗಳಾಗಿರುತ್ತವೆ. ಪಾತ್ರದಾರಿಯು ತನ್ನ ಪ್ರಭಾವವನ್ನು ಅಭಿವೃದ್ಧಿ ಕಾರ್ಯಕ್ರಮಗಳ ಮೇಲೆ ಬೀರುವವನಾಗಿರುತ್ತಾನೆ. ಅಥವಾ ಆಸಕ್ತಿ ಹೊಂದಿರುತ್ತಾನೆ. ಸರಿಯಾದ ಅವಕಾಶವನ್ನು ಒದಗಿಸಿದರೆ ಈ ಪಾತ್ರದಾರಿಯು ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಎಲ್ಲ ಅಂಶಗಳನ್ನು ಅವಲೋಕಿಸಿ ಆದ್ಯತೆಗೊಳಿಸಿ ಯೋಜನೆ ತಾಯಾರಿಕೆ ಹಾಗೂ ಅವುಗಳ ಅನುಷ್ಠಾನದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ.

ಆದರೆ ಅಭಿವೃದ್ಧಿ ಕಾರ್ಯಗಳಲ್ಲಿ ಪಾತ್ರದಾರಿಗಳ ದೋರಣೆ, ಕಲ್ಪನೆಗಳಲ್ಲಿ ಸಮಾನತೆ, ಸಮನ್ವಯತೆ ಇರಬೇಕಾದುದು ಅತ್ಯವಶ್ಯಕ ಯೋಜನೆ ಸಫಲವಾಗಬೇಕಾದರೆ ಪಾತ್ರದಾರಿಗಳಲ್ಲಿ ಅಂತಸ್ತು, ಶ್ರೇಣಿ, ಹುದ್ದೆಯ ಅಂತರ ಬಿಟ್ಟು ಸಾಮಾನ್ಯ ಜನರಲ್ಲಿ ಒಬ್ಬರಾಗಿ ಕೆಲಸ ಮಾಡಬೇಕು. ಆದರೆ ಇತ್ತೀಚಿನ ಯೋಜನೆಗಳ ಅನುಷ್ಠಾನದಲ್ಲಿ ಜನರು ಭಾಗವಹಿಸುವ ಕಾರ್ಯಕ್ರಮದಲ್ಲಿ ವ್ಯತ್ಯಾಸಗಳಿದ್ದರೆ ಸಂಸ್ಥೆಗಳು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸಮಾನ ಮನಸ್ಸಿನಿಂದ, ಚರ್ಚಿಸಿ ವಿಚಾರ ವಿನಿಮಯ ಮಾಡಿಕೊಂಡು, ದುಡಿದಾಗ ಮಾತ್ರ ಯೋಜನೆಗಳು ಸಫಲವಾಗುತ್ತವೆ. ಈ ಅಂಶವನ್ನು ವಿಶ್ವಬ್ಯಾಂಕ್ ನೆರವಿನ ಯೋಜನೆಗಳಲ್ಲಿ ಸೂಚಿಸಿದ್ದರೂ ಅಳವಡಿಕೆಯಲ್ಲಿ ಮಾತ್ರ ಕೆಲವು ಕಡೆ ವ್ಯತ್ಯಾಸಗಳು ಕಂಡುಬರುತ್ತಿವೆ. ಎಲ್ಲಾ ವಿಚಾರಗಳಲ್ಲಿ ಸರಿತಪ್ಪುಗಳು ಕಂಡುಬರುವುದು ಸಹಜ ತಪ್ಪುಗಳು, ವ್ಯತ್ಯಾಸಗಳು ಆದಾಗ ಸರಿಪಡಿಸಿಕೊಂಡು ಹೋಗುವ ಪ್ರವೃತ್ತಿ ನಮ್ಮ ಪಾತ್ರಧಾರಿಗಳಲ್ಲಿ ಬೆಳೆಯಬೇಕು. ಯೋಜನೆಗಳು ಅನುಷ್ಠಾನದಲ್ಲಿ ಅನುಭವದ ವಿಚಾರ ಎಂದರೆ ಸುಮಾರು ಅರ್ಧದಷ್ಟು ಪಾತ್ರಧಾರಿಗಳ ವಿಚಾರಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತಿವೆ. ಕೆಲವು ಪ್ರಜಾಪ್ರತಿನಿಧಿಗಳು ತಮ್ಮ ಗೌರವ ಹೆಚ್ಚು ತಮಗೆ ಮಹತ್ವ ನೀಡಿಲ್ಲ ಎಂದರೆ ಕೆಲವು ಅಧಿಕಾರಿಗಳು ತಮ್ಮ ಸ್ಥಾನಮಾನ ಹೆಚ್ಚು ತಮಗೆ ಮಹತ್ವ ನೀಡಿಲ್ಲ (ಎಲ್ಲಾ ಅಧಿಕಾರಿಗಳು, ಪ್ರತಿನಿಧಿಗಳು

ಆ ರೀತಿ ಇಲ್ಲ ಹೊಂದಾಣಿಕೆ ಮನೋಭಾವದವರು ನಮ್ಮ ಸಮಾಜದಲ್ಲಿದ್ದಾರೆ) ಎಂದು ಘನತೆ ತೋರಿಸುವವರು ನಮ್ಮಲ್ಲಿ ಇದ್ದಾರೆ. ಸ್ಥಾನಮಾನ, ಘನತೆ, ಗೌರವ, ಅಂತಸ್ತುಗಳನ್ನು ಮರೆತು ಅಭಿವೃದ್ಧಿ ಕಲ್ಪನೆಯನ್ನು ಮೂಡಿ(ರೂಢಿ)ಸಿ ಕೊಂಡು ನಿರ್ವಹಿಸಿದರೆ ಯೋಜನೆಗಳು ಸಾಮಾನ್ಯ ಜನರಿಗೆ ಸುಲಭವಾಗಿ ತಲುಪಿ ಅಭಿವೃದ್ಧಿಯನ್ನು ಸುಲಭವಾಗಿ ಸಾಧಿಸಬಹುದು.

ಅಭಿವೃದ್ಧಿ ಕಾರ್ಯಗಳಲ್ಲಿ ಪ್ರತಿಯೊಬ್ಬ ಪಾತ್ರಧಾರಿ ತನ್ನೆಲ್ಲಾ ಪ್ರಯತ್ನಗಳನ್ನು ಹಾಕಿ ಕ್ರಿಯಾತ್ಮಕವಾಗಿ ಭಾಗವಹಿಸಿ ಉಳಿದ ಪಾತ್ರಧಾರಿಗಳೊಂದಿಗೆ ಸಮನ್ವಯದೊಂದಿಗೆ (ಸುಮಾರು ಅಧಿಕಾರಿಗಳು, ಜನಪ್ರತಿನಿಧಿಗಳು ಇದ್ದಾರೆ) ಕೆಲಸ ಮಾಡಿದಲ್ಲಿ ಉತ್ತಮ ಸಂಬಂಧ ಬೆಳೆಯುವುದರೊಂದಿಗೆ ಫಲಶೃತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಇತ್ತೀಚಿನ ಯೋಜನೆಗಳಲ್ಲಿ ಅಳವಡಿಸುತ್ತಿರುವ ಅರಿವಿನ ಕಾರ್ಯಕ್ರಮಗಳು, ಬೀದಿ ಸಭೆ, ಗ್ರಾಮ ಸಭೆ, ಮನೆ ಮನೆ ಭೇಟಿ, ಬೀದಿ ನಾಟಕ, ಜಾಥಾ, ವಿಡಿಯೋ ಶೋ, ತರಬೇತಿಗಳಿಂದ ಪಾತ್ರಧಾರಿಗಳಲ್ಲಿ ಕೂಡ ಭಾಗವಹಿಸುವಿಕೆ ಪ್ರಕ್ರಿಯೆಯಲ್ಲಿ ಆಸಕ್ತಿ ಹೆಚ್ಚಾಗುವುದರ ಜೊತೆಗೆ ಯೋಜನೆಗಳ ಬಗೆಗಿನ ಜ್ಞಾನ ಜನರಲ್ಲಿ ಹೆಚ್ಚಾಗಿದೆ. ಗ್ರಾಮಗಳಲ್ಲಿರುವ ಸ್ವಸಹಾಯ ಗುಂಪುಗಳ ಸದಸ್ಯರಿಂದ ಭಾಗವಹಿಸುವಿಕೆ ಪ್ರಕ್ರಿಯೆ ಉತ್ತಮವಾಗಿದ್ದು ಅಭಿವೃದ್ಧಿಯ ಮಟ್ಟವು ಹೆಚ್ಚಾಗಿದೆ.

**ಅಧಿಕಾರಯುಕ್ತತೆ:–**

ಯೋಜನೆಗಳಲ್ಲಿ ಸರ್ಕಾರ ಅಳವಡಿಸಿರುವ ಆಡಳಿತ ವಿಕೇಂದ್ರಿಕರಣ ತತ್ವದಿಂದ ಎಲ್ಲಾ ವರ್ಗದ (ಮಹಿಳೆಯರು, ದುರ್ಬಲ ವರ್ಗದವರು) ಜನರು ಯೋಜನೆಗಳಲ್ಲಿ ಭಾಗವಹಿಸಿ ತಮ್ಮ ಸಾಮರ್ಥ್ಯ ಅಭಿವೃದ್ಧಿ ಹೊಂದಿ ನೀತಿ ನಿರ್ಣಯ ರೂಪಿಸುವ ಅಭಿವೃದ್ಧಿಯನ್ನು ಹೊಂದಿದ್ದಾರೆ. ಉದಾಹರಣೆಗೆ: ಜಲನಿರ್ಮಲ ಯೋಜನೆಯಲ್ಲಿ ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಸಮಿತಿಗಳ ರಚನೆ, ಸುಜಲ ಜಲಾನಯನ, ಯೋಜನೆಯಲ್ಲಿ ಕ್ಷೇತ್ರ ಗುಂಪು ಕಾರ್ಯಕಾರಿ ಸಮಿತಿಗಳ ರಚನೆ, ಜಲಸಂವರ್ಧನೆ ಯೋಜನೆಯಲ್ಲಿ ಜೆ.ಎಸ್.ವೈ.ಎಸ್. ಸಂಘಗಳ ರಚನೆ ಮತ್ತು ಅವರೇ ನಿರ್ಧಾರ ತೆಗೆದುಕೊಂಡು ಯೋಜನೆಗಳನ್ನು ರೂಪಿಸಿ ಹಣಕಾಸು ಬಿಡುಗಡೆ ಮಾಡುವ ಅಧಿಕಾರ, ಜನರಲ್ಲಿ ವಿಶ್ವಾಸ ಮತ್ತು ಭಾಗವಹಿಸುವಿಕೆಯನ್ನು ಹೆಚ್ಚಿಸಿವೆ.

ಭಾಗವಹಿಸುವಿಕೆಯು ಜನರನ್ನು ಅಧಿಕಾರಯುಕ್ತರನ್ನಾಗಿ ಮಾಡುವ ಕ್ರಿಯೆಯಾಗದೆ ಅಧಿಕಾರ ಯುಕ್ತತೆಯು ಜನರ ಕೌಶಲ್ಯ ಹಾಗೂ ಸಾಮರ್ಥ್ಯ ಮತ್ತು ಮನೋಭಾವಗಳನ್ನು ಹೆಚ್ಚಿಸುವ ಸಾಧನವಾಗಿದೆ. ಅಧಿಕಾರಯುಕ್ತತೆ ಜನರು ಭಾಗವಹಿಸಲು, ಧ್ವನಿ ಎತ್ತಲು, ನಿರ್ವಹಿಸಲು ಜನರನ್ನು ಸಬಲರನ್ನಾಗಿ ಮಾಡಲು ಸಹಕಾರಿಯಾಗಿದೆ. ಅಲ್ಲದೆ ಜನರಿಗೆ ತಮ್ಮ ಅಭಿವೃದ್ಧಿಗೆ ಯಾವುದು ಪೂರಕವೋ ಅಂಥಹ ನಿರ್ಧಾರಗಳನ್ನು ಮಾಡುವ ಹಾಗೂ ಅದರಂತೆ ಕ್ರಮಗಳನ್ನು ತೆಗೆದುಕೊಳ್ಳುವ ಶಕ್ತಿಯನ್ನು ಕೊಟ್ಟಿದೆ. ಆದರೆ ಕೆಲವು ಅಧಿಕಾರಿಗಳು ಅದನ್ನು ಸರಿಯಾಗಿ ಜನರಿಗೆ ಬಿಟ್ಟುಕೊಡದೆ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿರುವುದರಿಂದ ಜನರ ಭಾಗವಹಿಸುವಿಕೆಯಲ್ಲಿ ವ್ಯತ್ಯಾಸಗಳಾಗುತ್ತದೆ. ಜನರು ಈ ಅಧಿಕಾರಿಗಳ ಪ್ರಕಾರ ನಡೆಯಲಿಲ್ಲ ಎಂದರೆ ಕೆಲಸ ಆಗಿದ್ದರೂ ಬಿಲ್ ನೀಡುವಾಗ ವಿನಾ ಕಾರಣವಾಗಿ ಸತಾಯಿಸುತ್ತಾರೆ. ಇದಕ್ಕೆ ಸ್ಥಳೀಯ ಸ್ವಯಂಸಂಸ್ಥೆಯ ಸಹಕಾರ ಮತ್ತು ಬೆಂಬಲವೂ ಕಾರಣವಾಗಿರುತ್ತದೆ. ಈಗ ಜನರ ಅಧಿಕಾರದಲ್ಲಿ ಅಧಿಕಾರಿಗಳು ಸ್ವಯಂಸೇವಾ ಸಂಸ್ಥೆಗಳ ಹಸ್ತಕ್ಷೇಪ ಇದ್ದರೆ ವಿಕೇಂದ್ರೀಕರಣ ಎಲ್ಲಿ ಬಂತು, ಜನರ ಭಾಗವಹಿಸುವಿಕೆ ಎಲ್ಲಿ ಪ್ರಯೋಜನವಾಗುತ್ತದೆ. ಮೇಲ್ಮಟ್ಟದ ಅಧಿಕಾರಿಗಳು ಇದರ ಬಗ್ಗೆ ಕಾಳಜಿ ವಹಿಸಬೇಕಾಗಿದೆ.

**ಭಾಗವಹಿಸುವಿಕೆ ಪ್ರಕ್ರಿಯೆಯಿಂದ ಆಗುವ ಪರಿಣಾಮಗಳು :–**

1. ಯೋಜನೆಗಳ ಅನುಷ್ಠಾನಕ್ಕೆ ಸೂಕ್ತ ಮಾಹಿತಿ ಸಿಗುತ್ತದೆ.
2. ಸೌಲಭ್ಯಗಳ ಸಮಾನ ಹಂಚಿಕೆ
3. ಮಾನಸಿಕ ಹಾಗೂ ಭೌತಿಕ ಅಭಿವೃದ್ಧಿ
4. ಬಡತನ ಕಡಿಮೆ ಆಗಲು ಸಾಧ್ಯ
5. ಸಾಮಾಜಿಕ ಸಮಾನತೆ ಉಂಟಾಗುತ್ತದೆ
6. ನಿರ್ಧಾರ ತೆಗೆದುಕೊಳ್ಳುವ ಅವಕಾಶ ದೊರೆಯುತ್ತದೆ
7. ದುರ್ಬಲ ಗುಂಪುಗಳ ಗುರುತಿಸುವಿಕೆ
8. ಸಾಮೂಹಿಕ ಒಡೆತನವನ್ನು ಪ್ರತಿಪಾದಿಸುತ್ತದೆ.
9. ದುರ್ಬಲ ಪರಿಸ್ಥಿತಿಗಳನ್ನು ಗುರುತಿಸಿ ಸರಿಪಡಿಸಲು ಸಹಾಯ ಮಾಡುತ್ತದೆ.
10. ದುರ್ಬಲತೆಯನ್ನು ಕಡಿಮೆ ಮಾಡಿ ಸಾಮರ್ಥ್ಯ ಹೆಚ್ಚಿಸುತ್ತದೆ.
11. ಎಲ್ಲಾ ಪಾಲುದಾರರನ್ನು (ಪಾತ್ರಧಾರಿಗಳನ್ನು) ತೊಡಗಿಸುವುದು.
12. ದುರ್ಬಲರಲ್ಲಿ ವಿಶ್ವಾಸ ಹಾಗೂ ಭರವಸೆಯನ್ನು ಹೆಚ್ಚಿಸುತ್ತದೆ.
13. ಪಾತ್ರಧಾರಿಗಳ ಪಾತ್ರಗಳ ಬಗ್ಗೆ ವಿಶ್ಲೇಷಣೆ ನಡೆಯುತ್ತದೆ.
14. ದುರ್ಬಲರು ತಮ್ಮೊಳಗೆ ಸಹಾಯ ಮಾಡಿಕೊಳ್ಳಲು ಪ್ರೇರಣೆ ಸಿಗುತ್ತದೆ.
15. ಸಾಮಾಜಿಕ, ಮಾನಸಿಕ, ಆಡಳಿತಾತ್ಮಕ ಮತ್ತು ತಾಂತ್ರಿಕ ಕೌಶಲ್ಯಗಳು ಹೆಚ್ಚಲು ಸಹಾಯವಾಗುತ್ತದೆ.
16. ಸುಸ್ಥಿರ ಅಭಿವೃದ್ಧಿ ಸಾಧ್ಯ.

ಭಾಗವಹಿಸುವಿಕೆಯ ಅಂತಿಮ ಮತ್ತು ಮಹತ್ವದ ಉದ್ದೇಶ ಸಲಹಾತ್ಮಕ ಭಾಗವಹಿಸುವಿಕೆಯಿಂದ ಸಣ್ಣಪುಟ್ಟ ಸಮಸ್ಯೆಗಳನ್ನು ಪರಿಹರಿಸಿಕೊಂಡು ಅಭಿವೃದ್ಧಿಯತ್ತ ದಾಪುಗಾಲು ಹಾಕುವುದು ಭಾಗವಹಿಸುವಿಕೆಯು ಬದಲಾವಣೆಯನ್ನು ತರುತ್ತದೆ. ಬದಲಾವಣೆಯ ಇನ್ನೊಂದು ಮುಖವೇ ಅಭಿವೃದ್ಧಿ. ಜೊತೆಗೆ ಸಂಘರ್ಷಗಳನ್ನು ತಪ್ಪಿಸಿ ಸೌಹಾರ್ದಯುತವಾಗಿ ನಡೆಯಲು ಭಾಗವಹಿಸುವಿಕೆ ದಾರಿಮಾಡಿಕೊಡುತ್ತದೆ. ಭಾಗವಹಿಸುವಿಕೆ ತಂತ್ರ ಎಲ್ಲಾ ವರ್ಗಗಳಿಗೆ ಎಲ್ಲಾ ವಿಚಾರಗಳಿಗೆ ಅವಕಾಶಕೊಡುವ ಮೂಲಕ ಯೋಜನೆಗಳ ಫಲವನ್ನು ಎಲ್ಲರೂ ಪಡೆಯಲು ವ್ಯವಸ್ಥೆ ಕಲ್ಪಿಸಿ ಪಾತ್ರಧಾರಿಗಳ ಜವಾಬ್ದಾರಿಗಳನ್ನು ಸೂಚಿಸಿ ಸಣ್ಣಪುಟ್ಟ ವಿಫಲತೆಗಳನ್ನು ಸರಿಪಡಿಸಿ ಸಮಾಜವನ್ನು ಅಭಿವೃದ್ಧಿಯತ್ತ ನೌಕೆಯಲ್ಲಿ ಬಹುದೂರ (ಎತ್ತರಕ್ಕೆ) ಸಾಗಿಸುತ್ತದೆ. ಆದ್ದರಿಂದ ಸರ್ಕಾರದ ಯೋಜನೆಗಳು ಜನರ ಯೋಜನೆಗಳಾಗಬೇಕು. ಜನರ ಯೋಜನೆಗಳಾಗಬೇಕಾದರೆ ಭಾಗವಹಿಸುವಿಕೆ ಬರಬೇಕು. ಆದ್ದರಿಂದ ಜನರ ಭಾಗವಹಿಸುವಿಕೆಯಿಂದ ಯೋಜನೆಗಳಲ್ಲಿ ದಕ್ಷತೆ, ದೃಢತೆ, ವಿಶ್ವಾಸ, ನಂಬಿಕೆ ಹೆಚ್ಚಾಗಿ ಅಭಿವೃದ್ಧಿ ಸಾಧ್ಯವಾಗುತ್ತದೆ.

# ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಗ್ರಾಮಗಳು




**ಡಾ. ಟಿ. ರಮೇಶ್**
ಉಪನ್ಯಾಸಕರು,
ಬಾಸುದೇವ್ ಸೋಮಾನಿ ಕಾಲೇಜು,
ಕುವೆಂಪುನಗರ, ಮೈಸೂರು-570023
Mobile: 9844775678
Email:
rameshharalapur@rediffmail.com


ವಿಸ್ತಾರವಾದ ಭೂಪ್ರದೇಶ ಸಮೃದ್ಧವಾದ ನೈಸರ್ಗಿಕ ಸಂಪನ್ಮೂಲ, ಉತ್ತಮ ಹವಾಮಾನ ಇವು ಭಾರತೀಯರಿಗೆ ಪ್ರಕೃತಿ ನೀಡಿದ ಕೊಡುಗೆ. ಸಹಜವಾಗಿ ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಭಾಂತ ದೇಶವು ಹಳ್ಳಿಗಳಿಂದ ಕೂಡಿರುವುದರಿಂದ ಈ ಹಳ್ಳಿಗಳ ಅಭಿವೃದ್ಧಿಯಿಂದಾಗಿ ಭಾರತವು ಗ್ರಾಮೀಣ ಕ್ಷೇತದಲ್ಲಿ ಪ್ರಾಬಲ್ಯ ಹೊಂದಿರುವ ದೇಶ ಎನಿಸಿದೆ ಜಾಹತೀಕರಣದ ಅಬ್ಬರದ ನಡುವೆಯೂ ಶೇಕಡಾ 65ರಿಂದ 70ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ ಎಂಬುದು ಹೆಮ್ಮೆಯ ಸಂಗತಿ. ಗಾಂಧೀಜಿಯವರು ಹೇಳಿದಂತೆ ನಮ್ಮ ದೇಶದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯ ಹೊರತು ದೇಶದ ಸರ್ವತೋಮುಖ ಪ್ರಗತಿ ಕೇವಲ ಕನಸಾಗಿ ಉಳಿಯುತ್ತದೆ. ಹಳ್ಳಿಗಳು ದೇಶದ ಬೆನ್ನೆಲುಬಿದ್ದಂತೆ ಎಂಬುದು ನಿಜ. ಆದರೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳ ನಡುವೆಯೂ ಬಹುತೇಕ ಸೌಲಭ್ಯಗಳಿಂದ ವಂಚಿತರಾಗಿರುವ ಹಳ್ಳಿಗಳು ಭಾತದಲ್ಲಿರುವುದು ವಿಪರ್ಯಾಸದ ಸಂಗತಿ. ಪಟ್ಟಣಗಳ ಮತ್ತು ಹಳ್ಳಿಗಳ ನಡುವೆ ಜನರ ಗಳಿಕೆ, ಕೈಗಾರಿಕೀಕರಣ, ಸಂಚಾರ, ಸಂಪರ್ಕಗಳ ಲಭ್ಯತೆ ಮೊಲದಲಾದ ಅಂಶಗಳಲ್ಲಿ ತೀವ್ರ ಅಸಮತೆಗಳು ಸ್ಥಿತ್ವದಲ್ಲಿವೆ. ಹಳ್ಳಿಗಳು ಆಧುನಿಕತೆಯ ಮಾಧ್ಯಮಗಳಿಂದ ವಂಚಿತವಾಗಿರುವ ದುಸ್ಥಿತಿ ನಮ್ಮಲ್ಲಿದೆ. ಇದರಿಂದ ಹಳ್ಳಿಗಳ ಮತ್ತು ಪಟ್ಟಣಗಳ ನಡುವಿನ ಪ್ರಾದೇಶಿಕ ಅಸಮತೆ ದಿನದಿಂದ ದಿನಕ್ಕೆ ಪ್ರಖರಗೊಳ್ಳುತ್ತಿದೆ. ಇಂತಹ ಪರಿಸ್ಥಿತಿಯನ್ನು ಸುಧಾರಿಸಿ, ಅಭಿವೃದ್ಧಿಯ ಫಲಗಳು ಗ್ರಾಮೀಣ ಪ್ರದೇಶಗಳಿಗೆ ಹರಿಯುವಂತೆ ಮಾಡುವುದು ಐತಿಹಾಸಿಕ ಅಗತ್ಯವಾಗಿದೆ. ಪ್ರಾದೇಶಿಕ ಅಸಮತೆಗಳನ್ನು ತಗ್ಗಿಸುವ ಗ್ರಾಮೀಣ ಆರ್ಥಿಕತೆಯನ್ನು ಸುಧಾರಿಸುವ ಮತ್ತು ಗ್ರಾಮವಾಸಿ ಬಡಜನತೆಯ ಜೀವನಮಟ್ಟವನ್ನು ಉತ್ತಮಪಡಿಸುವ ಉದ್ದೇಶದಿಂದ ಸ್ವತಂತ್ರ ಭಾರತದಲ್ಲಿ ಹಲವಾರು ವಿಧಗಳ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅಭಿವೃದ್ಧಿ ಎಂಬುದು ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಜನರ ಜೀವನಮಟ್ಟವನ್ನು ಸುಧಾರಿಸುವ ಪ್ರಯತ್ನವಾಗಿದೆ. ಅಂತೆಯೇ ಗ್ರಾಮೀಣ ಅಭಿವೃದ್ಧಿ ಎಂಬ ಕಲ್ಪನೆಯು ಗ್ರಾಮೀಣ ಜನತೆಯ ಜೀವನದ ಸ್ಥಿತಿಯನ್ನು ಉತ್ತಮ ಪಡಿಸುವ ಆರ್ಥಿಕ, ಸಾಮಾಜಿಕ,ರಾಜಕೀಯ ಮತ್ತು ಸಾಂಸ್ಕೃತಿಕ ಜೀವನಮಟ್ಟ ಸುಧಾರಿಸುವ ಕ್ರಮವಾಗಿದೆ.

ಅಭಿವೃದ್ಧಿ ಎಂಬುದು ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಜನರ ಜೀವನಮಟ್ಟವನ್ನು ಸುಧಾರಿಸುವ ಪ್ರಯತ್ನವಾಗಿದೆ.

**ಗ್ರಾಮೀಣ ಅಭಿವೃದ್ಧಿಯ ಮುಖ್ಯ ಲಕ್ಷಣಗಳು**

1. ಗ್ರಾಮೀಣ ವಲಯದ ಬಡವರ್ಗಗಳ ಜನರ ಕ್ಷೇಮಾಭ್ಯುದಯವನ್ನು ಹೆಚ್ಚಿಸಲು ಸಂಪನ್ಮೂಲಗಳನ್ನು ಕ್ರೋಢೀಕರಿಸುವಿಕೆ ಮತ್ತು ಹಂಚಿಕೆ ಮಾಡುವುದು.
2. ಸಾಮಾಜಿಕ ಮತ್ತು ಉತ್ಪಾದಕ ಸೇವೆಗಳು ಕಡಿಮೆ ಆದಾಯ ವರ್ಗಗಳ ಜನರಿಗೆ ಮತ್ತು ಹಿಂದುಳಿದ ಪ್ರದೇಶಗಳಿಗೆ ತಲುಪುವಂತೆ ಕಾರ್ಯಕ್ರಮಗಳನ್ನು ನೆರವೇರಿಸುವುದು.
3. ಗ್ರಾಮೀಣ ಜನರಲ್ಲಿ ಸಮರ್ಪಕವಾದ ಪರಿಣತಿಯನ್ನು ಬೆಳೆಸುವ ಮೂಲಕ ಅಸ್ತಿತ್ವದಲ್ಲಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಅವರನ್ನು ಸಜ್ಜುಗೊಳಿಸುವುದು.

4. ಗ್ರಾಮೀಣ ಭಾಗಗಳಲ್ಲಿ  ಅಭಿವೃದ್ಧಿಗೆ ನೆರವಾಗುವಂತಹ ಶಾಶ್ವತ ಆಸ್ತಿಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮಗಳ ಮೂಲಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು ಜನರ ಆದಾಯವನ್ನು, ಮಟ್ಟವನ್ನು ಹೆಚ್ಚಿಸುವುದು.
5. ಗ್ರಾಮೀಣ ಅಭಿವೃದ್ಧಿಯ ಮಾನವನ ಜೀವನದೊಡನೆ ಹಾಸುಹೊಕ್ಕಾಗಿರುವ ಎಲ್ಲಾ ಕಾರ್ಯಕ್ರಮಗಳಿಗೆ ವ್ಯಾಪಿಸಿರುತ್ತದೆ. ವ್ಯವಸಾಯ, ನೀರಾವರಿ, ಶಿಕ್ಷಣ, ಆರೋಗ್ಯ ಪೂರಕ ಉದ್ಯೋಗ, ವಸತಿ, ತರಬೇತಿ ಸಮಾಜ ಕಲ್ಯಾಣ ಮೊದಲಾದವುಗಳಿಗೆ ಸಂಬಂಧಿಸಿದ ಕಾರ್ಯಾಕ್ರಮಗಳನ್ನು ಅದು ಒಳಗೊಂಡಿರುತ್ತದೆ.

**ಗ್ರಾಮೀಣ ಅಭಿವೃದ್ಧಿಯ ಕೆಲವು ಕಾರ್ಯಕ್ರಮಗಳು**

ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿಯ ಸಾಧನೆಗಾಗಿ ಅನೇಕ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ. 1952ರಷ್ಟು ಹಿಂದಿಯೇ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಯಿತು, ಮೊದಲ ಬಾರಿಗೆ ತರಲಾಗಿದ್ದ ಕೆಲವು ಕಾರ್ಯಕ್ರಮಗಳನ್ನು ಪುನ:ರೂಪಿಸಲಾಗಿದೆ.  ಕೆಲವು ಕಾರ್ಯಕ್ರಮಗಳ ಸ್ವರೂಪವನ್ನು ಸ್ವಲ್ಪ ಬದಲಾಯಿಸಿ ಹೊಸ ಹೆಸರು ನೀಡಲಾಗಿದೆ ಹಾಗೂ ಕೆಲವನ್ನು ವಿಶೇಷ ಅಭಿವೃದ್ಧಿ ಯೋಜನೆಗಳೆಂದು ಮತ್ತು ಕೆಲವು ಹೊಸಕಾರ್ಯಕ್ರಮಗಳನ್ನು ಆಚರಣೆಯಲ್ಲಿ ತರಲಾಗಿದೆ.

ಗ್ರಾಮೀಣಾಭಿವೃದ್ಧಿಗಾಗಿ  ಅಸ್ತಿತ್ವದಲ್ಲಿರುವ ಪ್ರಮುಖ ವಿವಿಧ ಕಾರ್ಯಕ್ರಮಗಳೆಂದರೆ

* ಸಮುದಾಯ ಅಭಿವೃದ್ಧಿ ಕಾರ್ಯಕ್ರಮ
* ರಾಷ್ಟ್ರೀಯ ವಿಸ್ತರಣಾ ಸೇವೆ
* ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ
* ಜವಾಹರ್ ರೋಜ್‌ಗಾರ್ ಯೋಜನೆ
* ಉದ್ಯೋಗ ಭರವಸೆ ಯೋಜನೆ
* ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಜನರ ಅಭಿವೃದ್ಧಿ ಕಾರ್ಯಕ್ರಮ
* ಬರಗಾಲ ಸಂಭವನೀಯ ಪ್ರದೇಶಗಳ ಕಾರ್ಯಕ್ರಮ
* ಸಣ್ಣ ರೈತರ ಅಭಿವೃದ್ಧಿ ಸಂಸ್ಥೆಗಳು
* ಅತಿ ಸಣ್ಣ ( ಸೀಮಾಂತ) ರೈತರ ಮತ್ತು ಕೃಷಿ ಕಾರ್ಮಿಕರ ಸಂಸ್ಥೆ
* ಬರಗಾಲ ಪೀಡಿತ ಪ್ರದೇಶದ ಕಾರ್ಯಕ್ರಮ
* ಗುಡ್ಡಗಾಡು ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮ
* ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ
* ಸ್ವಂತ ಉದ್ಯೋಗ ಕಾರ್ಯಕ್ರಮಗಳು
* ಸ್ವರ್ಣಜಯಂತಿ ಗ್ರಾಮ ಸ್ವ-ರೋಜ್‌ಗಾರ್ ಯೋಜನೆ
* ವೇತನ ಉದ್ಯೋಗ ಕಾರ್ಯಕ್ರಮಗಳು
* ಜವಾಹರ್ ಗ್ರಾಮ ಸಮೃದ್ಧಿ ಯೋಜನೆ
* ಸಂಪೂರ್ಣ ಗ್ರಾಮ ರೋಜ್‌ಗಾರ್ ಯೋಜನೆ
* ರಾಷ್ಟ್ರೀಯ ಸಾಮಾಜಿಕ ನೆರವಿನ ಕಾರ್ಯಕ್ರಮ

ಈ ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ಗ್ರಾಮಗಳ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೆ ತಂದು ಕಾರ್ಯನಿರ್ವಹಿಸುತ್ತಾ ಬರುತ್ತಿದೆ ಆದರೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಈ ದೇಶದ ಗ್ರಾಮಗಳು ಅಭಿವೃದ್ಧಿಯಾಗಿಲ್ಲ ಆದ್ದರಿಂದ ಈ ಕಾರ್ಯಕ್ರಮದ ಜೊತೆಗೆ ಇನ್ನೂ ಹಲವಾರು ನೂತನ ಯೋಜನೆಗಳನ್ನು ಜಾರಿಗೆ ತರುವುದರ ಮೂಲಕ ಅವುಗಳು ಜನರಿಗೆ ಮತ್ತು ಗ್ರಾಮಗಳಿಗೆ ನೇರವಾಗಿ ತಲುಪಿದರೆ ಮಾತ್ರ ಈ ದೇಶ ಅಭಿವೃದ್ಧಿ ಹೊಂದಲು ಸಾದ್ಯ.

# ಸಾವಯವ ಕೃಷಿ ಕ್ರಾಂತಿಗೆ ಮುಂದಾದ ದೂರದ ಟಿಬೇಟಿಯನ್ನರು

*ಎಚ್.ನಾಗರಾಜ*

ಕೃಷಿಕರಲ್ಲಿ ಇಂದು ಎಲ್ಲೆಡೆ ಸಾವಯವದ ಕೃಷಿ ಬಗ್ಗೆ ಕೇಳಿಬರುತ್ತಿದ್ದು, ಸರಕಾರವೂ ಕೂಡ ಈ ನಿಟ್ಟಿನಲ್ಲಿ ಉತ್ತೇಜವನ್ನು ನೀಡುತ್ತಿದೆ. ಗ್ರಾಮಾಂತರ ಪ್ರದೇಶದಲ್ಲಂತೂ ಎಲ್ಲೆಡೆಯೂ ಸಾಯವದ ಕ್ರಾಂತಿಯಾಗುತ್ತಿದೆ. ಆಂತೆಯೆ



ಟಿಬೇಟಿಯನ್ ಆಡಳಿತಾತ್ಮಕ ಪ್ರಧಾನಿ ಡಾ.ಲೋಬ್ಸಾಂಗ್ ಸಾಂಗೆ ಆವರು ಕೂಡ ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡಿ ಕೃಷಿಕರ ಸಾಧಕ-ಬಾಧಕಗಳ ಕುರಿತು ವಿಶೇಷ ಕಾಳಜಿಯನ್ನು ಹೊಂದಿದವರಾಗಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನ ಟಿಬೇಟಿಯನ್ ಕಾಲನಿಯಲ್ಲಿ ಟಿಬೇಟಿಗರು ಸಾವಯವ ಕೂಗನ್ನು ಮೊಳಗಿಸಿದ್ದಾರೆ.

ಚೀನಾ ಆಕ್ರಮಣದಿಂದ ನಿರಾಶ್ರಿತರಾಗಿ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನಲ್ಲಿ ಆಶ್ರಯಪಡೆದ ಟಿಬೇಟಿಯನ್ನರು ರಾಜ್ಯ ಸರಕಾರ ನೀಡಿದ ಭೂಮಿಯಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುವ ಮೂಲಕ ಜೀವನ ನಿರ್ವಹಣೆಯನ್ನು ಮಾಡುತ್ತಿದ್ದಾರೆ.



ಸಾವಯವ ಕ್ರಾಂತಿ :




ಟಿಬೇಟಿಯನ್ ಕಾಲನಿಯಲ್ಲಿ ಸುಮಾರು 482 ಟಿಬೇಟಿಯನ್ ರೈತರು ಸಂಪೂರ್ಣವಾಗಿ ಸಾವಯವ ಕೃಷಿಯನ್ನು ಮಾಡುತ್ತಿದ್ದು, 1500 ಎಕರೆ ಕೃಷಿ ಭೂಮಿಯು ಇಂದು ಸಾವಯವ ಬೆಳೆಯನ್ನು ಕಾಣುವಂತಾಗಿದೆ. ಭತ್ತ,ಜೋಳ, ಹತ್ತಿ, ಶೇಂಗಾ ಇತರೆ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದಾರೆ. ಮುಂಡಗೋಡದ ಟಿಬೇಟಿಯನ್ ಕಾಲನಿಯನ್ನು ಹೊಕ್ಕರೆ ಕೃಷಿ ಭೂಮಿಯಲ್ಲಿ ಬೆಳೆದ ಬೆಳೆಗಳನ್ನು ನೋಡುತ್ತಿದ್ದಂತೆ ಮೈಸೂರು ಭಾಗದಲ್ಲಿಯ ಕೃಷಿ ಭೂಮಿಯನ್ನು ನೋಡಿದಂತಾಗುತ್ತದೆ. ಆಷ್ಟರಮಟ್ಟಿಗೆ ಸಮೃದ್ದವಾದ ಕೃಷಿ ಚಟುವಟಿಕೆಗಳನ್ನು ಅಲ್ಲಿ ನಡೆಸಿರುವದನ್ನು ನಾವು ಕಾಣಬಹುದಾಗಿದೆ.

ಪರಿಶ್ರಮದಿಂದ ಬದಲಾವಣೆ :

ಚೀನಾ ಆಕ್ರಮಣದಿಂದ ಕಂಗೆಟ್ಟು 1959ರಲ್ಲಿ ನಿರಾಶ್ರಿತರಾಗಿ ಬಂದ ಟಿಬೇಟಿಯನ್ನರಿಗೆ ಭಾರತ ಸರಕಾರ ಮತ್ತು ಕರ್ನಾಟಕ ಸರಕಾರವು ಅವರಿಗೆ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನಲ್ಲಿ 4054ಎಕರೆ ಭೂಮಿಯನ್ನು ನೀಡಿತ್ತು. ಅದರಲ್ಲಿ ಬಹುಭಾಗ ಕಾಡಿನಿಂದ ಆವೃತ್ತವಾದ ಭೂಮಿ. ಅಲ್ಲಿ ಹಂತಹಂತವಾಗಿ ತಮ್ಮ ವಸತಿ ಕಾಲನಿಗಳನ್ನು ವಿಸ್ತರಿಸಿಕೊಳ್ಳುತ್ತ, ಕೃಷಿಯನ್ನು ಮಾಡಲು ಪ್ರಾರಂಭಿಸಿದರು.

ನಿಧಾನಕ್ಕೆ ತಮ್ಮದೆ ಆದ ಪದ್ಧತಿಯಲ್ಲಿ ಕೃಷಿಯನ್ನು ಪ್ರಾರಂಭಿಸಿದ ಟಿಬೇಟಿಯನ್ನರು, ಹೆಚ್ಚಿನ ಇಳುವರಿಗಾಗಿ ನಿಧಾನವಾಗಿ ರಾಸಾಯನಿಕ ಗೊಬ್ಬರದ ಬಳಕೆಗೆ ಮೊರೆ ಹೋಗಿ ಸಂಪೂರ್ಣವಾಗಿ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕವನ್ನೇ ಅವಲಂಬಿಸಿ ಕೃಷಿಯನ್ನು ಮಾಡಲು ಪ್ರಾರಂಭಿಸಿದರು. ನಂತರದ ದಿನಗಳಲ್ಲಿ ಇಲ್ಲಿನ ಭೂಮಿ ಬರಡಾಗಿ ಹೋಗುತ್ತ ಇಳುವರಿ ಕಡಿಮೆಯಾಗುತ್ತ ಬಂದಿತು.

**ಸಾವಯವಕ್ಕೆ ಮುಖ ಮಾಡಿದರು:**





ನಂತರ ಟಿಬೇಟಿಯನ್ನರು ರಾಸಾಯನಿಕ ಕೃಷಿಗೆ ಗುಡ್ ಬೈ ಹೇಳಿ ಸಾವಯದ ಕಡೆಗೆ ಒಲವು ತೋರಿದರು. ಒಂದರೆಡು ವರ್ಷಗಳಿಂದ ಸಾವಯದ ಮಂತ್ರ ಜಪಿಸಿದ ಟಿಬೇಟಿಯನ್ನರು ಈದೀಗ ಸಾವಯವವಕ್ಕೆ ಜೋತು ಬಿದ್ದಿದ್ದಾರೆ.

ಟಿಬೇಟಿಯನ್‌ರೆ ಆದ ಸಿರಿಂಗ್ ಭೋಥೇನ್ ಎನ್ನುವ ಸಾವಯವ ಕೃಷಿ ತಜ್ಞರು ಇಲ್ಲಿನ ಟಿಬೇಟಿಯನ್ ಕೃಷಿಕರಿಗೆ ಸಾವಯವದ ತರಬೇತಿಯನ್ನು ನೀಡುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಟಿಬೇಟಿಯನ್ ಕಾಲನಿಯಲ್ಲಿ ಸಾವಯವ ಕೃಷಿ ಕ್ರಾಂತಿ ನಡೆಯುತ್ತಿದೆ.

ರೋಗಗಳ ಹತೋಟಿಗೆ ಕ್ರಿಮಿನಾಶಕಗಳ ಬದಲಾಗಿ ಬೇವಿನ ಹಿಂಡಿಯನ್ನು ಬಳಸುತ್ತಿದ್ದಾರೆ. ಹೈನುಗಾರಿಕೆಯನ್ನು ನಡೆಸುತ್ತಿರುವ ಕ್ಯಾಂಪ್‌ನವರು ಇದರಿಂದ ಕೊಟ್ಟಿಗೆ ಗೊಬ್ಬರು ಸಾಕಷ್ಟು ಪ್ರಮಾಣದಲ್ಲಿ ಇಲ್ಲಿ ದೊರೆಯುತ್ತದೆ.

**ಟನ್‌ಗಟ್ಟಲೆ ಸಾವಯವ :**

ಧಾರವಾಡ ಕೃಷಿ ವಿಶ್ವವಿದ್ಯಾಲಯದಿಂದ ಎರೆಹುಳುಗಳನ್ನು ಪಡೆದು ಕಂಪೋಸ್ಟ ಗೊಬ್ಬರವನ್ನು ತಯಾರಿಸುತ್ತಿದ್ದಾರೆ. ಈಗಾಗಲೆ ಆವರಲ್ಲಿ 25 ಬೃಹತ್ ಪ್ರಮಾಣದ ಸಾವಯವ ಗೊಬ್ಬರದ ತೊಟ್ಟಿಯನ್ನು ನಿರ್ಮಿಸಿದ್ದಾರೆ. ಪ್ರತಿ ವರ್ಷಕ್ಕೆ ಸುಮಾರು 45 ಟನ್‌ಗಟ್ಟಲೆ ಸಾವಯವ ಗೊಬ್ಬರ ತಯಾರಿಸುತ್ತಾರೆ. ನಂತರ ಇದನ್ನು ಪ್ರತಿ ಕೃಷಿ ರೈತರಿಗೆ ಮೂರು ಟ್ರಿಪ್‌ನಂತೆ ಗೊಬ್ಬರವನ್ನು ವಿತರಿಸುತ್ತಾರೆ.

**ಪ್ರಧಾನಿಯಿಂದ ಶಹಬ್ಬಾಸ್‌ಗಿರಿ:**

ಟಿಬೇಟಿಯನ್ ಆಡಳಿತಾತ್ಮಕ ಪ್ರಧಾನಿ ಡಾ.ಲೋಬ್ಸಾಂಗ್ ಸಾಂಗೆ ಆವರು ಕೂಡ ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡಿ ಕೃಷಿಕರ ಸಾಧಕ–ಬಾಧಕಗಳ ಕುರಿತು ವಿಶೇಷ ಕಾಳಜಿಯನ್ನು ಹೊಂದಿದವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಆವರು ಈಚೇಗೆ ಮುಂಡಗೋಡ ಕಾಲನಿಗೆ ಭೇಟಿ ನೀಡಿ ಇಲ್ಲಿಯ ಟಿಬೇಟಿಯನ್ನರ ಸಾವಯವ ಕೃಷಿಯ ಬಗ್ಗೆ ಶ್ಲಾಘನೆಯನ್ನು ವ್ಯಕ್ತಪಡಿಸಿದ್ದಾರೆ. ಆಲ್ಲದೆ ಸಾವಯವ ಕೃಷಿಗಾಗಿ ಅಗತ್ಯದ ಎಲ್ಲ ಸೌಲಭ್ಯವನ್ನು ಕಲ್ಪಿಸಿಕೊಡುವಂತೆ ಸ್ಥಳೀಯ ಆಧಿಕಾರಿಗಳಿಗೆಸೂಚಿಸಿದ್ದಾರೆ.



ನಿರಾಶ್ರಿತರಾಗಿ ಬಂದ ಟಿಬೇಟಿಯನ್ನರು ತಮಗೆ ಕೊಟ್ಟ ಭೂಮಿಯನ್ನುಕೃಷಿ ಭೂಮಿಯಾಗಿ ಅರಳಿಸಿ, ಆದರಲ್ಲೂ ಈಗ ಸಾವಯವ ಕೃಷಿಗೆ ಪ್ರಾಧಾನ್ಯತೆಯನ್ನು ನೀಡಿ ನಮ್ಮ ನೆಲ,ಜಲದ ಕಾಳಜಿಯನ್ನು ವಹಿಸುತ್ತಿರುವದು ನಿಜಕ್ಕೂ ಪ್ರಶಂಸನೀಯವಾಗಿದ್ದು, ಈ ಅವರ ಸಂಘಟಿತ ಪ್ರಯತ್ನ ಇತರರಿಗೂ ಮಾದರಿಯಾಗಿದೆ.

**ಎಚ್.ನಾಗರಾಜ**
ಅಂಚೆ, ಮೂಡಲಮಕ್ಕಿ, ಬಿಣಗಾ, 581 307
ತಾ : ಕಾರವಾರ ಜಿಲ್ಲೆ:
ಉತ್ತರ ಕನ್ನಡ, 9480072209

ಲೇಖನ

No:9844641836
ಮಿಂಚಂಚೆ:npatted@gmail.
com
ಕೃಷಿ ವ್ಯವಹಾರ ನಿರ್ವಹಣೆ ವಿಭಾಗ

ರಾಯಚೂರು ಕೃಷಿ ನಿಯಂತ್ರಿತ ಮಾರುಕಟ್ಟೆಯಲ್ಲಿ ನಡೆಯುವ ವ್ಯವಹಾರ ಕುರಿತು ಲೇಖನ

# ರಾಯಚೂರು ಕೃಷಿ ನಿಯಂತ್ರಿತ ಮಾರುಕಟ್ಟೆ ಒಂದು ಚಿತ್ರಣ

ನಟರಾಜ ಪಟ್ಟೇದ,

ಶೇಂಗಾ ಪ್ರಪಂಚದ ಅತಿ ಮುಖ್ಯ ಎಣ್ಣೆ ಕಾಳು ಬೆಳೆಯಾಗಿದ್ದು, ಎಣ್ಣೆ ಕಾಳುಗಳ ಉತ್ಪಾದನೆಯಲ್ಲಿ ಶೇಕಡಾ 45% ರಷ್ಟು ಕೊಡುಗೆ ನೀಡಿದೆ. ಭಾರತವು ಶೇಂಗಾ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದ್ದು ಆರ್ಥಿಕ ಪ್ರಾಮುಖ್ಯತೆ ಪಡೆದಿದೆ. ಪ್ರಸಕ್ತ ಮುಂಗಾರು ಮಳೆಯಲ್ಲಿ ಬೆಳೆಗಳು ಕೈಕೊಟ್ಟ ಬೆನ್ನೆಲ್ಲೇ ಹಿಂಗಾರು ಮಳೆ ಬಂದಿರುವುದರಿಂದ ರೈತರು ಬಿತ್ತನೆ ಮಾಡಲು ತಯಾರಿ ನಡೆಸುತ್ತಿದ್ದಾರೆ. ಈ ವರ್ಷ ಬಿತ್ತನೆ ಪ್ರಮಾಣ ತಗ್ಗಿದ್ದು ಪರಿಣಾಮ ಆವಕವು ಕಡಿಮೆ ಇದೆ. ಹಾಗಾಗಿ ಶೇಂಗಾಕ್ಕೆ ದಾಖಲೆ ಬೆಲೆ ಬರುವ ಸಂಭವವಿದೆ ಎಂಬುದು ಕೃವಿ.ವಿ.ತಜ್ಞರ ಅಭಿಪ್ರಾಯ. ಶೇಂಗಾದ ದರವು ಮಾರುಕಟ್ಟೆಯಲ್ಲಿ ಒಂದು ವಾರದಿಂದ ಭಾರೀ ಪ್ರಮಾಣದಲ್ಲಿ ಏರುತ್ತಿದೆ. ಭೀಕರ ಬರದಿಂದಾಗಿ ಈ ವರ್ಷ ಶೇಂಗಾವನ್ನು ಬೆಳೆಯಲಾಗದ ರೈತರು ಮಾರುಕಟ್ಟೆಯಲ್ಲಿ ಏರುತ್ತಿರುವ ಧಾರಣೆಯನ್ನು ಕಂಡು ಕೊರಗುತ್ತಿದ್ದಾರೆ. ಈ ದಿಸೆಯಲ್ಲಿ ಕಟಾವಿನ ಸಮಯದಲ್ಲಿ ಬರಬಹುದಾದ ಬೆಲೆಯನ್ನು ಬಿತ್ತನೆಯ ಸಮಯದಲ್ಲಿಯೇ ರೈತರಿಗೆ ಒದಗಿಸಲು ಕೃಷಿ ವಿಶ್ವವಿದ್ಯಾಲಯ ಧಾರವಾಡದ ಕೃಷಿ ವ್ಯವಹಾರ ನಿರ್ವಹಣೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ದೇಶೀಯ ಹಾಗೂ ರಫ್ತು ಮಾರುಕಟ್ಟೆ ಮಾಹಿತಿ ಕೇಂದ್ರ ಮುಂದಾಗಿದೆ.

ರಾಯಚೂರು ಕೃಷಿ ಹುಟ್ಟುವಳಿ ನಿಯಂತ್ರಿತ ಮಾರುಕಟ್ಟೆಯ ಕಳೆದ 20 ವರ್ಷಗಳ ಪ್ರತಿ ತಿಂಗಳು ಶೇಂಗಾ ಬೆಳೆಯ ಸರಾಸರಿ ಮಾದರಿ ಬೆಲೆಯ ವಿಶ್ಲೇಷಣೆಯ ಜೊತೆಗೆ ಅನೇಕ ವರ್ಷಗಳಿಂದ ರಾಯಚೂರು ಮಾರುಕಟ್ಟೆಯಲ್ಲಿ ಶೇಂಗಾ ಮಾರಾಟದಲ್ಲಿ ತೊಡಗಿರುವ ಅನುಭವಿ ವ್ಯಾಪಾರಸ್ಥರು, ಪ್ರಗತಿಪರ ರೈತರು ಹಾಗೂ ಶೇಂಗಾ ಮಾರಾಟ ವಿಷಯದ ಕುರಿತು ಸಂಶೋಧನೆ ನಡೆಸುತ್ತಿರುವ ವಿಜ್ಞಾನಿಗಳೊಂದಿಗೆ ಚರ್ಚಿಸಿ ವಿಶ್ಲೇಷಿತ ಮುನ್ನೋಟ ಬೆಲೆಯ ಕುರಿತು ಅವರ ಅಭಿಪ್ರಾಯವನ್ನು ಪರಿಗಣಿಸಿ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇಂಗಾ ಬೆಳೆಯ ಉತ್ಪನ್ನಗಳ ಸ್ಥಿತಿಗತಿಗಳನ್ನು ಅವಲೋಕಿಸಿ, ಶೇಂಗಾ ವ್ಯಾಪಾರದ ಕುರಿತು ಸರ್ಕಾರದ ನೀತಿ ನಿಯಮಾವಳಿಗಳನ್ನು ಗಣನೆಗೆ ತೆಗೆದುಕೊಂಡು ಮುನ್ನೋಟ ಬೆಲೆಯನ್ನು ಅಂತಿಮವಾಗಿ ಪರಿಷ್ಕರಿಸಲಾಗಿದೆ. ಈ ರೀತಿ ಪರಿಷ್ಕರಿಸಿದ ಬೆಲೆ ಮುನ್ನೋಟ ಮಾಹಿತಿ ಪ್ರಕಾರ ಬರುವ ಫೆಬ್ರುವರಿ ತಿಂಗಳಿನಲ್ಲಿ ರೂ. 4000–4300, ಮಾರ್ಚ ತಿಂಗಳಿನಲ್ಲಿ ರೂ. 4200–4500 ಮತ್ತು ಏಪ್ರೀಲ್ ತಿಂಗಳಿನಲ್ಲಿ ರೂ. 4500–4800 ಬೆಲೆ ಆಗುವದೆಂದು ನಿರೀಕ್ಷಿಸಲಾಗಿದೆ. ಈ ವರ್ಷ ಸರ್ಕಾರ ಘೋಷಿಸಿದ ಬೆಂಬಲ



ಬೆಲೆಯು ಶೇಂಗಾಕ್ಕೆ ಪ್ರತಿ ಕ್ವಿಂಟಲಿಗೆ 3700 ರೂಪಾಯಿ ಇದೆ. ಚೆನ್ನಾಗಿ ಬಲಿತ, ಒಣಗಿದ, ದುಂಡನೆಯ ಕಾಳುಗಳನ್ನು ಹೊಂದಿದ ಹಾಗೂ ಕಸಕಡ್ಡಿ ರಹಿತ ಶೇಂಗಾಕಾಯಿಗಳಿಗೆ ಉತ್ತಮ ಧಾರಣೆ ಸಿಗುವದರಿಂದ ಶೇಂಗಾವನ್ನು ಉತ್ಪಾದನೆ ಸಮಯದಲ್ಲಿ ಹಾಗೂ ಮಾರುಕಟ್ಟೆಗೆ ಸಿದ್ಧಪಡಿಸುವಾಗ ರೈತರು ಈ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಲು ಕೋರಲಾಗಿದೆ.

ಬೆಳಗಾವಿ ಮಾರುಕಟ್ಟೆಯಲ್ಲಿ ಕಟಾವಿನ ವೇಳೆ ಉಳ್ಳಾಗಡ್ಡೆಗೆ ಕ್ವಿಂಟಲಿಗೆ 800–1000ರೂ. ದರ ನಿರೀಕ್ಷೆ

ಈರುಳ್ಳಿಯು ಭಾರತದ ಒಂದು ಬಹು ಮುಖ್ಯ ವಾಣಿಜ್ಯ ಬೆಳೆಯಾಗಿದ್ದು, ಇದನ್ನು ವಿಶೇಷ ರೀತಿಯಲ್ಲಿ ದಿನದ ಅಡುಗೆಯಲ್ಲಿ ಬಳಸಲಾಗುತ್ತದೆ. ಬೆಲೆಯ ಅತಿರೇಕ ವ್ಯತ್ಯಾಸದಿಂದಾಗಿ ರೈತರು ಬಿತ್ತನೆಯ ಹಾಗೂ ಮಾರುಕಟ್ಟೆಯ ವಿಷಯದಲ್ಲಿ ಅಡ್ಡಿ ಆತಂಕಗಳನ್ನು ಎದುರಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ರೈತರು ನಿಶ್ಚಿಂತತೆಯಿಂದ ಬಿತ್ತನೆಯ ನಿರ್ಧಾರ ಕೈಗೊಳ್ಳಲೆಂದೇ ಕೃಷಿ ವಿಶ್ವವಿದ್ಯಾಲಯ ಧಾರವಾಡದ ಕೃಷಿ ವ್ಯವಹಾರ ನಿರ್ವಹಣೆ ವಿಭಾಗದಲ್ಲಿ ಸ್ಥಾಪಿತವಾದ ಆಂತರಿಕ ಹಾಗೂ ರಫ್ತು ಮಾರುಕಟ್ಟೆ ಮಾಹಿತಿ ಕೇಂದ್ರವು ಕಟಾವಿನ ಸಮಯವಾದ ಫೆಬ್ರುವರಿ–ಏಪ್ರೀಲ್ ತಿಂಗಳಿನಲ್ಲಿ ಬೆಳಗಾವಿ ನಿಯಂತ್ರಿತ ಮಾರುಕಟ್ಟೆಯಲ್ಲಿ ಇರಲಿರುವ ಈರುಳ್ಳಿ ಬೆಲೆಯನ್ನು ಅಂದಾಜಿಸಿದೆ. ಈ ರೀತಿ ಅಂದಾಜಿಸಲಾದ ಬೆಲೆ ಪಡೆಯಲು, ಬೆಳಗಾವಿ ಕೃಷಿ ಹುಟ್ಟುವಳಿ ನಿಯಂತ್ರಿತ ಮಾರುಕಟ್ಟೆಯಿಂದ ಈರುಳ್ಳಿಯ ಕಳೆದ ಇಪ್ಪತ್ತು ವರ್ಷಗಳ ಪ್ರತಿ ತಿಂಗಳಿನ ಮಾದರಿ ಬೆಲೆಯನ್ನು ಸಂಗ್ರಹಿಸಿ ವಿವಿಧ ಕಾಲಸರಣಿ ವಿಶ್ಲೇಷಣಾ ವಿಧಾನಗಳನ್ನು ಅನುಸರಿಸಿ 2013ರ ಫೆಬ್ರುವರಿ–ಏಪ್ರೀಲ್ ಸುಮಾರಿಗೆ ಈ ಮಾರುಕಟ್ಟೆಯಲ್ಲಿ ಇರಲಿರುವ ಮುನ್ನೋಟ ಬೆಲೆಯನ್ನು ಈಗಲೇ ಅಂದಾಜಿಸಲಾಗಿದೆ. ಅಲ್ಲದೇ ಈ ಮುನ್ನೋಟ ಬೆಲೆಯನ್ನು ಅನೇಕ ವರ್ಷಗಳಿಂದ ಬೆಳಗಾವಿ ನಿಯಂತ್ರಿತ ಮಾರುಕಟ್ಟೆಯಲ್ಲಿ ಈರುಳ್ಳಿ ವ್ಯಾಪಾರದಲ್ಲಿ ನಿರತರಾದ ಅನುಭವಿ ವ್ಯಾಪಾರಸ್ಥರು, ಈ ಭಾಗದ ಪ್ರಗತಿಪರ ರೈತರು, ಬೆಲೆ ಪರಿಣಿತರು, ಈರುಳ್ಳಿಯ ಮಾರಾಟದ ಕುರಿತು ಅಧ್ಯಯನ ನಡೆಸುತ್ತಿರುವ ಸಂಶೋಧಕರು ಮೊದಲಾದ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ, ಇತರ ಮಾರುಕಟ್ಟೆಗಳಲ್ಲಿ ಈರುಳ್ಳಿಯ ಬೆಲೆಯ ಸ್ಥಿತಿಗತಿ, ಈರುಳ್ಳಿ ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರದ ಕಾಯ್ದೆ ಕಾನೂನುಗಳು ಇವೇ ಮೊದಲಾದ ಅಂಶಗಳೊಂದಿಗೆ ತುಲನೆ ಮಾಡಿ ಅಂತಿಮವಾಗಿ ಪರಿಷ್ಕರಿಸಿ ಇಲ್ಲಿ ಪ್ರಕಟಿಸಲಾಗಿದೆ.



ಪ್ರಸ್ತುತ (ಅಕ್ಟೋಬರ,2012 ) ಈರುಳ್ಳಿ ಬೆಲೆಯು ಪ್ರತಿ ಕ್ವಿಂಟಲ್‌ಗೆ ರೂ.700 ರೂಪಾಯಿ ಇರುತ್ತದೆ. ಬೆಲೆ ಮುನ್ನೋಟ ಪ್ರಕ್ರಿಯೆ ಮುಖಾಂತರ ಹಿಂಗಾರು ಬಿತ್ತನೆಗೆ ಯೋಚಿಸುತ್ತಿರುವ ರೈತರ ದುಗುಡವನ್ನು ಹೋಗಲಾಡಿಸಲು ಈ ಆಂತರಿಕ ಹಾಗೂ ರಫ್ತು ಮಾರಾಟ ಮಾಹಿತಿ ಕೇಂದ್ರ ಶ್ರಮಿಸುತ್ತಿದೆ ಮತ್ತು ಈ ಕೇಂದ್ರದ ಅಭಿಪ್ರಾಯದ ಪ್ರಕಾರ 2013 ರ ಫೆಬ್ರುವರಿ ತಿಂಗಳಿನಲ್ಲಿ ಈರುಳ್ಳಿಗೆ ಕ್ವಿಂಟಲ್ ಒಂದಕ್ಕೆ ಸರಿಸುಮಾರು ರೂ.800–1000, ಮಾರ್ಚ ಮತ್ತು ಏಪ್ರೀಲ್ ತಿಂಗಳಿನಲ್ಲಿ ರೂ.700–900 ದರ ಬರುವ ನಿರೀಕ್ಷೆ ಇದೆ. ದೊಡ್ಡನೆಯ, ದುಂಡನೆಯ, ಕಲ್ಮಶರಹಿತ ಮತ್ತು ಚೆನ್ನಾಗಿ ಒಣಗಿದ ಈರುಳ್ಳಿ ಗಡ್ಡೆಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುವುದರಿಂದ ರೈತರು ಈರುಳ್ಳಿಯನ್ನು ಉತ್ಪಾದಿಸುವಾಗ, ಕಟಾವು ಮಾಡುವಾಗ ಹಾಗೂ ಮಾರುಕಟ್ಟೆಗೆ ಸಿದ್ಧ ಮಾಡುವಾಗ ಈ ಗುಣಮಟ್ಟಗಳ ಕಡೆಗೆ ವಿಶೇಷ ಗಮನ ನೀಡಿ ವಿವಿಧ ಗುಣಮಟ್ಟಗಳ ಈರುಳ್ಳಿ ಗಡ್ಡೆಗಳನ್ನು ವರ್ಗೀಕರಿಸಿ ಮಾರುಕಟ್ಟೆಗೆ ತರಲು ಕೋರಲಾಗಿದೆ.

### ಈ ವರ್ಷ ಕಟಾವಿನ ವೇಳೆ ಸಿಂಧನೂರ ಮಾರುಕಟ್ಟೆಯಲ್ಲಿ ಭತ್ತಕ್ಕೆ ಉತ್ತಮ ಬೆಲೆ ನಿರೀಕ್ಷೆ

ರಾಯಚೂರು ಜಿಲ್ಲೆಯ ಸಿಂಧನೂರು ಭಾಗದಲ್ಲಿ ಹಿಂಗಾರು ಹಂಗಾಮಿನಲ್ಲಿ ಭತ್ತ ಬಿತ್ತನೆಗೆ ರೈತರು ಸಕಲ ಸಿದ್ಧತೆ ನಡೆಸಿದ್ದಾರೆ. ಕಟಾವಿನ ವೇಳೆ ಮಾರುಕಟ್ಟೆಯಲ್ಲಿ ಭತ್ತದ ಬೆಲೆ ಏನಾಗುವದೋ ಎಂಬ ಆತಂಕ ರೈತರಲ್ಲಿದೆ. ಇಂತಹ ಸಂದಿಗ್ಧದಲ್ಲಿರುವ ರೈತರಿಗೆ ಕಟಾವಿನ ಸಮಯದ ಮುನ್ನೋಟ ಬೆಲೆಯನ್ನು ಬಿತ್ತುವ ಸಮಯದಲ್ಲಿಯೇ ನೀಡಿ ಅವರ ಬಿತ್ತನೆ ನಿರ್ಧಾರವನ್ನು ಬಲಗೊಳಿಸುವಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡದ ಕೃಷಿ ವ್ಯವಹಾರ ನಿರ್ವಹಣೆ ವಿಭಾಗದಲ್ಲಿ ಸ್ಥಾಪಿತವಾದ ದೇಶೀಯ ಹಾಗೂ ರಫ್ತು ಮಾರುಕಟ್ಟೆ ಮಾಹಿತಿ ಕೇಂದ್ರ ಕಾರ್ಯಪ್ರವೃತ್ತವಾಗಿದೆ.

ಭತ್ತಕ್ಕೆ ಉತ್ತರ ಕರ್ನಾಟಕದಲ್ಲಿ ಪ್ರಮುಖ ಮಾರುಕಟ್ಟೆಗಳಲ್ಲೊಂದಾದ ಸಿಂಧನೂರ ನಿಯಂತ್ರಿತ ಮಾರುಕಟ್ಟೆಯಿಂದ ಕಳೆದ 20 ವರ್ಷಗಳ ತಿಂಗಳುವಾರು ಮಾದರಿ ಬೆಲೆ ಮಾಹಿತಿಯನ್ನು ಸಂಗ್ರಹಿಸಿ ವಿವಿಧ ವಿಶ್ಲೇಷಣಾ ವಿಧಾನಗಳ ಮೂಲಕ ಪರಿಶೀಲಿಸಿ 2013ರ ಹಿಂಗಾರು ಹಂಗಾಮಿನಲ್ಲಿ ಬಿತ್ತಿದ ಭತ್ತದ ಕಟಾವಿನ ವೇಳೆಯ, ಅಂದರೆ ಫೆಬ್ರುವರಿ– ಏಪ್ರೀಲ್ ತಿಂಗಳಿನ ಮುನ್ನೋಟ ಬೆಲೆಯನ್ನು ಸಿಂಧನೂರ ಕೃಷಿ ಹುಟ್ಟುವಳಿ ನಿಯಂತ್ರಿತ ಮಾರುಕಟ್ಟೆಗೆ



ಅಂದಾಜಿಸಲಾಗಿದೆ. ಅಲ್ಲದೇ ಸಿಂಧನೂರ ಮಾರುಕಟ್ಟೆಯ ಪ್ರಮುಖ ವ್ಯಾಪಾರಸ್ಥರು, ಆ ಭಾಗದ ಪ್ರಗತಿಪರ ರೈತರು, ಭತ್ತ ಸಂಸ್ಕರಣಾಗಾರರು ಹಾಗೂ ಭತ್ತ ಮಾರಾಟ ವಿಷಯದ ಕುರಿತು ಸಂಶೋಧನೆ ನಡೆಸುತ್ತಿರುವ ಮಾರಾಟ ಪರಿಣಿತ ವಿಜ್ಞಾನಿಗಳು ಮೊದಲಾದ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಮುನ್ನೋಟ ಬೆಲೆಯ ಕುರಿತು ಚರ್ಚಿಸಿ, ರಾಜ್ಯದ ಹಾಗೂ ರಾಷ್ಟ್ರದ ಭತ್ತದ ಇತರ ಮಾರುಕಟ್ಟೆಗಳಲ್ಲಿನ ಬೆಲೆಯ ಸ್ಥಿತಿಗತಿ, ಭತ್ತ ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರದ ನೀತಿ ನಿಯಮಗಳು ಹಾಗೂ ಸರ್ಕಾರ ಈ ವರ್ಷ ಭತ್ತಕ್ಕೆ ಘೋಷಿಸಿದ ಬೆಂಬಲ ಬೆಲೆ ಮೊದಲಾದ ಅಂಶಗಳನ್ನು ಕೂಲಂಕುಷವಾಗಿ ಪರಿಗಣಿಸಿ ಮುನ್ನೋಟ ಬೆಲೆಯನ್ನು ಅಂತಿಮವಾಗಿ ಪರಿಷ್ಕರಿಸಲಾಗಿದೆ.

ಸಿಂಧನೂರ ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆಯಲ್ಲಿ ಭತ್ತದ ಕಳೆದ 20 ವರ್ಷಗಳ ತಿಂಗಳುವಾರು ಬೆಲೆ ಮಾಹಿತಿ ವಿಶ್ಲೇಷಣೆ ಹಾಗೂ ಈ ಮೇಲೆ ವಿವರಿಸಲಾದ ಎಲ್ಲ ಮೂಲಗಳಿಂದ ಚರ್ಚಿಸಿ ಪರಿಷ್ಕರಿಸಿದ ಮುನ್ನೋಟ ಬೆಲೆ ಮಾಹಿತಿ ಪ್ರಕಾರ ಬರುವ ಫೆಬ್ರುವರಿ ತಿಂಗಳಿನಲ್ಲಿ ರೂ. 2200–2400, ಮಾರ್ಚ ತಿಂಗಳಿನಲ್ಲಿ ರೂ. 2400–2800 ಮತ್ತು ಏಪ್ರೀಲ್ ತಿಂಗಳಿನಲ್ಲಿ ರೂ. 2200–2500 ಧಾರಣೆ ಬರುವ ನಿರೀಕ್ಷೆ ಇದೆ. ಈ ವರ್ಷ ಸರ್ಕಾರ ಘೋಷಿಸಿದ ಭತ್ತದ ಬೆಂಬಲ ಬೆಲೆ ರೂ. 1250–1280 ಪ್ರತಿ ಕ್ವಿಂಟಲಿಗೆ ಇರುತ್ತದೆ. ಚೆನ್ನಾಗಿ ಒಣಗಿಸಿದ, ಕಲ್ಮಶರಹಿತ, ಜೊಳ್ಳು ರಹಿತ ಭತ್ತಕ್ಕೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಸಿಗುವದರಿಂದ ಉತ್ಪಾದನೆ, ಕಟಾವು ಹಾಗೂ ಭತ್ತವನ್ನು ಮಾರುಕಟ್ಟೆಗೆ ತಯಾರು ಮಾಡುವ ಸಮಯದಲ್ಲಿ ರೈತರು ಈ ಅಂಶಗಳ ಕಡೆಗೆ ವಿಶೇಷ ಗಮನ ನೀಡಲು ವಿನಂತಿಸಲಾಗಿದೆ.

### ಈ ವರ್ಷ ಹಿಂಗಾರಿ ಗೋವಿನಜೋಳಕ್ಕೆ ಕಟಾವಿನ ವೇಳೆ ಕ್ವಿಂಟಲಗೆ ರೂ.1400 ನಿರೀಕ್ಷೆ

ಗೋವಿನ ಜೋಳದ ವ್ಯಾಪಾರವು ಪ್ರಮುಖವಾಗಿ ತಮಿಳುನಾಡು ಹಾಗೂ ಆಂಧ್ರಪ್ರದೇಶದಲ್ಲಿ ಕೇಂದ್ರೀಕೃತವಾಗಿರುವ ಕೋಳಿಸಾಕಣೆ ಉದ್ಯಮದ ಮೇಲೆ ಅವಲಂಬಿಸಿದೆ. ಹಾಗಾಗಿ ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ಪ್ರಮುಖ ಗೋವಿನಜೋಳ ಬೆಳೆಯುವ ಕ್ಷೇತ್ರಗಳಲ್ಲಿ ಈ ಬೆಳೆಯ ಉತ್ಪಾದನೆ ಲಾಭದಾಯಕವಾಗಿದೆ. ಆದರೆ ಕಟಾವಿನ ವೇಳೆಯ ಅನಿಶ್ಚಿತ ಬೆಲೆಯ ಕಾರಣ ಈ ವರ್ಷ ಹಿಂಗಾರು ಬಿತ್ತನೆಯಲ್ಲಿ ಗೋವಿನಜೋಳ ಬಿತ್ತುವ ಕುರಿತು ರೈತರು ನಿರ್ಧಾರ ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಕಟಾವಿನ ಸಮಯದ ಮಾರುಕಟ್ಟೆ ಬೆಲೆಯನ್ನು ಬೆಲೆ ಮುನ್ನೋಟ ಪ್ರಕ್ರಿಯೆ ಮುಖಾಂತರ ಕಂಡುಹಿಡಿದು ರೈತರಿಗೆ ಬಿತ್ತನೆಗೆ ಮೊದಲೇ ತಿಳಿಸಿದಲ್ಲಿ, ರೈತರು ಬಿತ್ತನೆ ಕುರಿತು ನಿರ್ಧಾರ ಹೊಂದಲು ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ವ್ಯವಹಾರ ನಿರ್ವಹಣಾ ವಿಭಾಗದಲ್ಲಿ ರಾಷ್ಟ್ರೀಯ ಕೃಷಿ ಅನ್ವೇಷಣೆ ಯೋಜನೆಯಡಿಯಲ್ಲಿ ಸ್ಥಾಪಿತವಾದ ದೇಶೀಯ ಹಾಗೂ ರಫ್ತು ಮಾರಾಟ ಮಾಹಿತಿ ಕೇಂದ್ರ ಕಾರ್ಯಪ್ರವೃತ್ತವಾಗಿದೆ.

ಈ ಬೆಲೆಯನ್ನು ಪರಾಮರ್ಶಿಸಿ ಪಡೆಯಲು, ಗೋವಿನ ಜೋಳದ ಪ್ರಮುಖ ಮಾರುಕಟ್ಟೆಗಳಲ್ಲೊಂದಾದ ಹಾವೇರಿ ಜಿಲ್ಲೆಯ ರಾಣೇಬೆನ್ನೂರು ನಿಯಂತ್ರಿತ ಮಾರುಕಟ್ಟೆಯಿಂದ ಕಳೆದ 20 ವರ್ಷಗಳ ತಿಂಗಳುವಾರು ಮಾದರಿ ಬೆಲೆ ಮಾಹಿತಿ ಸಂಗ್ರಹಿಸಿ, ವಿಶ್ಲೇಷಣೆ ಮಾಡಿ 2013 ರ ಹಿಂಗಾರು ಕೊಯ್ಲಿನ ವೇಳೆ ಅಂದರೆ ಫೆಬ್ರುವರಿ–ಏಪ್ರೀಲ್ ತಿಂಗಳುಗಳ ಮುನ್ನೋಟ ಬೆಲೆಯನ್ನು ಅಂದಾಜಿಸಲಾಗಿದೆ. ಈ ಮಾಹಿತಿಯನ್ನು ರಾಣೇಬೆನ್ನೂರು ನಿಯಂತ್ರಿತ ಮಾರುಕಟ್ಟೆಯಲ್ಲಿ ಅನೇಕ ವರ್ಷಗಳಿಂದ ಗೋವಿನ ಜೋಳದ ಮಾರಾಟ ವ್ಯವಹಾರದಲ್ಲಿ ಪರಿಣಿತರಾದ ವ್ಯಾಪಾರಸ್ಥರು, ಮುಂದುವರಿದ ರೈತರು, ವಿಜ್ಞಾನಿಗಳು ಮುಂತಾದವರೊಂದಿಗೆ ಚರ್ಚಿಸಿ ಕೊನೆಯಲ್ಲಿ ಮುನ್ನೋಟ ಬೆಲೆಯ ಅಂತಿಮ ಪರಿಷ್ಕರಣೆ ಮಾಡಲಾಗಿದೆ.

ರಾಣೇಬೆನ್ನೂರ ನಿಯಂತ್ರಿತ ಮಾರುಕಟ್ಟೆಯ ಕಳೆದ 20 ವರ್ಷಗಳ ಪ್ರತಿ ತಿಂಗಳ ಗೋವಿನ ಜೋಳದ ಸರಾಸರಿ ಬೆಲೆಯ ವಿಶ್ಲೇಷಣೆ ಹಾಗೂ ಮಾರುಕಟ್ಟೆಯಲ್ಲಿ ವ್ಯಾಪಾರಸ್ಥರು, ಸಂಬಂಧಿಸಿದ ಪ್ರಗತಿಪರ ರೈತರು, ಈ ವಿಷಯದಲ್ಲಿ ಅಧ್ಯಯನ ಮಾಡಿದ ವಿಜ್ಞಾನಿಗಳು ಹಾಗೂ ರಾಷ್ಟ್ರೀಯ ಸರಕು ವಿನಿಮಯ ಕೇಂದ್ರ (ಓಅಆಇಫ) ದ ಭವಿಷ್ಯತ್ ಬೆಲೆ ಸೂಚ್ಯಂಕದ ಆಧಾರದ ಮೇಲೆ ಅಧ್ಯಯನ ನಡೆಸಿದ ಪ್ರಕಾರ ಬರುವ ಫೆಬ್ರುವರಿ ತಿಂಗಳಿನಲ್ಲಿ ರೂ. 1250–1350, ಮಾರ್ಚ ತಿಂಗಳಿನಲ್ಲಿ ರೂ. 1300–1400 ಮತ್ತು ಏಪ್ರೀಲ್ ತಿಂಗಳಿನಲ್ಲಿ ರೂ. 1350–1400, ಬೆಲೆ ಇರುವ ಸಾಧ್ಯತೆಗಳಿವೆ. ಈ ವರ್ಷ ಸರ್ಕಾರ ಘೋಷಿಸಿದ ಬೆಂಬಲ ಬೆಲೆಯು ಗೋವಿನಜೋಳಕ್ಕೆ ಪ್ರತಿ ಕ್ವಿಂಟಲಿಗೆ 1175 ರೂಪಾಯಿ ಇದೆ. ಚೆನ್ನಾಗಿ ಬಲಿತ, ದುಂಡನೆಯ, ಕಲ್ಮಶ ರಹಿತ, ಒಣಗಿದ ಕಾಳುಗಳಿಗೆ ಉತ್ತಮ ಬೆಲೆ ಬರಲಿದೆ. ಹಾಗಾಗಿ ರೈತರು ಗೋವಿನಜೋಳದ ಉತ್ಪಾದನೆ ಸಮಯದಲ್ಲಿ ಈ ಅಂಶಗಳ ಕಡೆಗೆ ಗಮನ ನೀಡಿದಾದಲ್ಲಿ ಉತ್ತಮ ವರಮಾನ ಗಳಿಸಬಹುದೆಂದು ಸಲಹೆ ನೀಡಲಾಗಿದೆ.

### ಹಿಂಗಾರಿ ಹಂಗಾಮಿನಲ್ಲಿ ಬೆಳೆದ ಜೋಳಕ್ಕೆ ಕಟಾವಿ ಸಮಯದಲ್ಲಿ ರೂ. 1200–1300 ನಿರೀಕ್ಷೆ

ಕೃಷಿ ವಿಶ್ವವಿದ್ಯಾಲಯ ಧಾರವಾಡದ ಕೃಷಿ ವ್ಯವಹಾರ ನಿರ್ವಹಣೆ ವಿಭಾಗದಲ್ಲಿ ರಾಷ್ಟ್ರೀಯ ಕೃಷಿ ಅವಿಷ್ಕಾರ ಯೋಜನೆಯಡಿಯಲ್ಲಿ ಸ್ಥಾಪಿತವಾದ ಆಂತರಿಕ ಹಾಗೂ ರಫ್ತು ಮಾರುಕಟ್ಟೆ ಮಾಹಿತಿ ಕೇಂದ್ರವು ಅಂದಾಜಿಸಿದ ಬೆಲೆ ಮುನ್ನೋಟ ಪ್ರಕ್ರಿಯೆಯ ರೀತ್ಯಾ ಈ ವರ್ಷ ಹಿಂಗಾರಿ ಹಂಗಾಮಿನಲ್ಲಿ ಬಿತ್ತುವ ಜೋಳಕ್ಕೆ ಬಳ್ಳಾರಿ ನಿಯಂತ್ರಿತ ಮಾರುಕಟ್ಟೆಯಲ್ಲಿ ಕ್ವಿಂಟಲ ಒಂದಕ್ಕೆ ಕಟಾವಿನ ಸಮಯವಾದ ಫೆಬ್ರುವರಿ ತಿಂಗಳಿನಲ್ಲಿ ರೂ. 1160–1280, ಮಾರ್ಚ ತಿಂಗಳಿನಲ್ಲಿ ರೂ. 1150–1250 ಮತ್ತು ಏಪ್ರೀಲ್ ತಿಂಗಳಿನಲ್ಲಿ ರೂ. 1200–1250, ದರ ಬರುವ ನಿರೀಕ್ಷೆ ಇದೆ.

ಬಳ್ಳಾರಿ ಕೃಷಿ ಹುಟ್ಟುವಳಿ ನಿಯಂತ್ರಿತ ಮಾರುಕಟ್ಟೆಯಿಂದ ಕಳೆದ ಇಪ್ಪತ್ತು ವರ್ಷಗಳಲ್ಲಿ ಜೋಳದ ಪ್ರತಿ ತಿಂಗಳಿನ ಮಾದರಿ ಬೆಲೆಯನ್ನು ಸಂಗ್ರಹಿಸಿ ವಿವಿಧ ಕಾಲಸರಣಿ ವಿಶ್ಲೇಷಣಾ ವಿಧಾನಗಳನ್ನು ಅನುಸರಿಸಿ 2012ರ ಹಿಂಗಾರಿನಲ್ಲಿ ಬಿತ್ತಿದ ಜೋಳಕ್ಕೆ ಕೊಯ್ಲಿನ ವೇಳೆ ಅಂದರೆ 2013 ಫೆಬ್ರುವರಿ–ಏಪ್ರೀಲ್, ಸುಮಾರಿಗೆ ಈ ಮಾರುಕಟ್ಟೆಯಲ್ಲಿ ಇರಲಿರುವ

ಮುನ್ನೋಟ ಬೆಲೆಯನ್ನು ಈಗಲೇ ಅಂದಾಜಿಸಲಾಗಿದೆ. ಅಲ್ಲದೇ ಈ ಮುನ್ನೋಟ ಬೆಲೆಯನ್ನು ಅನೇಕ ವರ್ಷಗಳಿಂದ ಬಳ್ಳಾರಿ ನಿಯಂತ್ರಿತ ಮಾರುಕಟ್ಟೆಯಲ್ಲಿ ಜೋಳದ ವ್ಯಾಪಾರದಲ್ಲಿ ನಿರತರಾದ ಅನುಭವಿ ವ್ಯಾಪಾರಸ್ಥರು, ಈ ಭಾಗದ ಪ್ರಗತಿಪರ ರೈತರು, ಬೆಲೆ ಪರಿಣಿತರು, ಜೋಳದ ಮಾರಾಟ ಕುರಿತು ಅಧ್ಯಯನ ನಡೆಸುತ್ತಿರುವ ಸಂಶೋಧಕರು ಮೊದಲಾದ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ, ಇತರ ಮಾರುಕಟ್ಟೆಗಳಲ್ಲಿ ಜೋಳದ ಬೆಲೆಯ ಸ್ಥಿತಿಗತಿ, ಜೋಳ ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರದ ಕಾಯ್ದೆ ಕಾನೂನುಗಳು ಇವೇ ಮೊದಲಾದ ಅಂಶಗಳೊಂದಿಗೆ ತುಲನೆ ಮಾಡಿ ಅಂತಿಮವಾಗಿ ಮುನ್ನೋಟ ಬೆಲೆಯನ್ನು ಪರಿಷ್ಕರಿಸಿ ಇಲ್ಲಿ ಪ್ರಕಟಿಸಲಾಗಿದೆ.

ಉತ್ತರ ಕರ್ನಾಟಕದಲ್ಲಿ ಬಿಳಿ ಜೋಳವು ಒಂದು ಮುಖ್ಯವಾದ ಆಹಾರ ಬೆಳೆಯಾಗಿದ್ದು, ಬಳ್ಳಾರಿ ಭಾಗದ ರೈತರು ಈಗಾಗಲೇ ಭೂಮಿ ಹದಗೊಳಿಸಿ ಬಿತ್ತನೆಗೆ ಕಾಯುತ್ತಿದ್ದಾರೆ. ಆದರೂ ಸಧ್ಯಕ್ಕೆ (ಅಕ್ಟೋಬರ,2012) ರೂ. 1259 ಪ್ರತಿ ಕ್ವಿಂಟಲ ದರ ಇರುವ ಜೋಳಕ್ಕೆ ಹಿಂಗಾರು ಕಟಾವಿನ ವೇಳೆಯ ಬೆಲೆಯ ಅತಂತ್ರತೆಯಿಂದ ರೈತರಿನ್ನೂ ಬಿತ್ತನೆ ಕುರಿತು ಸರಿಯಾದ ನಿರ್ಧಾರಕ್ಕೆ ಬರಲಾಗದೇ ಅಯೋಮಯ ಸ್ಥಿತಿಯಲ್ಲಿದ್ದಾರೆ. ಹಾಗಾಗಿ ಬೆಲೆ ಮುನ್ನೋಟ ಪ್ರಕ್ರಿಯೆ ಮುಖಾಂತರ ಬಿತ್ತನೆಗೆ ಯೋಚಿಸುತ್ತಿರುವ ರೈತರ ದುಗುಡವನ್ನು ಹೋಗಲಾಡಿಸಲು ಈ ಆಂತರಿಕ ಹಾಗೂ ರಫ್ತು ಮಾರುಕಟ್ಟೆ ಮಾಹಿತಿ ಕೇಂದ್ರ ಶ್ರಮಿಸುತ್ತಿದೆ. ಈ ವರ್ಷ ಸರ್ಕಾರ ಘೋಷಿಸಿದ ಬೆಂಬಲ ಬೆಲೆಯು ಜೋಳಕ್ಕೆ ಪ್ರತಿ ಕ್ವಿಂಟಲಿಗೆ 1500 ರೂಪಾಯಿ ಇದೆ. ಚೆನ್ನಾಗಿ ತುಂಬಿದ, ದುಂಡನೆಯ, ಕಲ್ಮಶರಹಿತ, ಒಣಗಿದ ಕಾಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುವದರಿಂದ ರೈತರು ಜೋಳವನ್ನು ಉತ್ಪಾದಿಸುವಾಗ, ಕಟಾವು ಮಾಡುವಾಗ ಹಾಗೂ ಮಾರುಕಟ್ಟೆಗೆ ಸಿದ್ಧ ಮಾಡುವಾಗ ಈ ಗುಣಮಟ್ಟಗಳ ಕಡೆಗೆ ವಿಶೇಷ ಗಮನ ನೀಡಲು ಸೂಚಿಸಲಾಗಿದೆ.

**ಅಡಿಕೆಯ ಮುನ್ನೋಟ ಬೆಲೆ-ಕೃಷಿ ವಿಜ್ಞಾನಿಗಳ ಸಮೀಕ್ಷೆ**

ಅಡಿಕೆಯು ಒಂದು ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಇತ್ತೀಚಿನ ದಿನಗಳಲ್ಲಿ ಅದರಿಂದ ತಯಾರಾಗುವ ಅನೇಕ ಉತ್ಪನ್ನಗಳಿಂದಾಗಿ ಮಾರುಕಟ್ಟೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಆದರೆ ಮಾರುಕಟ್ಟೆಯಲ್ಲಿ ದಲ್ಲಾಳಿಗಳು ಬೆಲೆಯ ಜೊತೆಗೆ ಆಡುವ ಜೂಜಾಟದಿಂದಾಗಿ ಅನೇಕ ರೈತರು ಅಡಿಕೆ ಮಾರಾಟದಲ್ಲಿ ಕೈಸುಟ್ಟುಕೊಂಡಿದ್ದಾರೆ. ಹಾಗಾಗಿ ಅಂತಹ ರೈತರಿಗೆ ಸಹಾಯ ಮಾಡಿ ಸಿಕ್ಕ ಬೆಲೆಗೆ ಅವರು ತಾವು ಬೆಳೆದ ಅಡಿಕೆಯನ್ನು ಮಾರಾಟ ಮಾಡುವದನ್ನು ತಪ್ಪಿಸಿ, ಉತ್ತಮ ಬೆಲೆ ಗಳಿಸಲು ಸರಿಯಾದ ಸಮಯಕ್ಕೆ ಮಾರಾಟ ಮಾಡುವಂತೆ ರೈತರಿಗೆ ಸಲಹೆ ನೀಡಲು ಕೃಷಿ ವಿಶ್ವವಿದ್ಯಾಲಯ ಧಾರವಾಡದ ಕೃಷಿ ವ್ಯವಹಾರ ನಿರ್ವಹಣೆ ವಿಭಾಗದಲ್ಲಿ ಸ್ಥಾಪಿತವಾದ ದೇಶೀಯ ಹಾಗೂ ರಫ್ತು ಮಾರುಕಟ್ಟೆ ಮಾಹಿತಿ ಕೇಂದ್ರ ನಿರತವಾಗಿದೆ. ಅಡಿಕೆಯ ಮುನ್ನೋಟಬೆಲೆಯನ್ನು ಅಂದಾಜಿಸಲು ಪ್ರಮುಖ ಅಡಿಕೆ ಮಾರುಕಟ್ಟೆಗಳಾದ ಕುಮಟಾ, ಹಾಗೂ ಶಿರಸಿ ಕೃಷಿ ಹುಟ್ಟುವಳಿ ನಿಯಂತ್ರಿತ ಮಾರುಕಟ್ಟೆಗಳಿಂದ ಕಳೆದ 20 ವರ್ಷಗಳ ತಿಂಗಳುವಾರು ಮಾದರಿ ಬೆಲೆ ಮಾಹಿತಿಯನ್ನು ಸಂಗ್ರಹಿಸಿ ವಿವಿಧ ಕಾಲಸರಣಿ ವಿಶ್ಲೇಷಣಾ ವಿಧಾನಗಳ ಮುಖಾಂತರ ವಿಶ್ಲೇಷಿಸಿ ಮುಂದಿನ ಕೆಲತಿಂಗಳುಗಳಲ್ಲಿ ಈ ಮಾರುಕಟ್ಟೆಗಳಲ್ಲಿ ಅಡಿಕೆಗೆ ಇರಲಿರುವ ಬೆಲೆಯನ್ನು ಅಂದಾಜಿಸಲಾಗಿದೆ. ಇದಲ್ಲದೇ, ಅನೇಕ ವರ್ಷಗಳಿಂದ ಆಯಾ ಮಾರುಕಟ್ಟೆಯಲ್ಲಿ ಅಡಿಕೆ ಮಾರಾಟದಲ್ಲಿ ತೊಡಗಿರುವ ಅನುಭವಿ ವ್ಯಾಪಾರಸ್ಥರು, ಆ ಭಾಗದ ಪ್ರಗತಿಪರ ರೈತರು ಹಾಗೂ ಅಡಿಕೆ ಮಾರಾಟ ಕುರಿತು ಸಂಶೋಧನೆ ನಡೆಸುತ್ತಿರುವ ವಿಜ್ಞಾನಿಗಳೊಂದಿಗೆ ಚರ್ಚಿಸಿ, ವಿಶ್ಲೇಷಿತ ಮುನ್ನೋಟ ಬೆಲೆಯ ಕುರಿತು ಅವರ ಅಭಿಪ್ರಾಯವನ್ನು ಪರಿಗಣಿಸಿ, ಅಂತರಾಷ್ಟ್ರಿಯ ಮಾರುಕಟ್ಟೆಯಲ್ಲಿ ಅಡಿಕೆ ಉತ್ಪನ್ನಗಳ ಸ್ಥಿತಿಗತಿಗಳನ್ನು ಅವಲೋಕಿಸಿ, ಅಡಿಕೆ ಮಾರಾಟದ ಕುರಿತಂತೆ ಸರ್ಕಾರದ ನೀತಿ ನಿಯಮಾವಳಿಗಳನ್ನು ಗಣನೆಗೆ ತೆಗೆದುಕೊಂಡು ಮುನ್ನೋಟ ಬೆಲೆಯನ್ನು ಅಂತಿಮವಾಗಿ ಪರಿಷ್ಕರಿಸಲಾಗಿದೆ. ಅಡಿಕೆಯನ್ನು ಸಂಸ್ಕರಿಸಿ ಮಾರುಕಟ್ಟೆಗೆ ತಯಾರುಮಾಡುವಾಗ ಬೇರೆ ಬೇರೆ ರೀತಿಯಲ್ಲಿ, ಅಂದರೆ ಬೆಟ್ಟೆ, ಗೋಟು, ಸರಕು, ಕೋಕಾ ಮುಂತಾಗಿ ವರ್ಗೀಕರಿಸಿ ಮಾರುವುದರಿಂದ ಹಾಗೂ ಪ್ರತಿ ಮಾರುಕಟ್ಟೆಗೆ ಈ ವರ್ಗಿಕರಣದ ವಿಧಾನ ಬೇರೆಯಾಗಿರುವದರಿಂದ ಪ್ರತಿ ಮಾರುಕಟ್ಟೆಗೂ ವಿವಿಧ ವರ್ಗದ ಅಡಿಕೆಯ ಬೆಲೆಯನ್ನು ಇಲ್ಲಿ ಅಂದಾಜಿಸಲಾಗಿದೆ. ಆಂತರಿಕ ಹಾಗೂ ರಫ್ತು ಮಾರುಕಟ್ಟೆ ಮಾಹಿತಿ ಕೇಂದ್ರ ಅಂದಾಜಿಸಿದ ಪ್ರಕಾರ ನವೆಂಬರ್ ಅವಧಿಯಲ್ಲಿ ಚಿಪ್ಪು ಅಡಿಕೆಯ ಖರೀದಿ ಬೆಲೆ ಕುಮಟಾ ಮಾರುಕಟ್ಟೆಯಲ್ಲಿ ರೂ.10200-10800, ಡಿಸೆಂಬರ್ ತಿಂಗಳಲ್ಲಿ ರೂ. 10500-11000 ಹಾಗೂ ಜನೇವರಿ ತಿಂಗಳಲ್ಲಿ ರೂ. 10400-10800 ಬರುವ ಸಾಧ್ಯತೆ ಇದೆ. ಫ್ಯಾಕ್ಟರಿ ಅಡಿಕೆಗೆ ನವೆಂಬರ್ ತಿಂಗಳಲ್ಲಿ ರೂ. 6500-6800, ಡಿಸೆಂಬರ್ ತಿಂಗಳಲ್ಲಿ ರೂ. 6700-7000 ಹಾಗೂ ಜನೇವರಿ ತಿಂಗಳಲ್ಲಿ ರೂ. 6800-7200 ಬೆಲೆ ಬರುವ ನಿರೀಕ್ಷೆ ಇದೆ. ಕೋಕಾಕ್ಕೆ ನವೆಂಬರ್ ಅವಧಿಯಲ್ಲಿ ಖರೀದಿ ಬೆಲೆ ಕುಮಟಾ ಮಾರುಕಟ್ಟೆಯಲ್ಲಿ ರೂ. 9100-9500, ಡಿಸೆಂಬರ್ ತಿಂಗಳಲ್ಲಿ ರೂ. 9000-9300 ಹಾಗೂ ಜನೇವರಿ ತಿಂಗಳಲ್ಲಿ ರೂ. 8400-8800 ಬೆಲೆ ಇರಬಹುದೆಂದು ಅಂದಾಜಿಸಲಾಗಿದೆ. ಶಿರಶಿ ನಿಯಂತ್ರಿತ ಮಾರುಕಟ್ಟೆಯಲ್ಲಿ ನವೆಂಬರ್ ಅವಧಿಯಲ್ಲಿ ಬಿಳೆಗೋಟು ಅಡಿಕೆಯ ಖರೀದಿ ಬೆಲೆ ರೂ.11600-12100, ಡಿಸೆಂಬರ್ ತಿಂಗಳಲ್ಲಿ ರೂ. 11700-12200 ಹಾಗೂ ಜನೇವರಿ ತಿಂಗಳಲ್ಲಿ ರೂ. 11600-12000 ಬರುವ ಸಾಧ್ಯತೆ ಇದೆ. ಮತ್ತು ರಾಶಿ ಅಡಿಕೆಗೆ ನವೆಂಬರ್ ತಿಂಗಳಲ್ಲಿ ರೂ. 8400-8900, ಡಿಸೆಂಬರ್ ತಿಂಗಳಲ್ಲಿ ರೂ. 8700-9100 ಹಾಗೂ ಜನೇವರಿ ತಿಂಗಳಲ್ಲಿ ರೂ. 8900-9400 ಬೆಲೆ ಬರುವ ನಿರೀಕ್ಷೆ ಇದೆ. ಕೋಕಾಕ್ಕೆ ನವೆಂಬರ್ ಅವಧಿಯಲ್ಲಿ ಖರೀದಿ ಬೆಲೆ ರೂ.8900-9300, ಡಿಸೆಂಬರ್ ತಿಂಗಳಲ್ಲಿ ರೂ. 9000-9600 ಹಾಗೂ ಜನೇವರಿ ತಿಂಗಳಲ್ಲಿ ರೂ. 9200-9800 ಬೆಲೆ ಇರಬಹುದೆಂದು ಅಂದಾಜಿಸಲಾಗಿದೆ. ಚೆನ್ನಾಗಿ ಒಣಗಿಸಿದ, ವರ್ಗೀಕರಿಸಿದ ಹಾಗೂ ಉತ್ತಮವಾಗಿ ಸಂಸ್ಕರಿಸಿದ ಅಡಿಕೆಗೆ ಹೆಚ್ಚಿನ ಬೆಲೆ ಬರುವುದರಿಂದ ಮಾರಾಟಕ್ಕೆ ತಯಾರಿ ಮಾಡುವಾಗ ಈ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಲು ಸೂಚಿಸಲಾಗಿದೆ.

# ಗ್ರಾಮಗಳ ತ್ಯಾಜ್ಯ ವಸ್ತುಗಳಿಂದ ಬರುವ ರೋಗಗಳನ್ನು ತಡೆಗಟ್ಟುವ ಬಗೆಗಳು





**ವಾಮನರಾವ್**
ಶ್ರೀದತ್ತ ನಿಲಯ, 11ನೇ ಅಡ್ಡ ರಸ್ತೆ,
ಜಯನಗರ ಪೂರ್ವ,
ತುಮಕೂರು – 572102.
ಮೊ.ನಂ. 9035756330

ಗ್ರಾಮೀಣ ಪ್ರದೇಶಗಳಲ್ಲಿಯ ಜನರ ಜೀವನದ ಮಟ್ಟವನ್ನು ಸುಧಾರಿಸುವುದು ಕರ್ನಾಟಕ ಸರಕಾರದ "ಸ್ವಚ್ಛ ಗ್ರಾಮ ಯೋಜನೆ"ಯ ಉದ್ದೇಶವಾಗಿದೆ.

ಇಂದಿಗೂ ಹಲವಾರು ಗ್ರಾಮಗಳು ಅನೈರ್ಮಲ್ಯಗಳಿಂದ ಕೂಡಿವೆ. ಅಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಘನ ವಸ್ತುಗಳು ಮತ್ತು ತ್ಯಾಜ್ಯ ದ್ರವ ವಸ್ತುಗಳು ಸರಿಯಾದ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡದ ಪರಿಣಾಮ ಹಲವು ಸಾಂಕ್ರಾಮಿಕ ರೋಗಗಳು ಹರಡಲು ಅವಕಾಶ ನೀಡಿದಂತಾಗಿದೆ. ಇತ್ತೀಚಿನ ದಿನಗಳಲ್ಲಿ ಗ್ರಾಮಗಳಲ್ಲಿ ತ್ಯಾಜ್ಯ ಘನ ವಸ್ತುಗಳು ನಿರಂತರವಾಗಿ ಹೆಚ್ಚುತ್ತಿದ್ದು, ಅದನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡದಿದ್ದಲ್ಲಿ ಮುಂದಿನ ದಿನಗಳಲ್ಲಿ ಸಾರ್ವಜನಿಕರ ಆರೋಗ್ಯದ ಮೇಲೆ, ಪರಿಸರದ ಮೇಲೆ ದುಷ್ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ. ಆದುದರಿಂದ ತ್ಯಾಜ್ಯ ವಸ್ತುಗಳನ್ನು ಸಕಾಲಕ್ಕೆ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡುವ ಅವಶ್ಯಕತೆ ತುಂಬಾ ಇದ್ದು, ಅದನ್ನು ವೈಜ್ಞಾನಿಕ ರೀತಿಯಲ್ಲಿ ನಿರ್ವಹಣೆ ಮಾಡಬೇಕು, ಗ್ರಾಮೀಣ ಜನರ ಆರೋಗ್ಯದ ಮಟ್ಟ ಸುಧಾರಣೆಯಾಗಬೇಕಾದರೆ ಅಲ್ಲಿನ ಪರಿಸರ ನೈರ್ಮಲ್ಯ ಕಾಪಾಡಲೇಬೇಕು. ಅದಕ್ಕಾಗಿ ಯೋಜನೆಗಳು ರೂಪಿಸಿ ಕಾರ್ಯಗತಗೊಳಿಸಬೇಕು.

ಗ್ರಾಮೀಣ ಪ್ರದೇಶಗಳಲ್ಲಿ ಘನ ತ್ಯಾಜ್ಯ ವಸ್ತುಗಳು ಉತ್ಪತ್ತಿ ಹೇಗಾಗುತ್ತದೆ?. ಗ್ರಾಮೀಣ ಭಾರತದಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ವಸ್ತುಗಳ ವಿಲೇವಾರಿಯಾಗದಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ತೀವ್ರ ಸ್ವರೂಪದ ಕೆಟ್ಟ ಪರಿಣಾಮ ಬೀರುತ್ತದೆ. ಈ ತ್ಯಾಜ್ಯ ವಸ್ತುಗಳು (ಘನ ಮತ್ತು ದ್ರವ) ರಾಸಾಯನಿಕ ಮತ್ತು ಜೈವಿಕ ವಸ್ತುಗಳಿಂದ ಕೂಡಿದ್ದು, ಅದು ನಾಶ ಮಾಡುವಂತಹ ರೂಪದಲ್ಲಿವೆ. ಗ್ರಾಮದಲ್ಲಿ ಉತ್ಪತ್ತಿಯಾಗುವ ಒಟ್ಟು ಆಹಾರ ಪದಾರ್ಥಗಳ ಶೇ. 10 ರಷ್ಟು ಘನ ತ್ಯಾಜ್ಯ ವಸ್ತುಗಳಾಗಿ ಪರಿವರ್ತನೆಯಾಗುತ್ತದೆ. ಇತ್ತೀಚೆಗೆ ಗ್ರಾಮಗಳಲ್ಲಿ ಉತ್ಪತ್ತಿಯಾಗುತ್ತಿರುವ ಘನ ತ್ಯಾಜ್ಯ, ನಿಷ್ಪ್ರಯೋಜಕ ವಸ್ತುಗಳಲ್ಲಿ ಕೊಳೆತುಹೋಗದ ವಸ್ತುಗಳಾದ ಗಾಜಿನ ಬಾಟಲ್‌ಗಳು, ತಗಡಿನ ಡಬ್ಬಿ, ಪ್ಲಾಸ್ಟಿಕ್ ವಸ್ತುಗಳು ಮತ್ತು ಪಾಲಿಥೀನ್ ವಸ್ತುಗಳು ಹೆಚ್ಚಾಗುತ್ತಿರುವುದು ಇದರ ನಿರ್ವಹಣೆ ದೊಡ್ಡ ಸಮಸ್ಯೆಯಾಗಿದೆ.

ಗ್ರಾಮೀಣ ಜನರ ಮೇಲಾಗುವ ದುಷ್ಪರಿಣಾಮಗಳು ಹತ್ತು ಹಲವು ಇಲ್ಲಿ ಹಲವು ರೋಗಗಳು ಪ್ರಸ್ತಾಪ ಮಾಡಲಾಗಿದೆ. ಅನೈರ್ಮಲ್ಯಗಳಿಂದ ಬರುವ ರೋಗಗಳಲ್ಲಿ 1) ನೀರಿನಿಂದ ಹರಡುವ ರೋಗಗಳು, ಉದಾಹರಣೆ; ಕಾಲರಾ, ಪೋಲಿಯೋ, ಕಾಮಾಲೆ, ಮಲೇರಿಯಾ, ಡೆಂಗ್ಯೂ ಜ್ವರ, ಆನೆಕಾಲು ರೋಗ, 2) ಮಲಮೂತ್ರದಿಂದ ಹರಡುವ ರೋಗಗಳು, ಉದಾಹರಣೆಗೆ; ಪೋಲಿಯೋ, ಅತಿಸಾರ, 3) ನೀರು ಆಧಾರಿತ ರೋಗಗಳು; ಉದಾಹರಣೆಗೆ; ನಾರುಹುಣ್ಣು ರೋಗ, 4) ನೀರಿನ ಕೊರತೆಯಿಂದ ಬರುವ ರೋಗಗಳು; ಉದಾಹರಣೆ: ಕಜ್ಜಿ, ತುರಿಕೆ, ಚರ್ಮದ ರೋಗಗಳು ಮುಂತಾದವುಗಳು.

ತ್ಯಾಜ್ಯ ವಸ್ತುಗಳಿಂದ ಬರುವ ರೋಗಗಳನ್ನು ತಡೆಗಟ್ಟುವ ಬಗೆಗಳು:

1) ಇಂಗು ಬಚ್ಚಲು (Soak Pit) ನಿರ್ಮಾಣ: ಕೊಳೆ ನೀರನ್ನು ನಾಲ್ಕು ಅಡಿ ಅಗಲದ ಗುಂಡಿಯನ್ನು ತೋಡಿ, ಗುಂಡಿಯ ತಳಭಾಗದ ಒಂದು ಅಡಿಯಷ್ಟು ದಪ್ಪ ಕಲ್ಲುಗಳನ್ನು ನಂತರ ಒಂದು ಅಡಿಯಷ್ಟು ಭಾಗಕ್ಕೆ ಸ್ವಲ್ಪ ಸಣ್ಣ ಕಲ್ಲುಗಳನ್ನು ನಂತರ ಒಂದು ಅಡಿಯಷ್ಟು ಜೆಲ್ಲಿ ಕಲ್ಲುಗಳನ್ನು ತುಂಬಿ ಗುಂಡಿಯ ಮೇಲ್ಭಾಗಕ್ಕೆ ಒಂದು ಅಡಿಯಷ್ಟು ಮರಳನ್ನು ತುಂಬಬೇಕು. ತಳಭಾಗದಲ್ಲಿ 3 ಅಥವಾ 4 ರಂಧ್ರಗಳನ್ನು ಮಾಡಬೇಕು, ಈ ಗುಂಡಿಗಳಲ್ಲಿ ಘನ ಪದಾರ್ಥಗಳು ಉಳಿದು ದ್ರವ

ಪದಾರ್ಥಗಲು ರಂದ್ರಗಳ ಮೂಲಕ ನೀರು ಬಸಿದು ತಳಭಾಗಕ್ಕೆ ಹೋಗುತ್ತದೆ. ಚರಂಡಿ ಇಲ್ಲದ ಗ್ರಾಮಗಳಲ್ಲಿ ಮನೆಗೊಂದು ಇಂತಹ ಗುಂಡಿಗಳು ಇರುವ ಬಚ್ಚಲನ್ನು ಕಟ್ಟಿಸಿಕೊಳ್ಳುವುದರಿಂದ ಉಳಿದ ಕೊಳೆ ನೀರು ಆರೋಗ್ಯಕರವಾಗಿ ವಿಲೇವಾರಿಯಾಗಿ ನೀರು ನಿಲ್ಲುವಿಕೆಯಿಂದ ಬರುವ ರೋಗಗಳನ್ನು ತಡೆಗಟ್ಟಬಹುದು. ಇಂತಹ ಪ್ರಯತ್ನವನ್ನು ನಾನಿದ್ದ ಪ್ರಾಥಮಿಕ ಆರೋಗ್ಯ ಕೇಂದ್ರ, ಶಿವಗಂಗೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಾಡಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿಯ ಜನರ ಜೀವನದ ಮಟ್ಟವನ್ನು ಸುಧಾರಿಸುವುದು ಕರ್ನಾಟಕ ಸರಕಾರದ "ಸ್ವಚ್ಛ ಗ್ರಾಮ ಯೋಜನೆ"ಯ ಉದ್ದೇಶವಾಗಿದೆ. ಈ ಯೋಜನೆಯಡಿಯಲ್ಲಿ "ಕೊಳೆ ನೀರು ಮತ್ತು ಮಳೆ ನೀರು ಚರಂಡಿಗಳು", ಮನೆಯ ಹತ್ತಿರವಿರುವ ತಿಪ್ಪೆಗುಂಡಿಗಳನ್ನು ತೆಗೆದುಹಾಕುವ ಅಂಶಗಳನ್ನೊಳೊಂಡಿದೆ. ಸರಿಯಾದ ವಿನ್ಯಾಸದ ಕೊಳೆ ನೀರು ಮತ್ತು ಮಳೆ ನೀರಿನ ಚರಂಡಿಗಳ ನಿರ್ಮಾಣವು ಸಮಗ್ರ ಗ್ರಾಮೀಣ ನೈರ್ಮಲೀಕರಣವನ್ನು ಉತ್ತಮಪಡಿಸುವ ಕಾರ್ಯಕ್ರಮದ ಒಂದು ಮುಖ್ಯವಾದ ಅಂಗವಾಗಿದೆ. ಸುಮಾರು 500 ಮನೆಗಳಿರುವ ಗ್ರಾಮದಲ್ಲಿ ಅಂದಾಜು ಮೂರು ಕಿಲೋ ಮೀಟರ್ ಉದ್ದದ ಕೊಳೆ ನೀರು / ಮಳೆ ನೀರಿನ ಚರಂಡಿಗಳು ನಿರ್ಮಿಸುವುದಾಗಿದೆ.

ಗ್ರಾಮೀಣ ಜನರಿಗೆ ಅನೈರ್ಮಲ್ಯಕರ ತಿಪ್ಪೆಗುಂಡಿಗಳಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಸಾಕಷ್ಟು ತಿಳುವಳಿಕೆ ಇಲ್ಲದಿರುವುದರಿಂದ ಮತ್ತು ವ್ಯವಸಾಯದ ಜಮೀನುಗಳಿಗೆ ಮೇಲಿಂದ ಮೇಲೆ ಗೊಬ್ಬರವನ್ನು ಸಾಗಿಸಲು ಅನಾನೂಕೂಲವಾಗಬಾರದೆನ್ನುವ ದೃಷ್ಟಿಯಿಂದ ತಮ್ಮ ಮನೆಗೆ ಹತ್ತಿರದಲ್ಲಿರುವ ಖಾಲಿ ಸ್ಥಳಗಳಲ್ಲಿ ಎಲ್ಲೆಂದರಲ್ಲಿ ಸಗಣಿ ಮತ್ತು ಕಸದ ರಾಶಿಗಳನ್ನು ಹಾಕಿಕೊಂಡಿರುತ್ತಾರೆ. ಈ ರೀತಿಯ ವ್ಯವಸ್ಥೆಯಿಂದ ಹಲವು ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಆದ್ದರಿಂದ ಈ ಹೊಸ ಯೋಜನೆಯಡಿ ಗ್ರಾಮೀಣ ಕುಟುಂಬಗಳು ಸಗಣಿ ಮತ್ತು ನಿರುಪಯುಕ್ತ ಕಸಕಡ್ಡಿಗಳಿಂದ ಅತ್ಯುಪಯುಕ್ತವಾದ ಮಿಶ್ರ ಗೊಬ್ಬರವನ್ನು ತಯಾರಿಸಲು ಅನುಕೂಲವಾಗುವಂತೆ ಹಾಗೂ ಅವೈಜ್ಞಾನಿಕ ಮತ್ತು ಅನೈರ್ಮಲ್ಯ ತಿಪ್ಪೆಗುಂಡಿಗಳನ್ನು ವಾಸ ಸ್ಥಾನಗಳ ಸಮೀಪದಿಂದ ತೆಗೆದುಹಾಕಿ ಗ್ರಾಮವನ್ನು ಸ್ವಚ್ಛಗೊಳಿಸಲು ಪ್ರಸ್ತಾಪಿಸಿದೆ. ಈ ಯೋಜನೆಯಡಿ (ವಾಸ ಸ್ಥಳಗಳಿಗೆ) ಹೊರವಲಯದಲ್ಲಿ ಸಾಮೂಹಿಕ ಗೊಬ್ಬರದ ಅಂಶಗಳನ್ನು ಗುರುತಿಸಿ ಪ್ರತಿಯೊಂದು ಕುಟುಂಬಕ್ಕೆ ಪ್ರತ್ಯೇಕವಾಗಿ ಮಿಶ್ರ ಗೊಬ್ಬರದ ಗುಂಡಿಗಳನ್ನು ಅವಶ್ಯಕತೆಗನುಸಾರವಾಗಿ ಹಂಚಿಕೆ ಮಾಡಲಾಗುತ್ತದೆ. ಗ್ರಾಮ ಪಂಚಾಯಿತಿಯು ಪ್ರತಿ ಕುಟುಂಬವು ತನ್ನ ತಿಪ್ಪೆಗುಂಡಿಯನ್ನು ಸಾಮೂಹಿಕ ಮಿಶ್ರ ಗೊಬ್ಬರದ ಅಂಗಳದಲ್ಲಿ ತನಗೆ ಹಂಚಿಕೆ ಆಗಿರುವ ಸ್ಥಳಕ್ಕೆ ಸ್ಥಳಾಂತರಿಸುವಂತೆ ನೋಡಿಕೊಳ್ಳುತ್ತದೆ.

2) ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳು: ಹಲವಾರು ಗ್ರಾಮಗಳಲ್ಲಿ ಸರಿಯಾದ ಚರಂಡಿ ವ್ಯವಸ್ಥೆಯಿಲ್ಲ ಮತ್ತು ನೈರ್ಮಲ್ಯವಿಲ್ಲ, ಹೆಚ್ಚಿನ ರೋಗಗಳು ಅಶುದ್ಧ ನೀರಿನ ಮೂಲಕ ಮತ್ತು ನೈರ್ಮಲ್ಯದ ಕೊರತೆಯ ಕಾರಣಗಳಿಂದ ಹರಡುವುದರಿಂದ ಇದು ಕೂಡಾ ಒಂದು ದೊಡ್ಡ ಸವಾಲಾಗಿದೆ. ಇದನ್ನೆಲ್ಲಾ ಗಮನಿಸಿದ ಸರ್ಕಾರ ಪ್ರತಿ ಕಂದಾಯ ಗ್ರಾಮಗಳಲ್ಲಿ ಅಲ್ಲಿನ ಚುನಾಯಿತ ಗ್ರಾಮ ಪಂಚಾಯಿತಿ ಸದಸ್ಯನ ಅಧ್ಯಕ್ಷತೆಯಲ್ಲಿ "ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ"ಗಳನ್ನು ರಚಿಸಿ ಸಾರ್ವಜನಿಕ ಚರಂಡಿ, ಬಾವಿಗಳು, ಕುಡಿಯುವ ನೀರಿನ ಮೂಲಗಳನ್ನು ಸ್ವಚ್ಛಗೊಳಿಸುವುದು ಮತ್ತು ತ್ಯಾಜ್ಯ ವಸ್ತುಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವ ಜವಾಬ್ದಾರಿ ವಹಿಸಿದೆ. ಅದಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

## ಗ್ರಾಮೀಣ ಆಹಾರ ಪದಾರ್ಥಗಳಲ್ಲಿ ಮುಸುಕಿನ ಜೋಳದ ಬಳಕೆ:-

**ಸಾಮಾನ್ಯವಾಗಿ ಹಸಿ ಮುಸುಕಿನ ಜೋಳವನ್ನು ಬೇಯಿಸಿ ಅಥವ ಬೆಂಕಿಯಲ್ಲಿ ಸುಟ್ಟು ಬಳಸುವುಂಟು. ಒಣ ಮುಸುಕಿನ ಜೋಳದ ಹಿಟ್ಟಿನಲ್ಲಿ ರೊಟ್ಟಿ ಮತ್ತು ಮುದ್ದೆ ಮಾಡಿ ಬಳಸುತ್ತಾರೆ. ಆದರೆ. ಇದೇ ಹಸಿ ಮುಸುಕಿನ ಜೋಳದಲ್ಲಿ ರುಚಿಕರವಾದ ಆಹಾರ ಪದಾರ್ಥಗಳನ್ನು ತಯಾರಿಸಿ ಮಿತವ್ಯಯವನ್ನು ಸಾಧಿಸಬಹುದು.**

### ಮುಸುಕಿನ ಜೋಳದ ಒಬ್ಬಟ್ಟಿಗೆ ಬೇಕಾಗುವ ಸಾಮಗ್ರಿಗಳು:-

1. ಬಿಡಿಸಿದ ಹಸಿ ಮುಸುಕಿನ ಜೋಳ – 1 ಕಪ್
2. ಬೆಲ್ಲ – ಅರ್ಧ ಕಪ್
3. ಮೈದ ಹಿಟ್ಟು – 1 ಕಪ್
4. ಎಳ್ಳು, ಗಸಗಸೆ, ಕಾಯಿತುರಿ – ತಲಾ 1 ಟೀ ಚಮಚ
5. ಎಲಾಕ್ಕಿ – 2
6. ಎಣ್ಣೆ – ಅರ್ಧ ಕಪ್
7. ಅರಿಶಿನ ಚಿಟಕೆ.

### ಮುಸುಕಿನ ಜೋಳದ ಒಬ್ಬಟ್ಟು ಮಾಡುವ ವಿಧಾನ:–

1. ಮೈದ ಹಿಟ್ಟಿಗೆ ಅರಿಶಿನ ಸೇರಿಸಿ ಹದವಾಗಿ ಚಪಾತಿ ಹಿಟ್ಟಿನ ಹದಕ್ಕೆ ಕಳಸಿಡುವುದು. [ಕಣಕ ಮಾಡಿಕೊಳ್ಳುವುದು]
2. ಬಿಡಿಸಿರುವ ಹಸಿ ಮುಸುಕಿನ ಜೋಳವನ್ನು ಸ್ವಲ್ಪವೇ ನೀರು ಹಾಕಿ ಮೃದುವಾಗಿ ಬೇಯಿಸಿ ನೀರನ್ನು ತೆಗೆದು, ಬೆಲ್ಲವನ್ನು ಸೇರಿಸಿ ಬೇಯಿಸಿ ನಂತರ ಇದಕ್ಕೆ ಎಳ್ಳು. ಗಸಗಸೆ ಮತ್ತು ಕಾಯಿತುರಿ ಎಲಾಕ್ಕಿ ಸೇರಿಸಿ ರುಬ್ಬುವುದು.
3. ರುಬ್ಬಿದ ಹೂರಣವನ್ನು ಸಣ್ಣ ಉಂಡೆಗಳನ್ನು ಮಾಡಿಟ್ಟುಕೊಂಡು ಮೈದ ಹಿಟ್ಟಿನ ಕಣಕದಲ್ಲಿ ಸೇರಿಸಿ ಒಬ್ಬಟ್ಟನ್ನು ತಟ್ಟಿ, ಹೆಂಚಿನ ಮೇಲೆ ಎರಡು ಕಡೆ ಬೇಯಿಸಿ ಬಡಸುವುದು.

[ಸಾವಿತ್ರಿ]
ಸಹಾಯಕ ನಿರ್ದೇಶಕರು [ಸ್ವಉಕಾ] ಶಾಖೆ,
ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ರಾಜ್.

ಸುತ್ತೋಲೆ

ವಿ. ರಶ್ಮಿ ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಅ.ಸ.ಪ. ಸಂ.ಗ್ರಾಅಪ 223 ಗ್ರಾಪಂಅ 2012** **ದಿನಾಂಕ: 22–12–2012**

ಮಾನ್ಯರೆ,

ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರವು ಜನ ಸಂಖ್ಯೆಯ ಆಧಾರದ ಮೇಲೆ ವಾರ್ಷಿಕ ‘8.00 ಲಕ್ಷ ಹಾಗೂ ‘10.00 ಲಕ್ಷದಂತೆ ಶಾಸನಬದ್ಧ ಅನುದಾನವನ್ನು ಒದಗಿಸುತ್ತಿದ್ದು, ಈ ಅನುದಾನವನ್ನು ಸಿಂಡಿಕೇಟ್ ಬ್ಯಾಂಕ್, ಬಿಡಬ್ಲ್ಯೂಎಸ್ಎಸ್‌ಬಿ ಶಾಖೆ, ಬೆಂಗಳೂರು, ಇವರ ಮುಖಾಂತರ 4 ತ್ರೈಮಾಸಿಕ ಕಂತುಗಳಲ್ಲಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಖಾತೆಗೆ ಆನ್–ಲೈನ್ ಮುಖಾಂತರ ಬಿಡುಗಡೆ ಮಾಡಲಾಗುತ್ತಿದೆ. ಈ ಅನುದಾನದ ಪೈಕಿ ಶೇಕಡ 60 ರಷ್ಟು ಮೊತ್ತವನ್ನು ಗ್ರಾಮ ಪಂಚಾಯಿತಿಗಳ ಚಾಲ್ತಿ ತಿಂಗಳುಗಳ ವಿದುಚ್ಛಕ್ತಿ ಬಿಲ್ ಮೊತ್ತಕ್ಕಾಗಿ ಮತ್ತು ಶೇಕಡ 40 ರಷ್ಟು ಮೊತ್ತವನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನಕ್ಕಾಗಿ ಪಾವತಿಸಲು ಅನುದಾನ ಬಿಡುಗಡೆ ಆದೇಶಗಳಲ್ಲಿ ಸೂಚಿಸಲಾಗುತ್ತಿದೆ.

ಹಲವಾರು ಜಿಲ್ಲಾ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾದ ಶೇಕಡಾ 40ರಷ್ಟು ಅನುದಾನವನ್ನು ಬಿಡುಗಡೆ ಮಾಡುವಲ್ಲಿ 15 ದಿನಗಳಿಂದ 3–4 ತಿಂಗಳುಗಳವರೆಗೆ ವಿಳಂಬ ಮಾಡುತ್ತಿರುವುದು ಮತ್ತು ಈ ಅನುದಾನವನ್ನು ಚೆಕ್ ಅಥವಾ ಡಿ.ಡಿ. ಮುಖಾಂತರ ನೀಡುತ್ತಿರುವುದು ಹಾಗೂ ಕೆಲವು ಜಿಲ್ಲೆಗಳಲ್ಲಿ ಈ ಅನುದಾನದ ಚೆಕ್/ಡಿ.ಡಿ.ಗಳನ್ನು ತಾಲ್ಲೂಕು ಪಂಚಾಯಿತಿ ವಶಕ್ಕೆ ನೀಡಿ ನಂತರ ತಾಲ್ಲೂಕು ಪಂಚಾಯಿತಿಯಿಂದ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದರಿಂದ ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಸಕಾಲದಲ್ಲಿ ವೇತನ ಪಾವತಿ ಆಗದೆ ಹಲವಾರು ಗ್ರಾಮ ಪಂಚಾಯಿತಿಗಳಲ್ಲಿ ಈ ಸಿಬ್ಬಂದಿಗಳು ಈ ಸಂಬಂಧ ಪ್ರತಿಭಟನೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದಲ್ಲದೆ ಸರ್ಕಾರದಲ್ಲಿ ಹಲವಾರು ದೂರುಗಳು ಸಹ ಸ್ವೀಕೃತವಾಗುತ್ತಿವೆ. ಈ ವಿಷಯವನ್ನು ಸರ್ಕಾರವು ತುಂಬಾ ಗಂಭೀರವಾಗಿ ಪರಿಗಣಿಸಿದೆ.

ಆದುದರಿಂದ ಶಾಸನಬದ್ಧ ಅನುದಾನದ ಮೊತ್ತವು ಸಿಂಡಿಕೇಟ್ ಬ್ಯಾಂಕ್ ಮುಖಾಂತರ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಗೆ ಆನ್–ಲೈನ್ ಮುಖಾಂತರ ಜಮೆಯಾದ ದಿನಾಂಕದಿಂದ 5 (ಐದು) ದಿನಗಳೊಳಗೆ ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯಿತಿಯ ಖಾತೆಗೆ ಆನ್–ಲೈನ್ ಮುಖಾಂತರ ಜಮಾ ಆಗಿರಬೇಕು. ಯಾವುದೇ ಕಾರಣಕ್ಕೂ ಚೆಕ್ಕು ಅಥವಾ ಡಿ.ಡಿ. ನೀಡತಕ್ಕದ್ದಲ್ಲ. ಅನುದಾನ ಬಿಡುಗಡೆ ಆದೇಶ ಮತ್ತು ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಆನ್–ಲೈನ್ ಮುಖಾಂತರ “ವರ್ಗಾಯಿಸಿರುವ” ದಿನಾಂಕದ ಮಾಹಿತಿಯನ್ನು ಮತ್ತು ಸದರಿ ಗ್ರಾಮ ಪಂಚಾಯಿತಿ ಖಾತೆಯಲ್ಲಿ ಜಮಾ ಆಗಿರುವ ದಿನಾಂಕವನ್ನು ಜಿಲ್ಲಾ ಪಂಚಾಯಿತಿ ವೆಬ್ ಸೈಟ್‌ನಲ್ಲಿ ಅಪ್ ಲೋಡ್ ಮಾಡುವುದು. ಇದರಲ್ಲಿ ಯಾವುದೇ ಲೋಪವಾದಲ್ಲಿ ಹಾಗೂ ತಪ್ಪು ಮಾಹಿತಿ ನೀಡಿದಲ್ಲಿ ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನೇ ನೇರವಾಗಿ ಹೊಣೆಗಾರರನ್ನಾಗಿಸುವುದಲ್ಲದೆ ವಿಳಂಬದ ಅವಧಿಗೆ ಬಡ್ಡಿ ವಸೂಲಿ ಮಾಡಲು ಕ್ರಮ ವಹಿಸಲಾಗುವುದು. ಇದಲ್ಲದೆ ಅಂತಹ ಜಿಲ್ಲಾ ಪಂಚಾಯಿತಿಗಳಿಗೆ ಸರ್ಕಾರದಿಂದ ಒದಗಿಸಲಾಗುವ ಇತರೆ ಅನುದಾನಗಳ ಬಿಡುಗಡೆಯನ್ನು ತಡೆಹಿಡಿಯಲಾಗುವುದು.

ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಪ್ರತಿ ತಿಂಗಳ 5ನೇ ದಿನಾಂಕದೊಳಗೆ ವೇತನ ಪಾವತಿಸಲು ಕ್ರಮ ವಹಿಸಿ, ವೇತನ ಪಾವತಿಸಿದ ವಿವರಗಳನ್ನೊಳಗೊಂಡ ಮಾಹಿತಿಯನ್ನು ಪ್ರತಿ ತಿಂಗಳ 6ನೇ ದಿನಾಂಕದಂದು ಗ್ರಾಮ ಪಂಚಾಯಿತಿಗಳು ಪಂಚತಂತ್ರ ತಂತ್ರಾಂಶದಲ್ಲಿ ತಪ್ಪದೆ ಅಪ್ ಲೋಡ್ ಮಾಡಲು ಸೂಚಿಸಿದೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,

Rrashmi.

ಎಲ್ಲ ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳಿಗೆ

ಸುತ್ತೋಲೆ

# ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:16–5–2012.

ಸಂಖ್ಯೆ:ಗ್ರಾಅಪ: 96 :ಆರ್‌ಆರ್‌ಸಿ:2012.

# ಮಾರ್ಗಸೂಚಿ

ವಿಷಯ: ಪ್ರಸ್ತುತ 2012–13ನೇ ಸಾಲಿನಲ್ಲಿ ಜಿಲ್ಲಾ ವಲಯ ಕಾರ್ಯಕ್ರಮದಡಿ ತಾಲ್ಲೂಕು ಪಂಚಾಯತಿ ಲೆಕ್ಕಶೀರ್ಷಿಕೆ–2515– ಖಆಕ ಅಡಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ಹಿಂದುಳಿದ ತಾಲ್ಲೂಕುಗಳಲ್ಲಿ ಅಂಗನವಾಡಿ/ಪಂಚಾಯತ್ ಆಫೀಸ್ ಕಟ್ಟಡಗಳ, ಗೋಕಟ್ಟೆ, ಶೌಚಾಲಯ, ಕಿರು ಚರಂಡಿ, ರಸ್ತೆ, ನೀರಿನ ಕಿರು ಟ್ಯಾಂಕ್ ದುರಸ್ತಿ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ ಮಾರ್ಗಸೂಚಿ.

ಉಲ್ಲೇಖ: ಯೋಜನಾ ಇಲಾಖೆ ಅ.ಸ.ಪತ್ರ ಸಂಖ್ಯೆ:ಪಿಡಿ/12/ಎಸ್‌ಡಿಪಿ/2012
(ಗ್ರಾ.ಅ.ಪಂ.ರಾ), ದಿನಾಂಕ:9–4–2012.

1. ಪ್ರಸ್ತುತ 2012–13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ–2515–11–197–1–22 (ಯೋಜನೆ)(ಲಿಂಕ್‌ಹೆಡ್– 2515–00–102–0–65–133)ಅಡಿಯಲ್ಲಿ ಪ್ರಾದೇಶಿಕ ಅಸಮತೋಲನಾ ನಿವಾರಣೆಗಾಗಿ ಉನ್ನತ ಮಟ್ಟದ ಸಮಿತಿಯಿಂದ ಗುರುತಿಸಲ್ಪಟ್ಟ ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಅಭಿವೃದ್ಧಿ ಕಾರ್ಯಕ್ರಮ– ಇದಕ್ಕಾಗಿ ಜಿಲ್ಲಾವಾರು ರೂ.4444.00ಲಕ್ಷಗಳನ್ನು ತಾಲ್ಲೂಕು ಪಂಚಾಯತಿಗಳಿಗೆ ಒದಗಿಸಲಾಗಿದೆ. ಆಯವ್ಯಯ ಲಿಂಕ್ ಡಾಕ್ಯುಮೆಂಟ್‌ನಲ್ಲಿ ತಾಲ್ಲೂಕುಗಳಿಗೆ ಒದಗಿಸಿದ ಜಿಲ್ಲಾವಾರು ಅನುದಾನದ ವಿವರವನ್ನು ಅನುಬಂಧದಲ್ಲಿ ನೀಡಿದೆ.

2. ತಾಲ್ಲೂಕು ಪಂಚಾಯತಿ ಕಾರ್ಯಕ್ರಮದ ಕಾಮಗಾರಿಗಳಿಗೆಂದು ಜಿಲ್ಲಾವಾರು ತಾಲ್ಲೂಕು ಪಂಚಾಯತಿಗಳಿಗೆ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನವನ್ನು ವಿಶೇಷ ಅಭಿವೃದ್ಧಿ ಯೋಜನೆಯಂತೆ ಕೆಳಕಂಡ ವರ್ಗದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತಾನುಸಾರ ವಿನಿಯೋಗಿಸಬೇಕಾಗಿರುತ್ತದೆ.

(ಅ) ಪ್ರಥಮ ಆದ್ಯತೆಯನ್ನು ತಾಲ್ಲೂಕು ಪಂಚಾಯತಿಯ ಆಫೀಸ್/ಅಂಗನವಾಡಿ ಕಟ್ಟಡ ನಿರ್ಮಾಣದ ಕಾಮಗಾರಿಗಳಿಗೆ ನೀಡುವುದು. ತಾಲ್ಲೂಕುವಾರು ಲಭ್ಯವಾಗುವ ಅನುದಾನದಲ್ಲಿ ಶೇ.60ರಷ್ಟು ಅನುದಾನವನ್ನು ಕಟ್ಟಡ ಕಾಮಗಾರಿಗಳಿಗೆ ಮೀಸಲಿರಿಸಬೇಕು.

(ಆ) ಎರಡನೇ ಆದ್ಯತೆಯನ್ನು ತಾಲ್ಲೂಕು ಪಂಚಾಯತಿಯ ಶೌಚಾಲಯ/ಚರಂಡಿ/ಮೋರಿ ನಿರ್ಮಾಣದ ಕಾಮಗಾರಿಗಳಿಗೆ ನೀಡುವುದು. ಇದಕ್ಕಾಗಿ ಶೇ. 15ರಷ್ಟು ಅನುದಾನವನ್ನು ವಿನಿಯೋಗಿಸುವುದು.

(ಇ) ಮೂರನೇ ಆದ್ಯತೆಯನ್ನು ಅವಶ್ಯವಿದ್ದ ಜಿಲ್ಲೆಗಳಲ್ಲಿನ ಹಿಂದುಳಿದ ತಾಲ್ಲೂಕುಗಳಲ್ಲಿ ಸಣ್ಣ ಟ್ಯಾಂಕ್ ದುರಸ್ತಿ ಕಾಮಗಾರಿಗಳಿಗೆ ನೀಡುವುದು.

(ಈ) ಮೇಲ್ಕಂಡ ಕಾಮಗಾರಿಗಳಿಗೆ ಆದ್ಯತೆ ನೀಡಿದ ನಂತರ ಅನುದಾನ ಲಭ್ಯವಿದ್ದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ನಾಲ್ಕನೇ ಆದ್ಯತೆಯನ್ನು ನೀಡುವುದು. ಸಾಧ್ಯವಾದಷ್ಟು ಮಟ್ಟಿಗೆ ರಸ್ತೆ ನಿರ್ಮಾಣ/ಅಭಿವೃದ್ಧಿಯ ಕಾಮಗಾರಿಗಳನ್ನು ಪ.ಜಾ/ಪ.ಪಂ. ಗಳ ಕಾಲೋನಿಗಳ ಜನವಸತಿಗೆ ಅನುಕೂಲವಾಗುವಂತೆ ಇರಬೇಕು. ಈ ರಸ್ತೆಗಳು/ ಮಾರುಕಟ್ಟೆ/ಶಾಲೆ/ಕಾಲೇಜು/ ಆಸ್ಪತ್ರೆ/ಇತರೆ ಪ್ರಮುಖ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವುದಾಗಿರಬೇಕು. ಪ್ರಸ್ತಾವಿತ ರಸ್ತೆ ನಿರ್ಮಾಣ/ದುರಸ್ತಿ/ನಿರ್ವಹಣೆಯ ಕಾಮಗಾರಿಗಳ ಅಂದಾಜು ಮೊತ್ತವು ರೂ.1.00ಲಕ್ಷ ಮೀರಬಾರದು. ದೀರ್ಘಕಾಲ ಬಾಳಿಕೆಯಾಗುವಂತೆ ಸಿ.ಸಿ. ರಸ್ತೆ ಮಾಡಬೇಕು.

3. ಕಾಮಗಾರಿಗಳ ಆಯ್ಕೆ:

(1) ಈ ಕಾರ್ಯಕ್ರಮದಡಿ ಜಿಲ್ಲಾವಾರು ತಾಲ್ಲೂಕುಗಳಿಗೆ ನಿಗದಿಪಡಿಸಿದ ಅನುದಾನದ ಮಿತಿಯೊಳಗೆ ಕಾಮಗಾರಿಗಳನ್ನು ಆದ್ಯತಾನುಸಾರ ಆಯ್ಕೆ ಮಾಡಿಕೊಳ್ಳುವುದು.

(2) ಆಯ್ಕೆ ಮಾಡುವ ಎಲ್ಲಾ ಕಾಮಗಾರಿಗಳಿಗೆ ವಿವರವಾದ ಯೋಜನಾ ವರದಿಗಳನ್ನು ಮತ್ತು ಅಂದಾಜು ಪಟ್ಟಿಗಳನ್ನು ತಯಾರಿಸಬೇಕು.

(3) ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಮಾರ್ಗಸೂಚಿ ಹೊರಡಿಸಿದ 15 ದಿನಗಳೊಳಗಾಗಿ ತಾಲ್ಲೂಕು ಪಂಚಾಯತಿಗಳು ತಯಾರಿಸಿ ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ಪಡೆದುಕೊಳ್ಳತಕ್ಕದ್ದು. ರೂ.1.00ಕೋಟಿವರೆಗಿನ ತಾಲ್ಲೂಕು ಪಂಚಾಯತಿ ಕ್ರಿಯಾ ಯೋಜನೆಗೆ ಅಇಔ, ಜಿ.ಪಂ ರವರು ಅನುಮೋದನೆ ನೀಡುವುದು.

(4) ಅಇಔ ರವರಿಂದ ಅನುಮೋದಿತವಾದ ಕ್ರಿಯಾ ಯೋಜನೆ ಪ್ರತಿಯನ್ನು ತಪ್ಪದೆ ಯೋಜನಾ ಇಲಾಖೆಯ ಡಾ: ಡಿ.ಎಂ. ನಂಜುಂಡಪ್ಪ ಉಸ್ತುವಾರಿ ಕೋಶ ಇವರಿಗೆ ಸಲ್ಲಿಸತಕ್ಕದ್ದು.

4. ಕಾಮಗಾರಿಗಳ ಅನುಷ್ಠಾನ :

ಆಯವ್ಯಯ ಕಾರ್ಯಕ್ರಮದ ಅನುಷ್ಠಾನವನ್ನು ಜಿಲ್ಲಾ/ತಾಲ್ಲೂಕು ಪಂಚಾಯ್ತಿಯ ಉಸ್ತುವಾರಿಯಡಿಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ನೆರವೇರಿಸತಕ್ಕದ್ದು.

5. ಈ ಮಾರ್ಗಸೂಚಿಯಂತೆ ಸದರಿ ಕಾರ್ಯಕ್ರಮದ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮಗಳನ್ವಯ ಕೈಗೊಳ್ಳುವುದು ಕಡ್ಡಾಯವಾಗಿದೆ.

ವಿಶೇಷ ಅಭಿವೃದ್ಧಿಯ ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯತಿಗಳು ಕೈಗೊಳ್ಳುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಓಖಇಉಂ ಕಾರ್ಯಕ್ರಮ ಸಂಯೋಜಸಿಕೊಂಡು (Convergent with NREGA Programme) ಅನುಷ್ಠಾನಗೊಳಿಸುವುದು.

6. ಅನುದಾನ ಬಿಡುಗಡೆ :

1. ಪ್ರಸ್ತುತ 2012–13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ–2515ರಡಿ ಲಿಂಕ್ ಡಾಕ್ಯುಮೆಂಟ್‌ನಲ್ಲಿ ಒದಗಿಸಿರುವ ಅನುದಾನವನ್ನು ಆರ್ಥಿಕ ಇಲಾಖೆಯಿಂದ ನೇರವಾಗಿ ಬಿಡುಗಡೆಗೊಳಿಸಲಾಗುವುದು.

2. ಬಿಡುಗಡೆಯಾದ ಅನುದಾನಕ್ಕೆ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ಹಣ ಬಳಕೆ ಪ್ರಮಾಣಗಳನ್ನು ಪತ್ರ ಹಾಗೂ ಆಡಿಟ್ ವರದಿಯನ್ನು ಯೋಜನಾ ಇಲಾಖೆಗೆ ಮತ್ತು ಸರ್ಕಾರಕ್ಕೆ ಸಲ್ಲಿಸುವುದು.

7. ಜಿಲ್ಲಾ ಪಂಚಾಯತಿ ಉಸ್ತುವಾರಿ :

1. ತಾಲ್ಲೂಕು ಪಂಚಾಯತಿ ಕಾರ್ಯಕ್ರಮದ ಕಾಮಗಾರಿಗಳನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳು ಉಸ್ತುವಾರಿ ಕಾರ್ಯ ಮಾಡತಕ್ಕದ್ದು. ಈ ಕಾರ್ಯಕ್ರಮದಡಿ ಗುತ್ತಿಗೆದಾರರಿಗೆ ಮುಂಗಡ ಹಣವನ್ನು ಪಾವತಿ ಮಾಡತಕ್ಕದ್ದಲ್ಲ.

2. ಕಾಮಗಾರಿ ಆರಂಭವಾಗುವುದಕ್ಕೆ ಮುಂಚೆ, ಆರಂಭವಾದ ನಂತರ ಹಾಗೂ ಪೂರ್ಣಗೊಂಡ ನಂತರ ಮೂರು ಹಂತಗಳಲ್ಲಿ ಛಾಯಾ ಚಿತ್ರಗಳನ್ನು ತೆಗೆದು ಕಡತದಲ್ಲಿ ದಾಖಲಿಸಬೇಕು.

3. ಮಾಹಿತಿ ಹಕ್ಕು ನಿಯಮಗಳ ಪ್ರಕಾರ ಕಾಮಗಾರಿ ಅನುಷ್ಠಾನವಾಗುವ ಸ್ಥಳದಲ್ಲಿ ಕಾಮಗಾರಿಯ ಹೆಸರು, ಅಂದಾಜು ವೆಚ್ಚ, ನಿಗದಿಪಡಿಸಿದ ಸಮಯ, ಆರಂಭದ ದಿನಾಂಕ, ಟೆಂಡರ್‌ನ ಮೊಬಲಗು, ಟೆಂಡರ್‌ದಾರನ ಹೆಸರು, ವಿಳಾಸವನ್ನು ನಮೂದಿಸಲಾದ ಫಲಕವನ್ನು ಸ್ಥಾಪಿಸಬೇಕು.

4 ಪ್ರಗತಿ ವರದಿಯನ್ನು ಸರ್ಕಾರಕ್ಕೆ ಪ್ರತಿ ತಿಂಗಳು ವೆಬ್‌ಸೈಟ್‌ನಲ್ಲಿ ತುಂಬುವ ಮೂಲಕ ಮತ್ತು ಇ–ಮೇಲ್ ಮೂಲಕ ಸಲ್ಲಿಸತಕ್ಕದ್ದು.

5. ಪ್ರಸ್ತುತ ಈ ಲೆಕ್ಕಶೀರ್ಷಿಕೆಯಡಿ ತಾಲ್ಲೂಕು ಪಂಚಾಯತಿಗಳು ಅನುಷ್ಠಾನಗೊಳಿಸಿರುವ ಕಾಮಗಾರಿಗಳನ್ನು ತಿಂಡಿಇಂಜಿಣ ತಿಂಡಿಇ ಟಂಟುಣಂಡುಟಿಂ ಪದ್ದತಿ ಮುಖಾಂತರ ಉಸ್ತುವಾರಿ ಮಾಡಬೇಕಾಗಿದ್ದು, ಈ ಸಂಬಂಧ ಪೂರ್ಣ ಮಾಹಿತಿಯನ್ನು worksoft website ನಲ್ಲಿ ತಪ್ಪದೆ ಅಳವಡಿಸತಕ್ಕದ್ದು. ಈ ಮಾಹಿತಿಯನ್ನು website ನಲ್ಲಿ ಅಳವಡಿಸದಿದ್ದಲ್ಲಿ, ಮುಂದಿನ ಅನುದಾನ ತಡೆಹಿಡಿಯಲಾಗುವುದು.

((ಡಾ: ಜೆ. ರವಿಶಂಕರ್)
ನಿರ್ದೇಶಕರು
ಗ್ರಾಮೀಣ ಮೂಲಭೂತ ಸೌಲಭ್ಯಗಳು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ
ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

| ಅನುಬಂಧ | | |
|---|---|---|
| ಲೆಕ್ಕಶೀರ್ಷಿಕೆ-2515-00-102-0-65 (2515-00-197-1-22)ರಡಿ ಪ್ರಾದೇಶಿಕ ಅಸಮತೋಲನಾ ನಿವಾರಣಾ ಉನ್ನತಾಧಿಕಾರ ಸಮಿತಿ ಗುರುತಿಸಿರುವ ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಕಾಮಗಾರಿಗಳು- SDP ಅಡಿ ಆಯವ್ಯಯದಲ್ಲಿ ತಾಲ್ಲೂಕು ಪಂಚಾಯತಿಗಳಿಗೆಂದು ಒದಗಿಸಿರುವ ಜಿಲ್ಲಾವಾರು ಅನುದಾನದ ವಿವರ. | | |
| ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:96:ಆರ್ಆರ್ಸಿ:2012, ದಿನಾಂಕ:16-5-2012ರ ಲಗತ್ತು. | | |
| | | (ರೂ.ಲಕ್ಷಗಳಲ್ಲಿ) |
| ಕ್ರ. ಸಂ. | ಜಿಲ್ಲೆ | ಹಿಂದುಳಿದ ತಾಲ್ಲೂಕುಗಳಿಗೆ ಆಯವ್ಯಯದಲ್ಲಿ ಒದಗಿಸಿದ ಅನುದಾನ |
| 1 | ಬಾಗಲಕೋಟೆ | 120.81 |
| 2 | ಬೆಂಗಳೂರು (ನಗರ) | 20.88 |
| 3 | ಬೆಂಗಳೂರು (ಗ್ರಾ) | 6.27 |
| 4 | ಬೆಳಗಾವಿ | 148.85 |
| 5 | ಬಳ್ಳಾರಿ | 220.55 |
| 6 | ಬೀದರ್ | 262.45 |
| 7 | ಬಿಜಾಪುರ | 302.02 |
| 8 | ಚಾಮರಾಜನಗರ | 147.33 |
| 9 | ಚಿಕ್ಕಮಗಳೂರು | 72.46 |
| 10 | ಚಿಕ್ಕಬಳ್ಳಾಪುರ | 144.10 |
| 11 | ಚಿತ್ರದುರ್ಗ | 179.60 |
| 12 | ದಕ್ಷಿಣ ಕನ್ನಡ | 0.00 |
| 13 | ದಾವಣಗೆರೆ | 175.42 |
| 14 | ಧಾರವಾಡ | 47.46 |
| 15 | ಗದಗ | 66.88 |
| 16 | ಗುಲ್ಬರ್ಗಾ | 522.67 |
| 17 | ಹಾಸನ | 101.44 |
| 18 | ಹಾವೇರಿ | 114.34 |
| 19 | ಕೊಡಗು | 0.00 |
| 20 | ಕೋಲಾರ | 52.21 |
| 21 | ಕೊಪ್ಪಳ | 218.34 |
| 22 | ಮಂಡ್ಯ | 159.40 |
| 23 | ಮೈಸೂರು | 185.97 |
| 24 | ರಾಮನಗರ | 108.59 |
| 25 | ರಾಯಚೂರು | 330.82 |
| 26 | ಶಿವಮೊಗ್ಗ | 54.30 |
| 27 | ತುಮಕೂರು | 369.64 |
| 28 | ಉಡುಪಿ | 0.00 |
| 29 | ಉತ್ತರ ಕನ್ನಡ | 88.45 |
| 30 | ಯಾದಗೀರ್ | 222.75 |
| ಒಟ್ಟು | | 4444.00 |

**(ಡಾ: ಜೆ. ರವಿಶಂಕರ್)**
ನಿರ್ದೇಶಕರು
ಗ್ರಾಮೀಣ ಮೂಲಭೂತ ಸೌಲಭ್ಯಗಳು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

ಸುತ್ತೋಲೆ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2012-13ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ-4702ರ ವಿಶೇಷ ಅಭಿವೃದ್ಧಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ಪುನರ್‌ಸ್ಥಿತಿ ಮತ್ತು ಪುನಶ್ಚೇತನಕ್ಕಾಗಿ ಜಿಲ್ಲಾ ಪಂಚಾಯತಿಗಳಿಗೆ ಅನುದಾನ ಹಂಚಿಕೆ ಮಾಡುವ ಕುರಿತು.

ಓದಲಾಗಿದೆ : ಸರ್ಕಾರದ ಆದೇಶ ಸಂ:ಗ್ರಾಅಪ:13:ಆಂಆಸ:2012 ಬೆಂಗಳೂರು ದಿನಾಂಕ:2-4-2012

ಪ್ರಸ್ತಾವನೆ:

ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಒಳಪಟ್ಟು 40 ಹೆಕ್ಟೇರ್‌ಗಿಂತ ಕಡಿಮೆ ಆಯಕಟ್ಟು ಇರುವ ಸುಮಾರು 33,000 ಕೆರೆಗಳಿದ್ದು, ಅವುಗಳನ್ನು ಬಹಳ ಹಿಂದೆ ನಿರ್ಮಿಸಿದ್ದು, ಸಧ್ಯ ಬಹುತೇಕ ಕೆರೆಗಳು ದುಸ್ಥಿತಿಯಲ್ಲಿವೆ. ಹಾಗೇಯೇ, ರಾಜ್ಯದಲ್ಲಿ ಬಹುತೇಕ ಕಡೆ ಅಂತರ್ಜಲ ಮಟ್ಟ ಕುಸಿದಿದ್ದು, ಜನವಸತಿ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್, ನೈಟ್ರೇಟ್, ಕಬ್ಬಿಣ ಮತ್ತು ಇತರೆ ಹಾನಿಕಾರಕ ರಾಸಾಯನಿಕಗಳಿಂದ ಕಲುಷಿತತೆ ಹೆಚ್ಚಾಗಿರುತ್ತದೆ. ಅಂತರ್ಜಲ ಮರುಪೂರಣದಿಂದ ಸಮಸ್ಯೆ ಬಹುಮಟ್ಟಿಗೆ ಕಡಿಮೆ ಆಗುವುದು. ಈ ಎರಡೂ ಸಮಸ್ಯೆಗಳನ್ನು ನಿವಾರಿಸುವುದು ಸರಕಾರದ ಉದ್ದೇಶವಾಗಿದೆ. ಪ್ರಸಕ್ತ 2012-13ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ 4702 ರಲ್ಲಿನ ಸಣ್ಣ ನೀರಾವರಿ ಕೆರೆಗಳಿಗೆ ಸಂಬಂಧಿಸಿದಂತೆ, ರೂ.30.00 ಕೋಟಿಗಳ ಅನುದಾನವನ್ನು ರಾಜ್ಯವಲಯದಲ್ಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜ್ಯದಲ್ಲಿನ ಹಿಂದುಳಿದ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಕೆರೆಗಳ ಪುನರ್‌ಸ್ಥಿತಿ ಹಾಗೂ ಪುನಶ್ಚೇತನಕ್ಕಾಗಿ ಯೋಜಿಸಲಾಗಿದೆ. ಈ ಅನುದಾನವು ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ ಸಣ್ಣ ನೀರಾವರಿ ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಮಾತ್ರ ಮೀಸಲಿಡಲಾಗಿದೆ. ಈ ಅನುದಾನದ ಉಪಯುಕ್ತತೆಯು ಪರಿಣಾಮಕಾರಿಯಾಗಿ ಆಗಬೇಕಾದರೆ ಅಭಿವೃದ್ಧಿಪಡಿಸಲು ಕೆರೆಗಳನ್ನು ಜಾಗ್ರತೆ ವಹಿಸಿ ಆಯ್ಕೆ ಮಾಡಿ, ಕೆಲಸಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಸದರಿ ಯೋಜನೆಯು ಉಪಯುಕ್ತತೆ ಕಾಣಬೇಕಾದರೆ ಯೋಜನೆಯನ್ನು ತಾಂತ್ರಿಕವಾಗಿ ವೃತ್ತಿಪರವಾಗಿ ಕೈಗೊಳ್ಳಬೇಕಾಗಿದೆ. ಪ್ರಸಕ್ತ 2012-13ನೇ ಸಾಲಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಲಾದ ರೂ.30.00 ಕೋಟಿಗಳನ್ನು ಡಾ:ಡಿ.ಎಂ. ನಂಜುಂಡಪ್ಪ ರವರ ಪ್ರಾದೇಶಿಕ ಅಸಮತೋಲನಾ ನಿವಾರಣಾ ಉನ್ನತಾಧಿಕಾರದ ಸಮಿತಿಯ ವರದಿಯಲ್ಲಿ ಸೂಚಿಸಿರುವ ಸೂಚ್ಯಾಂಕ ಆಧಾರದ ಮೇಲೆ ಜಿಲ್ಲಾ ಪಂಚಾಯತಿಗಳಿಗೆ ತಾಲ್ಲೂಕುವಾರು ಹಂಚಿಕೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದ್ದರಿಂದ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:87:ಆರ್‌ಆರ್‌ಸಿ:2012, ಬೆಂಗಳೂರು, ದಿನಾಂಕ: 3-7-2012

